ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 20, 2009 ರೂ. 12/-



ಮಾನವತಾವಾದಿ
ಬಿನಾಯಕ್ ಸೇನ್




ವಿಲನ್

ಅಪ'ಶ್ರುತಿ' ಮೂಡಿಸಿದ್ದೇ ಚಂದ್ರ'ಚೋಡ್'



ಮುಸ್ಸಂಜೆಯ ಗೆಳತಿ

ಅಪ್ಪ ಮಗಳ ವಿಕೃತಿ




ಹಾವೇರಿ:
ಪಿಕಲ್
ಮಂಜುಳಾಳ
ಪುಂಡಾಟಿಕೆ!



ಅರಳುವ ಮೊದಲೇ ಕಮರಿದ
ನೇಪಾಳಿ ಪ್ರಜಾತಂತ್ರ



ಮೈಸೂರು: ವಿಕೃತ ಕಾಮಿ
ಶ್ರೀಹರಿ ಪಾರಕ್



SSLC ಫಲಿತಾಂಶವೆಂಬ ಕನ್ನಡಿಯಲ್ಲಿ

SSLC ಫಲಿತಾಂಶ ಹೊರಬಿದ್ದಿದೆ. "ಎಂದಿನಂತೆ ಬಾಲಕಿಯರದ್ದೇ ಮೇಲುಗೈ". ಮಾತ್ರವಲ್ಲ "ಎಂದಿನಂತೆ ಬೀದರ್, ಚಿಕ್ಕಬಳ್ಳಾಪುರ, ಕೋಲಾರಗಳು ಫಲಿತಾಂಶದಲ್ಲಿ ಹಿಂದೆ". ಇದು ಈ ಬಾರಿ SSLC ಫಲಿತಾಂಶದ ಸಾರಾಂಶವನ್ನು ಮಾಧ್ಯಮಗಳು ಬಿತ್ತರಿಸಿದ ರೀತಿ. ಇದೇ ಹೆಡ್‌ಲೈನ್ ಹೋದ ವರ್ಷವೂ ಇತ್ತು. ಪ್ರಾಯಶಃ ಮುಂದಿನ ವರ್ಷವೂ ಇದೇ ಇರುತ್ತದೆ. ಅಂಕಿಅಂಶಗಳಲ್ಲಿ ಅಲ್ಲಲ್ಲಿ ವ್ಯತ್ಯಾಸವಿರಬಹುದೇ ವಿನಃ ಒಟ್ಟು ಫಲಿತಾಂಶದ ಸ್ವರೂಪದಲ್ಲೇ ಹೆಚ್ಚೇನೂ ವ್ಯತ್ಯಾಸ ವಿರುವುದಿಲ್ಲ. ಹುಡುಗಿಯರೇ ಮೇಲುಗೈ ಸಾಧಿಸುತ್ತಾರೆ. ಉಡುಪಿ, ಮಂಗಳೂರು, ಬೆಂಗಳೂರುಗಳು ಮೊದಲ ಐದು ಸ್ಥಾನಕ್ಕೆ ಪೈಪೋಟಿ ನಡೆಸಿದರೆ, ಯಥಾಪ್ರಕಾರ, ಬೀದರ್, ಕೋಲಾರ, ಚಿಕ್ಕಬಳ್ಳಾಪುರಗಳು ಕಡೆಯ ಐದು ಸ್ಥಾನಗಳಿಗೆ ಪೈಪೋಟಿ ನಡೆಸುತ್ತಿರುತ್ತವೆ. ಕಳೆದೆರಡು ಅಥವಾ ಮೂರು ದಶಕಗಳಲ್ಲಿ ಈ ಮಾದರಿಯಲ್ಲಿ ಏನೂ ವ್ಯತ್ಯಾಸ ಕಂಡುಬರುತ್ತಿಲ್ಲ. ಎಂದಿನಂತೆ ನಪಾಸಾದವರಲ್ಲಿ ಬಹಳಷ್ಟು ಮಂದಿ (ಈ ಬಾರಿ ಶೇ.80ಕ್ಕಿಂತ ಹೆಚ್ಚು) ಗಣಿತದಲ್ಲಿ ಫೇಲಾಗಿದ್ದಾರೆ.

ಈ ಬಾರಿಯ ಫಲಿತಾಂಶದಲ್ಲಿ ಕೆಲವು ಆಸಕ್ತಿದಾಯಕ ವಿಷಯಗಳೂ ಇವೆ. ರಾಜ್ಯದ ನೂರಾರು ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶಗಳು ಬಂದಿವೆ. ಅದರಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆಯೂ ಅಧಿಕವಾಗಿಯೇ ಇದೆ. ಉದಾಹರಣೆಗೆ ಖಾಸಗಿ ಶಾಲೆಗಳಿಗೆ ಹೆಸರುವಾಸಿಯಾದ ಮಂಗಳೂರು ಜಿಲ್ಲೆಯ 355 ಶಾಲೆಗಳಲ್ಲಿ 28 ಶಾಲೆಗಳು ಶೇ.100ರಷ್ಟು ಫಲಿತಾಂಶವನ್ನು ಸಾಧಿಸಿವೆ. ಅದರಲ್ಲಿ ಎರಡು ಸರ್ಕಾರಿ ಶಾಲೆಗಳಿವೆ. ಶೇ.80ಕ್ಕಿಂತ ಜಾಸ್ತಿ ಫಲಿತಾಂಶ ಪಡೆದಿರುವ 192 ಶಾಲೆಗಳಲ್ಲಿ 39 ಸರ್ಕಾರಿಶಾಲೆಗಳಿವೆ. 13 ಶಾಲೆಗಳಲ್ಲಿ ಶೇ.40ಕ್ಕಿಂತ ಕಡಿಮೆ ಫಲಿತಾಂಶ ಬಂದಿದೆ. ಅದರಲ್ಲಿ ಖಾಸಗಿ ಶಾಲೆಗಳು 6, ಸರ್ಕಾರಿ ಶಾಲೆಗಳು 7. ಅಂದರೆ ಸರ್ಕಾರಿ ಶಾಲೆಗಳ ಫಲಿತಾಂಶ ಕಳಪೆಯೇನಲ್ಲ. ಹಾಗೆಯೇ ಖಾಸಗಿ ಶಾಲೆಗಳೆಲ್ಲದರ ಫಲಿತಾಂಶ ಅತ್ಯುತ್ತಮವಾಗಿ ಏನೂ ಇಲ್ಲ.

ಇದಲ್ಲದೆ ಒಟ್ಟಾರೆ ರಾಜ್ಯದಲ್ಲಿ 35 ಶಾಲೆಗಳಲ್ಲಿ ಶೂನ್ಯ ಫಲಿತಾಂಶ ಬಂದಿದೆ. ಅದರಲ್ಲಿ ಬೆಳಗಾವಿಯ ಒಂದೇ ಒಂದು ಸರ್ಕಾರಿ ಶಾಲೆಯನ್ನು ಬಿಟ್ಟರೆ ಶೂನ್ಯ ಸಂಪಾದನೆ ಮಾಡಿದ ಉಳಿದ ಶಾಲೆಗಳಲ್ಲಿ 32 ಅನುದಾನರಹಿತ ಖಾಸಗಿ ಶಾಲೆಗಳು ಮತ್ತು 2 ಅನುದಾನಸಹಿತ ಖಾಸಗಿ ಶಾಲೆಗಳಿವೆ. ಅದೇ ರೀತಿ ಅಕೌಂಟೆಂಟರ ಮಕ್ಕಳ ಜೊತೆಜೊತೆಗೆ ಆಟೋ ಡ್ರೈವರ್, ಕಾರ್ ಡ್ರೈವರ್‌ಗಳ ಮಕ್ಕಳೂ ಸಹ ಶೇ.95ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದಿದ್ದಾರೆ.

ಏನಿಲ್ಲವೆಂದರೂ ಈ ಫಲಿತಾಂಶಗಳು ಖಾಸಗಿ ಶಾಲೆಗಳು ಶ್ರೇಷ್ಠ- ಸರ್ಕಾರಿ ಶಾಲೆಗಳು ಕನಿಷ್ಠ ಎಂಬ ಮಿಥ್ಯೆಯನ್ನಾದರೂ ಒಡೆದು ಹಾಕಿವೆ. ಸರ್ಕಾರಿ ಶಾಲೆಗಳು ಶೇ.100ರಷ್ಟು ಫಲಿತಾಂಶ ಪಡೆಯುವುದು ಸಾಮಾನ್ಯ ವಿಷಯವಲ್ಲ. ಉತ್ತಮ ಶಿಕ್ಷಣವೆಂದರೆ ದುಬಾರಿ ಬೆಲೆಯ ಖಾಸಗಿ ಶಾಲೆಯ ಶಿಕ್ಷಣವೆನ್ನುವುದೇ ಎಲ್ಲರ ತಲೆಯಲ್ಲಿರುವಾಗ ಸರ್ಕಾರಿ ಶಾಲೆಗೆ ಸೇರುವ ಮಕ್ಕಳು ಬಡವರ ಮಕ್ಕಳೇ ಆಗಿರುತ್ತಾರೆ. ಈ ದೇಶದಲ್ಲಿ ಬಡವರು ಅಂದರೆ ದಲಿತ-ಹಿಂದುಳಿದ ಜಾತಿಗಳ ಕೂಲಿ ಕಾರ್ಮಿಕರು; ನಗರ ಪ್ರದೇಶದಲ್ಲಿ ದಲಿತ, ಮುಸ್ಲಿಂ, ಹಿಂದುಳಿದ ಜಾತಿಗಳಿಗೆ ಸೇರಿದ ಪೌರ ಕಾರ್ಮಿಕ, ಹಮಾಲಿ, ಕೈಗೂಲಿ, ಹೂ-ತರಕಾರಿ ಮಾರುವ, ವಾಹನ ಚಾಲಕ ಇನ್ನಿತ್ಯಾದಿ ದೈಹಿಕ ಶ್ರಮ ಮಾಡಿಯೇ ಬದುಕುವವರು. ಇವರು ಅನಕ್ಷರಸ್ಥರು ಅಥವಾ ಹೆಚ್ಚು ಓದಿರುವುದಿಲ್ಲ. ಅದ್ದರಿಂದಲೇ ಅವರ ಮನೆಯಲ್ಲಿ ಮಕ್ಕಳಿಗೆ ಓದಲು ತಕ್ಕ ವಾತಾವರಣವಿರುವುದಿಲ್ಲ. ಜೊತೆಗೆ ಅಪ್ಪ-ಅಮ್ಮಂದಿರ ದುಡಿಮೆಗೆ ಮಕ್ಕಳೂ ಕೈ ಹಚ್ಚ ಬೇಕಾಗುತ್ತದಾದ್ದರಿಂದ ಓದಲು ಸಿಗುವ ಸಮಯವೂ ಕಡಿಮೆ. ಇವೆಲ್ಲಾ ಅನಾನುಕೂಲತೆಯ ನಡುವೆ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಪಾಸಾಗುವುದೆಂದರೆ ಅನುಕೂಲಸ್ಥರ ಮನೆಯ ಮಕ್ಕಳು ರ್‍ಯಾಂಕು ತೆಗೆಯುವುದಕ್ಕಿಂತ ದೊಡ್ಡದು!

ಇದು ಸಾಧ್ಯವಾಗ ಬೇಕೆಂದರೆ ಮಕ್ಕಳ ಪರಿಶ್ರಮದ ಜೊತೆಗೆ ಶಾಲೆಯ ಟೀಚರ್‌ಗಳ ಆಸಕ್ತಿ ಮತ್ತು ಮುತುವರ್ಜಿಗಳೂ ದೊಡ್ಡ ಪಾತ್ರ ವಹಿಸುತ್ತವೆ. ಇವೆರಡೂ ಕೂಡಿಬಂದಾಗ ಮಾತ್ರ ಸರ್ಕಾರಿ ಶಾಲೆಗಳಲ್ಲಿ ಶೇ.100ರಷ್ಟು ಫಲಿತಾಂಶ ಬರಲು ಸಾಧ್ಯ. ಖಾಸಗಿ ಶಾಲೆಗಳಲ್ಲಿ ಇದೇ ರೀತಿ ಗಮನ ನೀಡಲು ಹಣದ ಪ್ರೇರಣೆ ಇದ್ದರೆ ಸರ್ಕಾರಿ ಶಾಲೆಗಳಲ್ಲಿ ಕರ್ತವ್ಯದ ಪ್ರೇರಣೆಯಿದ್ದರೆ ಮಾತ್ರ ಗಮನ ನಿಡಲು ಸಾಧ್ಯ. ಹೀಗಾಗಿ ಒಂದು ಸರ್ಕಾರಿ ಶಾಲೆ ಶೇ.100ರಷ್ಟು ಫಲಿತಾಂಶ ಪಡೆಯುವುದು ಕರ್ತವ್ಯನಿಷ್ಠ ಸರ್ಕಾರಿ ಉಪಾಧ್ಯಾಯರ ಸಂಖ್ಯೆ ಹೆಚ್ಚುತ್ತಿರುವುದನ್ನೂ ಸೂಚಿಸುತ್ತದೆ. ಇದರರ್ಥ ಎಲ್ಲಾ ಸರ್ಕಾರಿ ಶಾಲೆಗಳು ಅತ್ಯುತ್ತಮವಾಗಿವೆಯೆಂದೋ, ಎಲ್ಲಾ ಖಾಸಗಿ ಶಾಲೆಗಳು ಕೀಳಾಗಿವೆಯೆಂದೋ ಅಲ್ಲ. ವ್ಯತ್ಯಾಸವಿರುವುದು ಲಾಭ ಪ್ರೇರಿತ ಖಾಸಗಿ ಮುತುವರ್ಜಿಗಳಿಗೂ ಮತ್ತು ಶುದ್ಧ



ಚಾರ್ವಾಕ

» ಶಿವಸುಂದರ್

ಕಾಳಜಿಯ ಸಾರ್ವಜನಿಕ ಕರ್ತವ್ಯಪ್ರಜ್ಞೆಯ ನಡುವೆ! ಹೀಗಾಗಿ ಉತ್ತಮ ಸರ್ಕಾರಿ ಶಾಲೆಗಳ ಪಟ್ಟಿಯಲ್ಲಿ ಸರ್ಕಾರಿ ಶಾಲೆಗಳ ಸಂಖ್ಯೆ ಹೆಚ್ಚಿದಷ್ಟು ಸಮಾಜದಲ್ಲಿ ಶುದ್ಧ ಕಾಳಜಿ ಮತ್ತು ಕರ್ತವ್ಯ ಪ್ರಜ್ಞೆಯುಳ್ಳ ಉಪಾಧ್ಯಾಯರ ಸಂಖ್ಯೆ ಹೆಚ್ಚುತ್ತಿದೆಯೆಂಬುದನ್ನೂ ಸೂಚಿಸುತ್ತದಾದ್ದರಿಂದ ಈ ಬಾರಿಯ SSLC ಫಲಿತಾಂಶ ಬೇರೊಂದು ರೀತಿಯಲ್ಲಿ ಸಮಾಧಾನ ತರುತ್ತದೆ.

ಈ ಬಾರಿಯ SSLC ಫಲಿತಾಂಶ ಈ ನಾಡಿನ ಮತ್ತೊಂದು ವಿದ್ಯಮಾನಕ್ಕೂ ಕೈಗನ್ನಡಿಯಾಗಿದೆ. ಪ್ರಾರಂಭದಲ್ಲೇ ಗಮನಿಸಿದಂತೆ ಕಳೆದೆರಡು ದಶಕಗಳಿಂದ ಶೈಕ್ಷಣಿಕವಾಗಿ ಅಭಿವೃದ್ಧಿ ಸಾಧಿಸಿದ ಜಿಲ್ಲೆಗಳು, ಅದನ್ನು ಹಾಗೆಯೇ ಕಾಯ್ದುಕೊಂಡು ಹೋಗಿದ್ದರೆ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದದ ಜಿಲ್ಲೆಗಳೂ ಸಹ ಹಾಗೆಯೇ ಮುಂದುವರೆದಿವೆ. ಕೆಲವು ಜಿಲ್ಲೆಗಳಲ್ಲಿ ಕಳೆದೆರಡು ದಶಕಗಳಲ್ಲಿ ನೀರಾವರಿ, ಉದ್ದಿಮೆಗಳಂತಹ ಅಭಿವೃದ್ಧಿ ಯೋಜನೆಗಳು ಜಾರಿಗೆ ಬಂದು ಒಟ್ಟಾರೆ ಜಿಲ್ಲೆಯ ತಲಾವಾರು ಆದಾಯ ಹೆಚ್ಚಿದೆ. ಆದರೆ ಅದು ಆ ಜಿಲ್ಲೆಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಮಾಡಿಲ್ಲ. ಉದಾಹರಣೆಗೆ ನಾಡಿನ ತಲಾವಾರು ಆದಾಯದಲ್ಲಿ ಬೆಂಗಳೂರು ನಗರಕ್ಕಿಂತ ಹೆಚ್ಚು ಆದಾಯವನ್ನು ಹೊಂದಿರುವುದು ಬೆಂಗಳೂರು ಗ್ರಾಮಾಂತರ (ರಾಮನಗರ) ಜಿಲ್ಲೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ - ಶಿಕ್ಷಣ, ಆರೋಗ್ಯ ಇನ್ನಿತ್ಯಾದಿ ಮಾನದಂಡಗಳಲ್ಲಿ - SSLC ಫಲಿತಾಂಶದಲ್ಲಿ ರಾಮನಗರ ಜಿಲ್ಲೆಯ ಸ್ಥಾನ ಕೊನೆಯ ಸ್ಥಾನ ಪಡೆದಿರುವ ಬೀದರ್‌ಗಿಂತ ಸ್ವಲ್ಪ ಮೇಲಷ್ಟೆ! ಅದೇ ರೀತಿ ಚಿಕ್ಕಬಳ್ಳಾಪುರದಲ್ಲಿ ಈಗ ಎಕರೆಗೆ ಲಕ್ಷಾಂತರ ರೂಪಾಯಿ ಮೌಲ್ಯ ಬಂದಿದ್ದರೂ, ರಸ್ತೆ ಬದಿಯಲ್ಲಿ ಭೂಮಿ ಪಡೆದವರು ಕೋಟ್ಯಾಂತರ ರೂಪಾಯಿ ಒಡೆಯರಾದರೂ SSLC ಫಲಿತಾಂಶದಲ್ಲಿ ಚಿಕ್ಕಬಳ್ಳಾಪುರದ ಸ್ಥಾನ ಕೆಳಗಿನಿಂದ ಮೂರನೆಯದು. ಹೋದ ವರ್ಷವೂ ಅಷ್ಟೆ. ಮುಂದಿನ ವರ್ಷವೂ ಅಷ್ಟೆ. ಅದೇ ರೀತಿ ಬೀದರ್.

ಹಾಗೆ ನೋಡಿದರೆ ಬೀದರ್ ಜಿಲ್ಲೆ ರಾಯಚೂರಿನಷ್ಟು ಹಿಂದುಳಿದಿಲ್ಲ. ರಾಯಚೂರು ಸೊಮಾಲಿಯಾವನ್ನು ನೆನಪಿಗೆ ತಂದರೆ ಬೀದರ್ ಇದ್ದಿದ್ದರಲ್ಲಿ ವಾಣಿಜ್ಯ ಬೆಳೆಯನ್ನು ಬೆಳೆಯುತ್ತಾ ಕಾಸು ಕಾಣುತ್ತಿರುವ ಜಿಲ್ಲೆ. 2006ರಲ್ಲಿ ಅತಿ ಹೆಚ್ಚು ಕಬ್ಬು ಬೆಳೆಗಾರರು ಆತ್ಮಹತ್ಯೆ ಮಾಡಿಕೊಂಡ ಜಿಲ್ಲೆಯೂ ಇದೇ ಆದರೂ ಒಳ್ಳೆ ಬೆಲೆ ಬಂದಾಗ ಸ್ವಲ್ಪ ಕಾಸನ್ನೂ ಕಂಡಿದ್ದಾರೆ. ಆದರೂ SSLC ಫಲಿತಾಂಶದಲ್ಲಿ ಬೀದರ್‌ದು ಯಾವಾಗಲೂ ಕಡೆಯ ಸ್ಥಾನವೇ! SSLC ಫಲಿತಾಂಶವನ್ನು ಶೈಕ್ಷಣಿಕ ಅಭಿವೃದ್ಧಿಯ ಸೂಚಕ ಎಂದುಕೊಂಡರೆ ಆರ್ಥಿಕ ಅಭಿವೃದ್ಧಿ ತನ್ನಂತೆ ತಾನೆ ಶೈಕ್ಷಣಿಕ ಅಭಿವೃದ್ಧಿಯನ್ನು ತಂದುಕೊಡುವುದಿಲ್ಲ ಎಂಬುದನ್ನೂ ಸಹ ಈ ಬಾರಿಯ ಫಲಿತಾಂಶಗಳು ಸೂಚಿಸುತ್ತದೆ. ಶೈಕ್ಷಣಿಕ ಅಭಿವೃದ್ಧಿಯೂ ಸಂಭವಿಸಲು ಸರ್ಕಾರ ಈ ಜಿಲ್ಲೆಯ ಶಿಕ್ಷಣ ಕ್ಷೇತ್ರದಲ್ಲಿ ವಿಶೇಷ ಹೂಡಿಕೆಯನ್ನು ಮಾಡಬೇಕಾಗುತ್ತದೆ. ಮಕ್ಕಳನ್ನು ಶಾಲೆಗೆ ಕಳಿಸುವ, ಕಲಿಸುವ ಉತ್ತೇಜನವನ್ನು ನೀಡುವಂಥ ಯೋಜನೆಗಳನ್ನು ರೂಪಿಸಬೇಕಾಗುತ್ತದೆ. ವಿಶೇಷ ಗಮನ ಕೊಟ್ಟು ಕಲಿಸುವಷ್ಟು ಮತ್ತು ಕಲಿಸುವಂಥ ಉಪಾಧ್ಯಾಯರುಗಳನ್ನು ಒದಗಿಸಬೇಕಾಗುತ್ತದೆ. ಅಂದರೆ ಲಾಭದ ಆಸೆಯಿಲ್ಲದೆ ಜನಕಲ್ಯಾಣದ ದೃಷ್ಟಿಯಿಂದ ಶಿಕ್ಷಣದಲ್ಲಿ ಹೂಡಿಕೆ ಮಾಡಬೇಕಾಗುತ್ತದೆ.

ಆದರೆ ಇಡೀ ಶಿಕ್ಷಣವನ್ನೇ ಖಾಸಗೀಕರಿಸಲು ಹೊರಟಿರುವ ಸರ್ಕಾರಗಳು ಅದನ್ನು ಮಾಡಲು ಸಾಧ್ಯವೇ? ■

No Comments

"ಮುಖ್ಯಮಂತ್ರಿಗಳ ಕಾರ್ಯದರ್ಶಿ ತೆಗೆದುಕೊಂಡು ಹೋಗಿದ್ದ ಸೂಟ್‌ಕೇಸಿನಲ್ಲಿ ಇದ್ದದ್ದು ಕೇವಲ ಬಟ್ಟೆಗಳೇ? ಅದೇ ಟ್ರೈನಿನಲ್ಲಿ ಹೋಗಿದ್ದ ಮುಖ್ಯ ಕಾರ್ಯದರ್ಶಿ ಸುಧಾಕರರಾವ್ ಹಿಂತಿರುಗಿ ಬಂದದ್ದೇಕೆ? ಚುನಾವಣಾ ಅಧಿಕಾರಿಗಳು ಎದುರಾದ ತಕ್ಷಣ ನಂದಕುಮಾರ್ ಚೀಟಿ ನುಂಗಿದ್ದೇಕೆ?"

ಹೆಚ್.ಡಿ. ಕುಮಾರಸ್ವಾಮಿ.

"ನಾವು ಬಿಜೆಪಿ ಸರ್ಕಾರಕ್ಕೆ ಬೆಂಬಲ ನೀಡುವಾಗ ಅವರ ಪಕ್ಷಕ್ಕೆ ಬೆಂಬಲಿಸುತ್ತೇವೆಂದೋ ಅಥವಾ ಆ ಪಕ್ಷಕ್ಕೆ ಪ್ರಚಾರ ಮಾಡುತ್ತೇವೆಂದೋ ಹೇಳಿರಲಿಲ್ಲ."

ವರ್ತೂರ್ ಪ್ರಕಾಶ್

"ವಿದೇಶಿ ಶಕ್ತಿಗಳಿಗೆ ತಲೆ ಮಣಿಸುವುದಕ್ಕಿಂತ ರಾಜೀನಾಮೆ ಕೊಡುವುದೇ ಲೇಸೆಂದು ನಾನು ತಿಳಿಯುತ್ತೇನೆ. ನಾವು ನೆರೆಹೊರೆಯವರ ಜೊತೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳಲು ಬಯಸುತ್ತೇವೆ. ಆದರೆ ದಕ್ಷಿಣದ ನೆರೆಯಲ್ಲಿರುವ ದೇಶ ಮಾಡುತ್ತಿರುವ ಮಧ್ಯಪ್ರವೇಶವನ್ನು ನಾವು ಸಹಿಸಲು ಸಾಧ್ಯವಿಲ್ಲ."

ಪ್ರಚಂಡ, ನೇಪಾಳದ ಮಾವೋವಾದಿ ಪ್ರಧಾನಿ

"ಅಸ್ತಿತ್ವದಲ್ಲಿಲ್ಲದ 120ಕ್ಕೂ ಹೆಚ್ಚು ಬೇನಾಮಿ ಸಂಘಗಳ ಹೆಸರಲ್ಲಿ ಸಾವಯವ ಕೃಷಿಯ ಬಾಬತ್ತಿನಲ್ಲಿದ್ದ 50 ಕೋಟಿ ರೂ.ವನ್ನು ಆರೆಸ್ಸೆಸ್‌ಗೆ ನೀಡಲಾಗಿದೆ."

ಜೆಡಿಎಸ್ ಪತ್ರಿಕಾ ಹೇಳಿಕೆ

"ಚುನಾವಣೆಯ ನಂತರ ಇರುವುದು ಎರಡೇ ಸಾಧ್ಯತೆಗಳು. ಒಂದು ಕಾಂಗ್ರೆಸ್ ನೇತೃತ್ವದ ಸರ್ಕಾರ ಅಥವಾ ಕಾಂಗ್ರೆಸ್ ಬೆಂಬಲಿತ ಸರ್ಕಾರ."

ಶರದ್ ಪವಾರ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಈ ವರ್ಷ ಬೀಜ-ಗೊಬ್ಬರಗಳ ದಾಸ್ತಾನು ಸಾಕಷ್ಟಿದೆ. ರೈತರು ಇದಕ್ಕಾಗಿ ಪರದಾಡುವ ಅಗತ್ಯವಿಲ್ಲ."

ಯಡಿಯೂರಪ್ಪ

"ಈ ಚುನಾವಣೆಯಲ್ಲಿ ನೇರ ಹಣಾಹಣಿ ಇರುವುದು ಕಾಂಗ್ರೆಸ್ ಮತ್ತು ತೃತೀಯ ರಂಗಗಳ ನಡುವೆ. ಎನ್‌ಡಿಎ ಮೂರನೇ ಸ್ಥಾನಕ್ಕೆ ಹೋಗಲಿದೆ."

ಬಿ.ಕೆ. ಹರಿಪ್ರಸಾದ್

"ಮಸೀದಿಯನ್ನು ಬೀಳಿಸುವ ವಿಷಯವನ್ನು ನಮಗೆ ಯಾರೂ ಹೇಳಿರಲಿಲ್ಲ, ನಮ್ಮನ್ನು ಕತ್ತಲಲ್ಲಿಟ್ಟಿದ್ದರು."

ಉಮಾ ಭಾರತಿ

"ಅಮೆರಿಕ ಸೇನೆ ಇರಾಕಿನಿಂದ ಹಿಂತಿರುಗಲು ನಾವು ಕೊಟ್ಟಿರುವ ಗಡುವನ್ನು ವಿಸ್ತರಿಸಲು ಸಾಧ್ಯವಿಲ್ಲ."

ಇರಾಕ್ ಸರ್ಕಾರದ ವಕ್ತಾರ

"ಮಸೀದಿ, ಮಂದಿರ ಕಟ್ಟುವವರ ಬಗ್ಗೆ ನನ್ನ ಆಕ್ಷೇಪವಿಲ್ಲ. ಆದರೆ ನನ್ನ ಆದ್ಯತೆ ಮಾನವ ಮಂದಿರ ನಿರ್ಮಾಣಕ್ಕೆ."

ಶತ್ರುಘ್ನ ಸಿನ್ಹಾ, ನಟ, ಬಿಜೆಪಿ ಅಭ್ಯರ್ಥಿ

ಕಾಂಗ್ರೆಸ್ ಹುತ್ತ, ಬಿಜೆಪಿ ಹಾವು?

"ಕಾಂಗ್ರೆಸ್‌ನ ಮಾಜಿ ಶಾಸಕ ಚಂದ್ರಶೇಖರ್ ಬಸವನಗುಡಿಯನ್ನು ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ಈಗ ಆ ಹೆಸರನ್ನು ತಾವು ಕಸಿಯಬೇಕೆಂದು ಲಂಡನ್ ಮಾದರಿ ಅಭಿವೃದ್ಧಿಗೆ ಬಿಜೆಪಿ ಸರ್ಕಾರ ಬಸವನಗುಡಿಯನ್ನು ಆಯ್ಕೆ ಮಾಡಿಕೊಂಡಿದೆ."

ಕಾಂಗ್ರೆಸ್‌ನ ಮಾಜಿ ಮೇಯರ್ ರಾಮಚಂದ್ರಪ್ಪ

ಎಲ್ಲಾ ಮಾಯವೋ ಶಿವನೇ, ಎಲ್ಲಾ ಮಾಯವೋ!

"ಯುಪಿಎಗೆ ಎಡಪಕ್ಷಗಳು ಬೆಂಬಲ ಕೊಡುವುದೇ ಇಲ್ಲ ಎಂದೇನೂ ಅಲ್ಲ."

- ಸೀತಾರಾಂ ಯೆಚೂರಿ

"ಎಡಪಕ್ಷಗಳು ಜೆಡಿಯುನ ಹಳೇ ಸ್ನೇಹಿತರು."

- ನಿತೀಶ್ ಕುಮಾರ್

ಖಾಸಗಿಯೇ ಮೇಲೆಂಬುವರು ಇತ್ತ ಕೇಳಿ!

"ಈ ಬಾರಿಯ 10ನೇ ತರಗತಿಯ ಪರೀಕ್ಷೆಯಲ್ಲಿ ರಾಜ್ಯಾದ್ಯಂತ 35 ಶಾಲೆಗಳಲ್ಲಿ ಸೊನ್ನೆ ಫಲಿತಾಂಶ ಬಂದಿದೆ. ಅದರಲ್ಲಿ 32 ಖಾಸಗಿ ಅನುದಾನ ರಹಿತ ಶಾಲೆಗಳು, 2 ಖಾಸಗಿ ಅನುದಾನಿತ ಶಾಲೆಗಳು ಮತ್ತು ಒಂದು ಮಾತ್ರ ಸರ್ಕಾರಿ ಶಾಲೆ."

ಎಸ್.ಎಸ್.ಎಲ್.ಸಿ ಪರೀಕ್ಷಾ ಮಂಡಳಿ

ಪಾರ್ಟಿ ವಿದ್ ಡಿಫರೆನ್ಸ್ ಅಂದ್ರೆ ಇದೇನಾ!


"ಬಿಜೆಪಿಯ ಮೈಸೂರು ಸಂಸದ ವಿಜಯ್‌ಶಂಕರ್‌ರವರು 2004-2009ರ ನಡುವೆ ತಮ್ಮ ಆಸ್ತಿಪಾಸ್ತಿಗಳನ್ನು ಶೇ.6,500ರಷ್ಟು ಹೆಚ್ಚಿಸಿಕೊಂಡಿದ್ದಾರೆ."

ಆಯೋಗಕ್ಕೆ ಸಲ್ಲಿಸಿರುವ ಪಟ್ಟಿಯನ್ನು ಅಧ್ಯಯನ ಮಾಡಿರುವ ಸ್ವತಂತ್ರ ಸಂಸ್ಥೆಯೊಂದರ ವರದಿ

ಚಿಂತಕರ ಚಾವಡಿ

ಬಿನಾಯಕ್ ಸೇನ್‌ಗೂ ಜಾಮೀನು ಸಿಗದೆಂದರೆ ಅದರ ಅರ್ಥವೇನು?

"ಭಿನ್ನಮತಕ್ಕೆ ಅವಕಾಶ ಕಲ್ಪಿಸಿರುವುದರಿಂದಲೇ ದೇಶದ ಪ್ರಜಾತಂತ್ರದ ಸ್ವರೂಪ ಗಟ್ಟಿಯಾಗಿ ನಿಂತಿದೆ. ಅಭಿಪ್ರಾಯ ಭೇದಕ್ಕೆ ಸೂಕ್ತ ಬೆಲೆ ಸಿಗುವುದೇ ಎನ್ನುವುದಕ್ಕಿಂತ ಹೆಚ್ಚಾಗಿ ಭಿನ್ನಮತಕ್ಕೆ ಪ್ರಜಾಸತ್ತೆಯಲ್ಲಿ ಅವಕಾಶವಿಲ್ಲವೇ ಎನ್ನುವ ಪ್ರಶ್ನೆ ಈಗ ಉದ್ಭವಿಸಿದೆ. ಬಿನಾಯಕ್ ಸೇನ್ ಮತ್ತು ನಕ್ಸಲೀಯರನ್ನು ಒಂದೇ ತಕ್ಕಡಿಯಲ್ಲಿ ತೂಗಬೇಕಿಲ್ಲ. ಇಬ್ಬರೂ ಸಮಾನತೆಯ ಪ್ರತಿಪಾದಕರು. ಆದರೆ ಆಯ್ದುಕೊಂಡ ಮಾರ್ಗಗಳು ಬೇರೆ. ಬಿನಾಯಕ್ ಸೇನ್ ವೃತ್ತಿಯಲ್ಲಿ ವೈದ್ಯ. ಬರಿಗಾಲಲ್ಲಿ ತಿರುಗುವ ಈ ವೈದ್ಯ ಛತ್ತೀಸ್‌ಘಡದ ಆದಿವಾಸಿಗಳ ಬಡತನವ ಕಂಡು ಮಮ್ಮಲ ಮರುಗಿದವರು. ಈ ಕಾಯಿಲೆಯನ್ನು ವಾಸಿ ಮಾಡಲು ಕೇವಲ ಔಷಧ ಮಾತ್ರ ಸಾಲುವುದಿಲ್ಲ ಎಂದು ಭಾವಿಸಿದ ವೈದ್ಯನೊಬ್ಬನ ಮೇಲೆ ಸುಳ್ಳು ಆರೋಪ ಹೊರಿಸಿ ಜೈಲಿನ ಸರಳುಗಳ ಹಿಂದೆ ದೂಡಿರುವುದು ನಿಜಕ್ಕೂ ಕಳವಳಕಾರಿ."



ಕುಲದೀಪ್ ನಯ್ಯರ್

ಬಿನಾಯಕ್ ಸೇನ್ ಎಂಬ ಮಾನವತಾವಾದಿ



ಕಂಡಹಾಗೆ

■ ಗೌರಿ ಲಂಕೇಶ್

ಇದೇ ಮೇ 14 ಕ್ಕೆ ಡಾ. ಬಿನಾಯಕ್ ಸೇನ್ ಎಂಬ ಮಾನವತಾವಾದಿಯನ್ನು ಛತ್ತೀಸ್‌ಗಢ ರಾಜ್ಯದ ಸರ್ಕಾರ ವಿನಾಕಾರಣ ಜೈಲಿಗೆ ದೂಡಿ ಎರಡು ವರ್ಷಗಳಾಗುತ್ತದೆ. ಈ ಎರಡು ವರ್ಷಗಳಲ್ಲಿ ಅದೆಷ್ಟೋ ರಾಜಕಾರಣಿಗಳು, ಚಿತ್ರ ತಾರೆಯರು, ಗೂಂಡಾಗಳು ಕೊಲೆ, ಹಲ್ಲೆ, ಗಲಭೆ ಇತ್ಯಾದಿ ಆರೋಪಗಳನ್ನು ಹೊತ್ತಿದ್ದರೂ ಆರಾಮವಾಗಿ ಜಾಮೀನು ಪಡೆದು ಸ್ವತಂತ್ರವಾಗಿ ಮೆರೆಯುತ್ತಿದ್ದಾರೆ. ಅಷ್ಟೇ ಅಲ್ಲ, ಅವರಲ್ಲಿ ಅದೆಷ್ಟೋ ಜನ ಚುನಾವಣೆಗಳಲ್ಲಿ ಸ್ಪರ್ಧಿಸಿ, ಸದ್ಯದಲ್ಲೇ ಸಂಸದರಾಗುವ ಕನಸನ್ನೂ ಕಾಣುತ್ತಿದ್ದಾರೆ. ಆದರೆ ಯಾವ ತಪ್ಪೂ ಮಾಡದ, ಬದಲಾಗಿ ಬಡಜನರಿಗಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿದ್ದ, ಮಾನವ ಹಕ್ಕುಗಳಿಗಾಗಿ ದನಿ ಎತ್ತುತ್ತಿದ್ದ ಬಿನಾಯಕ್ ಸೇನ್ ಎಂಬ ತ್ಯಾಗಜೀವಿ ಜೈಲಿನಲ್ಲಿ ಕೊಳೆಯುತ್ತಿದ್ದಾರೆ.


ಬಿನಾಯಕ್ ಸೇನ್‌ರಂತೆ ಇಂದು ದೇಶದಾದ್ಯಂತ ಸಾವಿರಾರು ಅಮಾಯಕರು, ನಿರಪರಾಧಿಗಳು ನಮ್ಮ ಸರ್ಕಾರಗಳ ಕೆಂಗಣ್ಣಿಗೆ ಗುರಿಯಾಗಿ ಜೈಲುವಾಸ ಅನುಭವಿಸುತ್ತಿದ್ದಾರೆ. ಅವರೆಲ್ಲರ ಪ್ರತೀಕದಂತಿರುವ ಬಿನಾಯಕ್ ಅವರ ಬಂಧನ ನಮ್ಮ ಪ್ರಜಾಪ್ರಭುತ್ವದ ದುರಂತ ಮಾತ್ರವಲ್ಲ, ಈ ದೇಶದಲ್ಲಾಗುತ್ತಿರುವ ದಬ್ಬಾಳಿಕೆ, ದೌರ್ಜನ್ಯಗಳನ್ನು ಪ್ರಜ್ಞಾವಂತರು ಟೀಕಿಸಿದರೆ ಅವರಿಗೆ ಏನಾಗುತ್ತದೆ ಎಂಬುದರ ಸಂಕೇತವೂ ಆಗಿದ್ದಾರೆ.

ಮೇ 16 ರಂದು ಚುನಾವಣೆಗಳ ಫಲಿತಾಂಶ ಹೊರಬಿದ್ದ ನಂತರ ಅಧಿಕಾರಕ್ಕಾಗಿ ಎಲ್ಲಾ ರಾಜಕೀಯ ಪಕ್ಷಗಳ ನಡುವೆ ತಂತ್ರ, ಕುತಂತ್ರ, ಅರಚಾಟ, ಪರದಾಟಗಳು ನಡೆಯುವ ಬಗ್ಗೆ ಈಗ ಯಾವ ಸಂಶಯವೂ ಇಲ್ಲ. ಆ ಗದ್ದಲದಲ್ಲಿ ಯಾರ ನೆನಪಿಗೂ ಬಿನಾಯಕ್ ಬರುವುದಿಲ್ಲ. ಅಂದಹಾಗೆ ಅವರೆಲ್ಲ ಅಧಿಕಾರಕ್ಕಾಗಿ ಹೊಡೆದಾಡುವುದು ಬಿನಾಯಕ್ ತರಹದ ಜನರ ಪರವಾಗಿ ಆಡಳಿತ ನಡೆಸಲು ಅಲ್ಲ; ಬದಲಾಗಿ ಬಿನಾಯಕ್ ತರಹದ ಇನ್ನಷ್ಟು ಜನರ ಬಾಯಿ ಮುಚ್ಚಿಸುವಂತಹ, ಜೈಲಿಗೆ ದೂಡುವಂತಹ ಕಾನೂನುಗಳನ್ನು ಜಾರಿಗೆ ತರಲೆಂದು.

ಬಿನಾಯಕ್ ಅವರ ಬಂಧನ ಮತ್ತು ನಮ್ಮ ರಾಜಕೀಯ ವ್ಯವಸ್ಥೆಯ ದ್ವಂದ್ವ ನೀತಿ ಕುರಿತಂತೆ ಮಾನವ ಹಕ್ಕುಗಳ ಹೋರಾಟಗಾರ ಮತ್ತು ಲೇಖಕ ಆನಂದ್ ತೇಲ್ ತುಂಬ್ಡೆಯವರು ಮೊನ್ನೆ 'ಮನಮೋಹನ್ ಸಿಂಗ್, ಬೋಫೋರ್ಸ್ ಮತ್ತು ಬಿನಾಯಕ್!' ಎಂಬ ಲೇಖನವನ್ನು ಬರೆದಿದ್ದಾರೆ. ಎಲ್ಲರಿಗೂ ಗೊತ್ತಿರುವಂತೆ ಚುನಾವಣಾ ಬಿಸಿ ಏರಿದ್ದಾಗಲೇ ಇತ್ತೀಚೆಗೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಒಂದು ಪ್ರಮುಖ ನಿರ್ಧಾರವನ್ನು ತೆಗೆದುಕೊಂಡಿತು. ಅದರಂತೆ 64 ಕೋಟಿ ರೂ.ಗಳ ಬೋಫೋರ್ಸ್ ಹಗರಣದ ಪ್ರಮುಖ ಆರೋಪಿ ಒಟ್ಟಾವಿಯೋ ಕ್ವಟ್ರೋಚಿ ಎಂಬ ಇಟಲಿ ಮೂಲದ ವ್ಯಾಪಾರಸ್ಥನ ವಿರುದ್ಧ ಕಳೆದ 12 ವರ್ಷಗಳಿಂದ ಇಂಟರ್‌ಪೋಲ್‌ನಲ್ಲಿದ್ದ ರೆಡ್ ಅಲರ್ಟ್ ಅನ್ನು ರದ್ದುಗೊಳಿಸಲಾಯಿತು. ಈ ನಿರ್ಧಾರದ ಬಗ್ಗೆ ಟಿವಿ ಚಾನೆಲ್ ಒಂದು ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಪ್ರಶ್ನಿಸಿದಾಗ ಅವರು ನೀಡಿದ ಉತ್ತರ: "ಇಡೀ ಜಗತ್ತೇ ಆತನ ವಿರುದ್ಧ ನಮ್ಮ ಬಳಿ ಯಾವ ಸಾಕ್ಷಿಯೂ ಇಲ್ಲ ಎಂದು ಹೇಳುತ್ತಿರುವಾಗ ನಾವು ಆತನಿಗೆ ಕಿರುಕುಳ ಕೊಡುವುದು ನಮ್ಮ ದೇಶದ ಕಾನೂನು ವ್ಯವಸ್ಥೆ ಬಗ್ಗೆ ಒಳ್ಳೆ ಅಭಿಪ್ರಾಯ ಮೂಡಿಸುವುದಿಲ್ಲ."

ವಾಸ್ತವ ಏನೆಂದರೆ ಕ್ವಟ್ರೋಚಿಯ ಪರವಾಗಿ ಇಲ್ಲಿಯ ತನಕ ಯಾರೊಬ್ಬರೂ ದನಿ ಎತ್ತಿಲ್ಲ. ಆತನಿಗೆ ವಿನಾಕಾರಣ ಕಿರುಕುಳ ನೀಡಬೇಡಿ ಎಂದಿಲ್ಲ. ಬದಲಾಗಿ ಇಂಟರ್‌ಪೋಲ್ ತನಿಖೆಯೇ ಸ್ಪಷ್ಟಪಡಿಸಿರುವಂತೆ ಆತ ಲಂಡನ್‌ನ ಎರಡು ಬ್ಯಾಂಕ್‌ಗಳಲ್ಲಿ ಇಟ್ಟಿರುವ ಮೂರು ಮಿಲಿಯನ್ ಯೂರೋಗಳು ಮತ್ತು ಒಂದು ಮಿಲಿಯನ್ ಡಾಲರ್‌ಗಳು ಎಲ್ಲಿಂದ ಬಂದವು ಎಂಬುದಿನ್ನೂ ಸಾಬೀತಾಗಿಲ್ಲ. ಆದರೂ ಆತನ ವಿರುದ್ಧದ ರೆಡ್ ಅಲರ್ಟ್ ಅನ್ನು ನಮ್ಮ ಸರ್ಕಾರ ರದ್ದುಗೊಳಿಸುತ್ತದೆ.

ಆದರೆ ಬಿನಾಯಕ್ ಪ್ರಕರಣವನ್ನು ನೋಡಿ. ಭಾರತ ಮಾತ್ರವಲ್ಲದೆ ಜಗತ್ತಿನ ನೂರಾರು ಮಾನವ ಹಕ್ಕುಗಳ ಸಂಘಟನೆಗಳು, ವೈದ್ಯರು, ಲೇಖಕರು, ಅಷ್ಟೇ ಅಲ್ಲ ಪ್ರತಿಷ್ಠಿತ ನೊಬೆಲ್ ಪ್ರಶಸ್ತಿ ಪಡೆದಿರುವ 22 ಗಣ್ಯರು "ಬಿನಾಯಕ್ ಸೇನ್ ಅವರು ಯಾವ ತಪ್ಪೂ ಮಾಡಿಲ್ಲ. ಅವರ ವಿರುದ್ಧ ಯಾವ ಸಾಕ್ಷ್ಯಗಳೂ ಇಲ್ಲ. ಅವರ ಬಂಧನ ಸರ್ಕಾರದ ಅನೈತಿಕ ನೀತಿಗೆ ಕನ್ನಡಿಯಾಗಿದೆ. ಆದ್ದರಿಂದ ಅವರನ್ನು ಕೂಡಲೇ ಬಂಧಮುಕ್ತಗೊಳಿಸಿ" ಎಂದು ಸ್ವತಃ ಮನಮೋಹನ್ ಸಿಂಗ್ ಸೇರಿದಂತೆ, ರಾಷ್ಟ್ರಪತಿ ಪ್ರತಿಭಾ ಪಾಟೀಲ್ ಮತ್ತು ಛತ್ತೀಸ್‌ಘಡದ ಮುಖ್ಯಮಂತ್ರಿಗೆ ಸಾವಿರಾರು ಪತ್ರಗಳನ್ನು, ಮನವಿಗಳನ್ನು ಸಲ್ಲಿಸಿದ್ದಾರೆ. ಇಷ್ಟೆಲ್ಲಾ ಆದರೂ ಪ್ರಧಾನಿ ಸಿಂಗ್ ಅವರಿಗೆ ಬಿನಾಯಕ್ ಸೇನ್‌ರ ಬಂಧನ ಅಕ್ರಮ ಎಂದಾಗಲಿ, ಈ ದೇಶದ ಕಾನೂನು ವ್ಯವಸ್ಥೆಗೆ ಕಳಂಕ ತರುವಂತಹದ್ದೆಂದಾಗಲಿ, ಜಗತ್ತಿನ ಮುಂದೆ ಭಾರತ ತಲೆತಗ್ಗಿಸುವಂತೆ ಮಾಡುವ ಪ್ರಕರಣವೆಂದಾಗಲಿ ಅನ್ನಿಸುವುದೇ ಇಲ್ಲ! ತೇಲ್‌ತುಂಬ್ಡೆಯವರು ಹೇಳಿರುವಂತೆ "ನಮ್ಮ ಹಣವನ್ನು ಕದ್ದ ವಿದೇಶಿಯೊಬ್ಬನ ಬಗ್ಗೆ ಸರ್ಕಾರಕ್ಕೆ ಇರುವಷ್ಟು ಕಾಳಜಿ ನಮ್ಮ ದೇಶದ ಬಡವರ ಮತ್ತು ಶೋಷಿತರ ಪರವಾಗಿ ದುಡಿದ ಭಾರತೀಯನ ಬಗ್ಗೆ ಇಲ್ಲದಿರುವುದು ನಮ್ಮ ವ್ಯವಸ್ಥೆಯ ಅನೈತಿಕತೆಗೆ ಸಾಕ್ಷಿಯಂತಿದೆ."



ಈ ಬಿನಾಯಕ್ ಸೇನ್ ಯಾರು? ಅವರನ್ನು ಬಂಧಿಸಿದ್ದು ಯಾಕೆ? ಅವರ ಬಗ್ಗೆ ಛತ್ತೀಸ್‌ಗಢದ ಸರ್ಕಾರಕ್ಕೆ ಯಾಕಿಷ್ಟು ಕೋಪ? ಯಾಕೆ ನಮ್ಮ ನ್ಯಾಯಾಲಯಗಳು ಅವರಿಗಿನ್ನೂ ಜಾಮೀನು ನೀಡಿಲ್ಲ? ಈಗ ಅನಾರೋಗ್ಯದಿಂದ ತತ್ತರಿಸಿ ಯಾವ ಕ್ಷಣದಲ್ಲಾದರೂ ಹೃದಯಾಘಾತಕ್ಕೆ ಬಿನಾಯಕ್ ಬಲಿಯಾಗಬಹುದು ಎಂಬ ಆತಂಕ ಇದ್ದರೂ ಅವರಿಗೆ ವೈದ್ಯಕೀಯ ನೆರವನ್ನೂ ಯಾಕೆ ನಿರಾಕರಿಸಲಾಗುತ್ತಿದೆ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ: ಸರ್ಕಾರಗಳ ಅಕ್ರಮ, ಅನ್ಯಾಯ, ದಬ್ಬಾಳಿಕೆಯ ವಿರುದ್ಧ ಮುಂದೆ ಯಾರೂ ಬಾಯಿತೆರೆಯದಂತೆ ಬಿನಾಯಕ್ ಅವರ ಪಾಡನ್ನು ಒಂದು ಉದಾಹರಣೆಯನ್ನಾಗಿಸುವುದು!

ಭಾರತದ ಸೈನ್ಯದಲ್ಲಿ ಕರ್ನಲ್ ಆಗಿದ್ದ ಅಧಿಕಾರಿಯೊಬ್ಬರ ಮಗನಾದ ಬಿನಾಯಕ್ ವೈದ್ಯಕೀಯ ಓದಿದ್ದು ವೆಲ್ಲೂರಿನಲ್ಲಿರುವ ಪ್ರತಿಷ್ಠಿತ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿನಲ್ಲಿ. ಚಿನ್ನದ ಪದಕ ಪಡೆದ ಬಿನಾಯಕ್ ಐಶ್ವರ್ಯವನ್ನರಸಿ ವಿದೇಶಕ್ಕೆ ಹಾರಿಹೋಗಬಹುದಿತ್ತು ಅಥವಾ ಯಾವುದಾದರೂ ಖ್ಯಾತ ಆಸ್ಪತ್ರೆಯಲ್ಲಿ ಕೈತುಂಬ ಹಣ ನೀಡುವ ಕೆಲಸ ಗಿಟ್ಟಿಸಬಹುದಿತ್ತು. ಆದರೆ ಬಿನಾಯಕ್ ಅವರ ಆಸಕ್ತಿ ಇದ್ದದ್ದು ಈ ದೇಶದ ಅತಿ ನಿರ್ಲಕ್ಷಿತ ಜನರ ಆರೋಗ್ಯವನ್ನು ಕಾಪಾಡುವುದರ ಬಗ್ಗೆ ಜನರ ಆರೋಗ್ಯಕ್ಕೂ ಅವರ ಪರಿಸರದ ಸ್ವಾಸ್ಥ್ಯಕ್ಕೂ ಅವರ ಜೀವನೋಪಾಯಕ್ಕೂ ನೇರ ಸಂಬಂಧವಿದೆ ಎಂದು ನಂಬಿರುವ ಬಿನಾಯಕ್ ದೇಶದ ಅತಿ ಹಿಂದುಳಿದ ರಾಜ್ಯವಾದ ಛತ್ತೀಸಗಢದ (ಆಗ ಮಧ್ಯಪ್ರದೇಶದ ಭಾಗವಾಗಿತ್ತು) ಗ್ರಾಮೀಣ ಪ್ರದೇಶಗಳಲ್ಲಿ ಜನಸೇವೆ ಮಾಡಲು ನಿರ್ಧರಿಸಿದರು.

ಆರಂಭದಲ್ಲಿ ಗಣಿ ಕಾರ್ಮಿಕರಿಗಾಗಿ, ಆನಂತರ ಸಮಾಜಸೇವಾ ಸಂಸ್ಥೆಗಳೊಂದಿಗೆ ಕೆಲಸ ಮಾಡಿದ ಬಿನಾಯಕ್ 1990 ರಲ್ಲಿ ರೂಪಾಂತರ ಎಂಬ ಸರ್ಕಾರೇತರ ಸಂಸ್ಥೆಯನ್ನು ಸ್ಥಾಪಿಸಿದರು. ಪ್ರಾಥಮಿಕ ಚಿಕಿತ್ಸಾ ವ್ಯವಸ್ಥೆಯೂ ಇಲ್ಲದೆ ವಾಂತಿ ಭೇದಿಯಿಂದ ಹಿಡಿದು ಕ್ಷಯ ರೋಗ, ಅಪೌಷ್ಟಿಕತೆ, ಮಲೇರಿಯಾದಂತಹ ಸಾಮಾನ್ಯ ಕಾಯಿಲೆಗಳಿಗೂ ಬಲಿಯಾಗುತ್ತಿದ್ದ ಆದಿವಾಸಿಗಳ ಮತ್ತು ಸರ್ಕಾರಿ ಯೋಜನೆಗಳಿಂದ ನಿರಾಶ್ರಿತರಾಗಿದ್ದ ಗ್ರಾಮೀಣ ಜನರ ಆರೋಗ್ಯಕ್ಕಾಗಿ ಶ್ರಮಿಸಲಾರಂಭಿಸಿದರು. ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿರುವ ಬಿನಾಯಕ್ ಅವರು ಕಳೆದ 30 ವರ್ಷಗಳಲ್ಲಿ ಸಾವಿರಾರು ಜನರ ಜೀವವನ್ನು ಉಳಿಸಿದ್ದಾರೆ; ನೂರಾರು ಯುವಕರಿಗೆ ಮಾದರಿಯಾಗಿದ್ದಾರೆ; ಇವತ್ತಿಗೂ ರಾಯಪೂರ್ ಸುತ್ತಲಿನ ಜನರಿಗೆ ಏಕೈಕ ಆಶಾಕಿರಣವಾಗಿದ್ದಾರೆ.


ಇಂತಹ ಬಿನಾಯಕ್‌ರನ್ನು ಯಾಕೆ ಸರ್ಕಾರ ಜೈಲಿಗೆ ದೂಡಿತು? ಅದಕ್ಕೆ ಉತ್ತರ ಬಡಜನರ ಆರೋಗ್ಯದ ಬಗ್ಗೆ ಬಿನಾಯಕ್ ಅವರಿಗೆ ಎಷ್ಟು ಕಾಳಜಿ ಇತ್ತೋ ಅಷ್ಟೇ ಕಾಳಜಿ ಆ ಜನರ ಮಾನವಹಕ್ಕುಗಳ ಬಗ್ಗೆಯೂ ಇದ್ದದ್ದು.

ಬಿನಾಯಕ್ ಸೇವೆ ಸಲ್ಲಿಸುತ್ತಿದ್ದ ರಾಯಪೂರ್ ಸುತ್ತಮುತ್ತಲಿನ ಪ್ರದೇಶ ಅಮೂಲ್ಯ ಕಬ್ಬಿಣ ಅದಿರಿಗೆ ಹೆಸರುವಾಸಿಯಾಗಿದೆ. ಆ ಪ್ರದೇಶದ ಮೇಲೆ ಸಹಜವಾಗಿಯೇ ಕಾರ್ಪೊರೇಟ್ ಕಂಪನಿಗಳ ಕಣ್ಣುಬಿತ್ತು. ಅದನ್ನು ಕಂಪನಿಗಳಿಗೆ ಕೊಡಲು ಸರ್ಕಾರ ಮುಂದಾದಾಗ ಅಲ್ಲಿ ನೆಲೆ ಕಂಡಿರುವ ಮಾವೋವಾದಿಗಳು (ನಕ್ಸಲರು) ಸ್ಥಳೀಯ ಜನರಿಗೆ ಅದರಿಂದಾಗುವ ಅನ್ಯಾಯಗಳ ಬಗ್ಗೆ ಎಚ್ಚರಿಕೆ ನೀಡಲಾರಂಭಿಸಿದರು; ಸರ್ಕಾರದ ನಿರ್ಧಾರದ ವಿರುದ್ಧ ಜನ ಪ್ರತಿಭಟಿಸುವಂತೆ ಮಾಡಿದರು. ಆಗ ಮಾವೋವಾದಿಗಳನ್ನು ಮತ್ತು ಪ್ರತಿಭಟಿಸುತ್ತಿದ್ದ ಆದಿವಾಸಿಗಳನ್ನು ಬಗ್ಗುಬಡಿಯಲು ಛತ್ತೀಸಗಢದ ಸರ್ಕಾರವೇ 'ಸಲ್ವಾ ಜುಡುಂ' ಎಂಬ ಅಪಾಯಕಾರಿ ಸಂಘಟನೆಯನ್ನು ಹುಟ್ಟುಹಾಕಿತು. ಕಬ್ಬಿಣ ಅದಿರಿರುವ ಪ್ರದೇಶಗಳನ್ನು ತೊರೆಯುವುದಿಲ್ಲ ಎಂದು ಹಠ ಹಿಡಿದಿದ್ದ ಆದಿವಾಸಿಗಳ ವಿರುದ್ಧ ಸ್ಥಳೀಯ ಕೆಲ ಆದಿವಾಸಿಗಳನ್ನೇ ಎತ್ತಿಕಟ್ಟಿ ಅವರಿಗೆಲ್ಲ ಶಸ್ತ್ರಾಸ್ತ್ರಗಳನ್ನು ನೀಡಿತು. ಪರಿಣಾಮವಾಗಿ ನಕಲಿ ಎನಕೌಂಟರ್‌ಗಳಲ್ಲಿ ನೂರಾರು ಅಮಾಯಕರನ್ನು ಸರ್ಕಾರಿ ಪ್ರಾಯೋಜಿತ ಸಲ್ವಾ ಜುಡುಂ ಮತ್ತು ಪೊಲೀಸರು ಕೊಂದು ಹಾಕಿದರು.

ನಕ್ಸಲರ ಸಶಸ್ತ್ರ ಹೋರಾಟವನ್ನು ವಿರೋಧಿಸುವ, ಅದೊಂದು ಹಿಂಸಾವಾದಿ ಮಾರ್ಗವೆಂದು ಹಲವಾರು ಬಾರಿ ಖಂಡಿಸಿರುವ ಬಿನಾಯಕ್ ಅವರಿಗೆ ಸರ್ಕಾರವೇ ಹೀಗೆ ಜನರನ್ನು ಕೊಂದು ಹಾಕುತ್ತಿರುವುದನ್ನು ಸಹಿಸಲಾಗಲಿಲ್ಲ. Peoples Union for Civil liberites (ಪಿಯುಸಿಎಲ್) ಎಂಬ ಮಾನವಹಕ್ಕುಗಳ ಸಂಘಟನೆಯ ರಾಜ್ಯಾಧ್ಯಕ್ಷರೂ ಆಗಿದ್ದ ಬಿನಾಯಕ್ ಇಂತಹ ಹಲವಾರು ನಕಲಿ ಎನ್‌ಕೌಂಟರ್‌ಗಳನ್ನು ಬಯಲಿಗೆಳೆದರು. ಆ ಮೂಲಕ ಛತ್ತೀಸಗಢದ ಬಿಜೆಪಿ ಸರ್ಕಾರಕ್ಕೆ ಮುಖಭಂಗ ಆಗುವಂತೆ ಮಾಡಿದ್ದರು. ಅವುಗಳಲ್ಲಿ ಮುಖ್ಯವಾದದ್ದು 2007 ರ ಮಾರ್ಚ್ 31 ರಂದು ಸಂತೋಷ್‌ಪುರ ಎಂಬಲ್ಲಿ ಪೊಲೀಸರು ಹಲವಾರು ಆದಿವಾಸಿಗಳನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದ್ದು. ಈ ಪ್ರಕರಣದ ಬಗ್ಗೆ ಇತರೆ ಮಾನವಹಕ್ಕು ಸಂಘಟನೆಗಳೊಂದಿಗೆ ಸೇರಿ ಸತ್ಯಶೋಧನೆ ನಡೆಸಿ ಬಿನಾಯಕ್ ವರದಿ ಸಲ್ಲಿಸಿದ್ದರು. ಆ ವರದಿಯನ್ನಾಧರಿಸಿ ರಾಜ್ಯ ಮಾನವಹಕ್ಕುಗಳ ಆಯೋಗ

▶▶▶18

ಅರ್ಚಕನೋ ಅಥವಾ ಮುಖ್ಯಮಂತ್ರಿಯೋ?



ನಮ್ಮ ಮಾನ್ಯ ಮುಖ್ಯಮಂತ್ರಿ ಯಡಿಯೂರಪ್ಪನವರ ಬಗ್ಗೆ ಇಂತಹುದ್ದೊಂದು ಪ್ರಶ್ನೆಯೀಗ ಪ್ರಸ್ತುತವಾಗಿದೆ.

ಯಾವುದೇ ಒಬ್ಬ ಜನಪ್ರತಿನಿಧಿ ಒಂದು ನಿರ್ದಿಷ್ಟ ಧಾರ್ಮಿಕ ಸಮುದಾಯಕ್ಕೆ ಜಾತಿಗೆ ಸೇರಿದವರಾಗಿದ್ದರೂ ಅವರನ್ನು ಜನ ತಮ್ಮ ಜನಪ್ರತಿನಿಧಿ ಎಂದು ಆಯ್ಕೆ ಮಾಡಿ ಕಳಿಸಿದ ಮೇಲೆ ಆತ ಆ ನಿರ್ದಿಷ್ಟ ಸಮುದಾಯಕ್ಕೆ ಅಥವಾ ಜಾತಿಗೆ ಸೇರಿದವರಾಗಿರುವುದಿಲ್ಲ, ಬದಲಾಗಿ ಆತ ಎಲ್ಲಾ ಜಾತಿ, ಧರ್ಮಗಳನ್ನೊಳಗೊಂಡ ಎಲ್ಲರ ಪ್ರತಿನಿಧಿಗಳಾಗುತ್ತಾರೆ. ಇದು ಪ್ರಜಾತಂತ್ರದ ಮೂಲ ನಿಯಮ.


ಆದರೆ ನಮ್ಮ ಮುಖ್ಯಮಂತ್ರಿ ಯಡಿಯೂರಪ್ಪ ತಾನು ಬರೀ ಹಿಂದೂಗಳ ಮುಖ್ಯಮಂತ್ರಿ ಎಂಬಂತೆ ವರ್ತಿಸಿದ್ದಾರೆ. ಕೆಲವು ಉದಾಹರಣೆಗಳನ್ನೇ ನೋಡಿ. ಅವರು ಮುಖ್ಯಮಂತ್ರಿಯಾಗಿ ಅಧಿಕಾರಕ್ಕೇರಿದ ಮೊದಲ ಐದು ತಿಂಗಳ ಅವಧಿಯಲ್ಲಿ ಕೇವಲ ಹಿಂದೂ ಧರ್ಮದ ಗುಡಿಗುಂಡಾರಗಳನ್ನೇ ಸುತ್ತಿದ್ದಾರೆಯೇ ಹೊರತು ಯಾವುದೇ ಮಸೀದಿಗಾಗಲೀ, ಚರ್ಚ್‌ಗಾಗಲೀ ಹೋಗಿಲ್ಲ. ಅದು ಅವರ ವೈಯಕ್ತಿಕ ಧಾರ್ಮಿಕ ಶ್ರದ್ಧೆಯ ವಿಚಾರ ಎಂದು ಸುಮ್ಮನಿರಲು ಸಾಧ್ಯವಿಲ್ಲ. ಏಕೆಂದರೆ ಆ ಭೇಟಿಗಳಿಗೆಲ್ಲ ಅವರು ರಾಜ್ಯದ ಖಜಾನೆಯಿಂದ ಜನರ ಹಣವನ್ನು ವೆಚ್ಚ ಮಾಡಿದ್ದಾರೆ.

ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಯಡಿಯೂರಪ್ಪನವರು "Official" ಆಗಿ ಭೇಟಿ ನೀಡಿದ್ದು ದೊಡ್ಡಬಳ್ಳಾಪುರದ ಘಾಟಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ. ಅದಕ್ಕಾಗಿ ಅವರು ಸರ್ಕಾರಿ ಬೊಕ್ಕಸದಿಂದ ಖರ್ಚು ಮಾಡಿದ್ದು 2440 ರೂಪಾಯಿಗಳನ್ನು. ಅದಾದ ಹನ್ನೆರಡು ದಿನಕ್ಕೆ 854 ರೂಪಾಯಿ ಸರ್ಕಾರಿ ದುಡ್ಡು ಖರ್ಚು ಮಾಡಿ ತುಮಕೂರಿನ ಸಿದ್ಧಾರ್ಥ ಬೆಟ್ಟ ದೇವಾಲಯಕ್ಕೆ ಭೇಟಿ ಕೊಟ್ಟರು.

ಇದಿಷ್ಟೇ ಆಗಿದ್ದರೆ ಹೋಗಲಿ ಎಂದು ಸುಮ್ಮನಿರಬಹುದಿತ್ತೇನೋ? ಆದರೆ, ಯಡಿಯೂರಪ್ಪನವರ ದೇವಸ್ಥಾನಗಳ "Official" ಭೇಟಿ ಅಲ್ಲಿಗೇ ನಿಲ್ಲಲಿಲ್ಲ. 2008ರ ಜುಲೈ 17 ಮತ್ತು ಅಕ್ಟೋಬರ್ 1ರಂದು ಎರಡು ಬಾರಿ ಆಂಧ್ರಪ್ರದೇಶದ ತಿರುಪತಿ ದೇವಸ್ಥಾನಕ್ಕೆ ಹೋಗಿಬಂದಿದ್ದಾರೆ. ಈ ಎರಡೂ ಬಾರಿ ಅವರು ಖಾಸಗಿ ವಿಶೇಷ ವಿಮಾನವೊಂದನ್ನು ಬಾಡಿಗೆ ತೆಗೆದುಕೊಂಡು ಹೋಗಿದ್ದಾರೆ. ಒಂದೊಂದು ಬಾರಿಗೂ 3.6 ಲಕ್ಷ ವಿಶೇಷ ವಿಮಾನದ ಬಾಡಿಗೆ ಮತ್ತು 9500 ಟ್ಯಾಕ್ಸಿ ಬಾಡಿಗೆಯ ಖರ್ಚನ್ನು "Official" ಎಂದು ಹೇಳಿ ಸರ್ಕಾರದ ಲೆಕ್ಕಕ್ಕೆ ಬರೆದಿದ್ದಾರೆ.

ಸೆಪ್ಟೆಂಬರ್ 8, 2008ರಂದು ಹಾಸನದ ಬನವಾಸಿ ದೇವಸ್ಥಾನಕ್ಕೆ, ಅಕ್ಟೋಬರ್ 10, 2008ರಂದು ಉಡುಪಿಯ ಶ್ರೀಕೃಷ್ಣ ಮಠಕ್ಕೆ ಹೋಗುವುದಕ್ಕಾಗಿ ಖಾಸಗೀ ಹೆಲಿಕಾಪ್ಟರ್‌ನ್ನು ಬಾಡಿಗೆಗೆ ತೆಗೆದುಕೊಂಡಿದ್ದಾರೆ. ಇದಕ್ಕಾಗಿ ಕ್ರಮವಾಗಿ 1.4 ಮತ್ತು 1.9 ಲಕ್ಷ ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ತೆಗೆದುಕೊಂಡಿದ್ದಾರೆ.

ಗುಡಿಗುಂಡಾರಗಳನ್ನು ಸುತ್ತುವುದು ಅವರ ವೈಯಕ್ತಿಕ ಶ್ರದ್ಧೆಯ ವಿಚಾರವಾಗಿದ್ದರೆ ಅದಕ್ಕೆ ತಗಲುವ ವೆಚ್ಚವನ್ನು ಅವರು ತಮ್ಮ ಜೇಬನಿಂದ ಭರಿಸಬಹುದಿತ್ತು ಅದನ್ನು ಮಾಡುವ ಬದಲಾಗಿ ಅವರು ಸರ್ಕಾರದ ಖಜಾನೆಯ ದುಡ್ಡನ್ನು, ಅರ್ಥಾತ್ ಜನರ ದುಡ್ಡನ್ನು ಬಳಸಿಕೊಂಡಿರುವುದು ಆಕ್ಷೇಪಣೀಯ.




ಯಡಿಯೂರಪ್ಪನವರ ದೇವಸ್ಥಾನಗಳ ಈ ದುಬಾರಿ ಭೇಟಿಯನ್ನು ಸಮರ್ಥಿಸಿಕೊಂಡಿರುವ ಬಿಜೆಪಿಯ ನಾಯಕಶಿಖಾಮಣಿಗಳು 'ಹಲವಾರು ದೇವಾಲಯಗಳಿಂದ ಜನ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಿದ್ದಾರೆ. ಆದ್ದರಿಂದ ಅವರು ಹೋಗಿದ್ದಾರೆ' ಎನ್ನುತ್ತಾರೆ. ಆದರೆ, ಅದೇ ಸಂದರ್ಭದಲ್ಲಿ ಚರ್ಚುಗಳು, ಮಸೀದಿಗಳೂ ಯಡಿಯೂರಪ್ಪನವರಿಗೆ ಆಹ್ವಾನ ನೀಡಿದ್ದರೂ ಅವರು ಹೋಗಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಯಡಿಯೂರಪ್ಪ ಸರ್ಕಾರಿ ಖರ್ಚಿನಲ್ಲಿ ಮಂಗಳೂರಿನ ದೇವಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲೇ ಅದೇ ಮಂಗಳೂರಿನಲ್ಲಿ ಭಜರಂಗದಳದವರು ಚರ್ಚುಗಳ ಮೇಲೆ ದಾಳಿ ನಡೆಸಿದ್ದರು. ಮಾಧ್ಯಮಗಳಲ್ಲಿ ಈ ಕುರಿತು ವ್ಯಾಪಕ ವರದಿಗಳು ಫೋಟೋ ಸಮೇತವಾಗಿ ಬಂದಮೇಲೂ ಅಲ್ಲೇ ಇದ್ದ ಯಡಿಯೂರಪ್ಪ ಸೌಜನ್ಯಕ್ಕಾದರೂ ದಾಳಿಗೊಳಗಾದ ಚರ್ಚುಗಳಿಗೆ ಭೇಟಿ ನೀಡುವ ಮನಸ್ಸು ಮಾಡಲಿಲ್ಲ.

ಇದೆಲ್ಲ ಏನನ್ನು ಸೂಚಿಸುತ್ತವೆ? ಯಡಿಯೂರಪ್ಪ ಗಣಪತಿ ದೇವಸ್ಥಾನದ ಅರ್ಚಕನೋ ಅಥವಾ ಕರ್ನಾಟಕದ ಮುಖ್ಯಮಂತ್ರಿಯೋ ಎಂಬ ಪ್ರಶ್ನೆಯನ್ನು ಹುಟ್ಟುಹಾಕುವುದಿಲ್ಲವೆ? ■

2008ರ ಮೇ 30 ರಿಂದ ನವೆಂಬರ್ 12 ನಡುವೆ ಯಡ್ಡಿ ಮಾಡಿದ ದೇವಸ್ಥಾನ ಯಾತ್ರೆಯ ಪಟ್ಟಿ

ದಿನಾಂಕ	ದೇವಸ್ಥಾನ	ಖರ್ಚಾದ ಸರ್ಕಾರಿ ದುಡ್ಡು
17.06.2008	ಘಾಟಿ ಸುಬ್ರಹ್ಮಣ್ಯ ದೇವಾಲಯ, ದೊಡ್ಡ ಬಳ್ಳಾಪುರ	2440
29.06.2008	ಶ್ರೀ ಕ್ಷೇತ್ರ ಸಿದ್ಧಾರ್ಥ ಬೆಟ್ಟ, ತುಮಕೂರು ಜಿಲ್ಲೆ	854
13.07.2008	ಚಾಮುಂಡೇಶ್ವರಿ ದೇವಾಲಯ, ಮೈಸೂರು	28,000
17.07.2008	ತಿರುಪತಿ ತಿರುಮಲ ದೇವಸ್ಥಾನ	3,58,990 + 9600
02.08.2008	ಮೂಕಾಂಬಿಕ ದೇವಾಲಯ, ಉಡುಪಿ ಕೃಷ್ಣಮಠ, ಧರ್ಮಸ್ಥಳ	8561 + 15,011
09.08.2008	ಬನವಾಸಿ ದೇವಾಲಯ, ಹಾಸನ ಜಿಲ್ಲೆ	1,39,300
01.10.2008	ತಿರುಪತಿ ತಿರುಮಲ ದೇವಸ್ಥಾನ (ಎರಡನೇ ಬಾರಿ)	3,58,990 + 9600
10.10.2008	ಉಡುಪಿ ಕೃಷ್ಣಮಠ	1,85,733



ಒಬಾಮಾ ಬಾಂಬ್!

ಕೊನೆಗೂ ಒಬಾಮಾ ಬೆಂಗಳೂರಿನ ಮೇಲೆ ಬಾಂಬ್ ಹಾಕಿದ್ದಾರೆ. ಅಮೆರಿಕದ ಐಟಿ ಕಂಪೆನಿಗಳು ಹೊರಗುತ್ತಿಗೆ ನೀಡುವುದನ್ನು ನಿಲ್ಲಿಸಿ ತಮ್ಮದೇ ದೇಶದಲ್ಲಿ ಆ ಕೆಲಸ ಮಾಡಿಸುವ ಮೂಲಕ ಅಲ್ಲಿ ಉದ್ಯೋಗ ಸೃಷ್ಟಿಸುವುದಕ್ಕೆ ಅಧಿಕೃತವಾಗಿ ಚಾಲನೆ ನೀಡಿದ್ದಾರೆ. ಅಂದರೆ, ಈಗಾಗಲೇ ಆರ್ಥಿಕ ಹಿಂಜರಿತದಿಂದ ತತ್ತರಿಸುತ್ತಿರುವ ಭಾರತಕ್ಕೆ, ಬೆಂಗಳೂರಿಗೆ ಗಾಯದ ಮೇಲೆ ಬರೆ ಎಳೆದಿದ್ದಾರೆ.

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸಂದರ್ಭದಲ್ಲೇ ಒಬಾಮಾ ಈ ಸೂಚನೆ ನೀಡಿದ್ದರು. ಅಮೆರಿಕದ ನೂರಾರು ಕಂಪೆನಿಗಳು ಭಾರತದಂತಹ ತೃತೀಯ ಜಗತ್ತಿನ ದೇಶಗಳಿಗೆ ಹೊರಗುತ್ತಿಗೆ ನೀಡಿರುವುದರಿಂದ ಅಮೆರಿಕದ ನಾಗರಿಕರಿಗೆ ಕೆಲಸ ದೊರೆಯದಂತಾಗಿದೆ ಎನ್ನುತ್ತಾ ತಾವು ಅಧಿಕಾರಕ್ಕೆ ಬಂದರೆ ಹೊರಗುತ್ತಿಗೆಯನ್ನು ತಡೆಯುವುದಾಗಿ ವಾಗ್ದಾನ ಮಾಡಿದ್ದರು. ಈಗದನ್ನು ಈಡೇರಿಸುತ್ತಿದ್ದಾರೆ. ಆ ನಿಟ್ಟಿನಲ್ಲಿ ಮೊನ್ನೆ ಮೇ 5ರಂದು ಶ್ವೇತಭವನದಲ್ಲಿ ಅಂತಾರಾಷ್ಟ್ರೀಯ ತೆರಿಗೆ ಸುಧಾರಣಾ ನೀತಿಯನ್ನು ಪ್ರಕಟಿಸಿದ್ದಾರೆ. ಅದರ ಪ್ರಕಾರ ವಿದೇಶಗಳಿಗೆ ಹೊರಗುತ್ತಿಗೆ ಕೊಡುವ ಅಮೆರಿಕದ ಕಂಪನಿಗಳಿಗೆ ತೆರಿಗೆ ವಿನಾಯಿತಿಯನ್ನು ರದ್ದುಗೊಳಿಸಲಾಗುತ್ತದೆ. ಅಲ್ಲದೇ ಹೊರಗುತ್ತಿಗೆಯ ಕೆಲಸವನ್ನು ಅಮೆರಿಕದೊಳಗೇ ಮಾಡಿಸುವ ಮೂಲಕ ದೇಶದಲ್ಲಿ ಹೆಚ್ಚುವರಿ ಉದ್ಯೋಗ ಸೃಷ್ಟಿಸುವ ಕಂಪನಿಗಳಿಗೆ ಉತ್ತೇಜನ ನೀಡಲಾಗುತ್ತದೆ. ಇದನ್ನೇ ಅವರು ಮಾರ್ಮಿಕವಾಗಿ 'ಭಾರತದ ಬೆಂಗಳೂರು ಬೇಡ, ಅಮೆರಿಕದ ಬಫೆಲೋ ಬೇಕು' ಎಂದಿದ್ದಾರೆ. ಅರ್ಥಾತ್ ಅಮೆರಿಕದ ಕಂಪನಿಗಳಿಗೆ ತೆರಿಗೆ ವಿನಾಯಿತಿ ಬೇಕು ಎಂದಾದರೆ ಅವು ಈಗ ಭಾರತದಂತಹ ತೃತೀಯ ಜಗತ್ತಿನ ದೇಶಗಳಿಗೆ ಕೊಡುತ್ತಿರುವ ಗುತ್ತಿಗೆ ಕೆಲಸಗಳನ್ನು ತಡೆದು ಅವುಗಳನ್ನು ಅಮೆರಿಕದ ಪ್ರಜೆಗಳಿಗೆ ನೀಡಬೇಕು.

ಅಮೆರಿಕನ್ನರ ದೃಷ್ಟಿಯಿಂದ ನೋಡಿದರೆ ಒಬಾಮಾ ನಿರ್ಧಾರ ಜನಪರವಾಗಿಯೇ ಇದೆ ಎನ್ನಿಸುತ್ತದೆ. ಆದರೆ ಅಮೆರಿಕದಲ್ಲಿ ಕೆಲಸ ಮಾಡಿಸಿದರೆ ಅಲ್ಲಿನ ಉದ್ಯೋಗಿಗಳಿಗೆ ಸಂಬಳ ಜಾಸ್ತಿ ಕೊಡಬೇಕಾಗುತ್ತದೆ, ಆಗ ಕಂಪನಿಯ ಲಾಭ ಕಡಿಮೆಯಾಗುತ್ತದೆ ಎಂಬ ಕಾರಣಕ್ಕೆ ನೂರಾರು ಅಮೆರಿಕನ್ ಕಂಪನಿಗಳು ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಹೊರಗುತ್ತಿಗೆ ನೀಡಿವೆ. ಈ ಹೊರಗುತ್ತಿಗೆಯ ಪ್ರಕ್ರಿಯೆ ಎಷ್ಟು ದೊಡ್ಡದಾಗಿ ಬೆಳೆದಿದೆ ಎಂದರೆ ಇವತ್ತು ಬೆಂಗಳೂರು, ಮುಂಬೈ, ಗುರಗಾಂವ್, ಹೈದರಾಬಾದ್ ಮುಂತಾದ ಭಾರತದ ನಗರಗಳಲ್ಲಿ ಸಾವಿರಾರು ಬಿಪಿಓ-ಕಾಲ್‌ಸೆಂಟರ್‌ಗಳು ತಲೆಯೆತ್ತಿವೆ. ಇತ್ತೀಚಿನ ಅಂದಾಜಿನ ಪ್ರಕಾರ ಭಾರತದಲ್ಲಿ ಏನಿಲ್ಲವೆಂದರೂ ಹದಿನೇಳು ಲಕ್ಷ ಜನ ಇಂಥ ಹೊರಗುತ್ತಿಗೆ ಕೆಲಸ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲೇ ಅಂದಾಜು ಆರು ಲಕ್ಷ ಈ ಕ್ಷೇತ್ರದಲ್ಲಿದ್ದಾರೆ.


ಇದು ಭಾರತದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ನೀಗಿಸಿರಬಹುದು. ಆದರೆ ಅಮೆರಿಕನ್ನರ ಪ್ರಕಾರ ಭಾರತೀಯರು ತಮ್ಮ ಉದ್ಯೋಗವನ್ನು ಕಿತ್ತುಕೊಂಡಿದ್ದಾರೆ ಎಂಬ ಅಸಮಾಧಾನವಿದೆ. ಈಗ ಒಬಾಮಾ ಆ ಉದ್ಯೋಗಗಳಲ್ಲಿ ವಾಪಸ್ಸು ಅಮೆರಿಕಕ್ಕೆ ತರುತಿದ್ದಾರೆ ಎಂಬ ಸಂತೋಷ ಅಮೆರಿಕನ್ನರದ್ದಾಗಿದೆ.

ಆದರೆ, ಇಲ್ಲೊಂದು ಮೂಲಭೂತ ವಿಚಾರವನ್ನು ನೋಡಬೇಕಿದೆ. ಇಡೀ ಜಗತ್ತಿನ ಮೇಲೆ ಮುಕ್ತ ಮಾರುಕಟ್ಟೆಯ ನಿಯಮವನ್ನು, ಜಾಗತೀಕರಣವನ್ನು ಬಲವಂತವಾಗಿ ಹೇರಿದ್ದು ಇದೇ ಅಮೆರಿಕ. ಆ ಮೂಲಕ ಜಗತ್ತಿನ ಬಡ ದೇಶಗಳನ್ನು ಲೂಟಿ ಹೊಡೆದು ಸುಲಿದದ್ದೂ ಇದೇ ಅಮೆರಿಕ. ಭಾರತದಂತಹ ಹಿಂದುಳಿದ ದೇಶಗಳು ತಮ್ಮ ತಮ್ಮ ದೇಶಗಳ ಕೈಗಾರಿಕೆಗಳನ್ನು, ಆರ್ಥಿಕತೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ರೂಪಿಸಿದ್ದ ನೀತಿನಿಯಮಗಳನ್ನು ಬಲವಂತವಾಗಿ ರದ್ದು ಮಾಡಿಸಿದ್ದೂ ಇದೇ ಅಮೆರಿಕ.

ಹೀಗೆ, ಭಾರತದಂತಹ ಹಿಂದುಳಿದ ರಾಷ್ಟ್ರಗಳು ತಮ್ಮ ಆರ್ಥಿಕತೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ರೂಪಿಸಿಕೊಂಡ ನೀತಿ, ನಿಯಮ, ಕ್ರಮಗಳೆಲ್ಲವನ್ನೂ ಬಲವಂತವಾಗಿ ರದ್ದುಪಡಿಸಿದ ಅಮೆರಿಕವೇ ಇಂದು ತನ್ನ ದೇಶದಲ್ಲಿನ ಬಿಕ್ಕಟ್ಟನ್ನು ನಿವಾರಿಸುವುದಕ್ಕಾಗಿ, ಅಲ್ಲಿನ ಜನರಿಗೆ ಉದ್ಯೋಗ ಕಲ್ಪಿಸುವುದಕ್ಕಾಗಿ, ಆ ಮೂಲಕ ತನ್ನ ಆರ್ಥಿಕತೆಯನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಇಂಥ ರಕ್ಷಣಾತ್ಮಕ ಕ್ರಮಗಳಿಗೆ ಮುಂದಾಗಿದೆ. ಅಂದರೆ, ತನಗೊಂದು ನೀತಿ. ಬೇರೆಯವರಿಗೊಂದು ನೀತಿ.

ಯಾವುದೇ ಒಂದು ದೇಶ ಕೇವಲ ರಫ್ತುಗಳನ್ನಾಧರಿಸಿಯೇ ತನ್ನ ಆರ್ಥಿಕತೆಯನ್ನು ರೂಪಿಸಿಕೊಂಡಿದ್ದರೆ, ಸ್ವಾವಲಂಬಿ ಆರ್ಥಿಕತೆಯನ್ನು ನಿರ್ಮಾಣ ಮಾಡಿಕೊಂಡಿರದಿದ್ದರೆ ಇಂತಹ ಅಪಾಯ ತಪ್ಪಿದ್ದಲ್ಲ ಎಂಬುದಕ್ಕೆ ಇದೊಂದು ನಿದರ್ಶನವಷ್ಟೆ. ಅಮೆರಿಕದ ಕಂಪನಿಗಳೇನಾದರೂ ತಮ್ಮ ಹೊರಗುತ್ತಿಗೆಯನ್ನು ನಿಲ್ಲಿಸಿದರೆ ಅದನ್ನೇ ನಂಬಿಕೊಂಡಿರುವ ದೇಶದ ಹತ್ತು ಲಕ್ಷ ಜನ ಕೆಲಸ ಕಳೆದುಕೊಂಡು ಬೀದಿಪಾಲಾಗುತ್ತಾರೆ. ಅದರಲ್ಲಿ ಬೆಂಗಳೂರಿನವರೇ ಜಾಸ್ತಿಯಾಗಿರುತ್ತಾರೆ. ■





ಶ್ರೀಲಂಕಾ ಸೈನ್ಯ ಹಾಕಿದ ಫಾಸ್ಫರಸ್ ಬಾಂಬ್‌ಗೆ ಬಲಿಯಾದವರು...

'ಭಯೋತ್ಪಾದನೆ' ವಿರುದ್ಧ ರಾಜಪಕ್ಸೆಯ ಸೂತ್ರಗಳು

ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಅವರು 'ಯುದ್ಧಗಳನ್ನು ಗೆಲ್ಲುವುದು ಹೇಗೆ' ಎಂಬ ವಿಷಯದ ಬಗ್ಗೆ ಒಂದು ಪುಸ್ತಕವನ್ನು ಬರೆಯಬಹುದು ಎಂದು ತೆಹೆಲ್ಕಾದ ಪಿ.ಸಿ. ವಿನೋಜ್ ಕುಮಾರ್ ಅವರು ಸಲಹೆ ನೀಡಿದ್ದಾರೆ. ಕುಮಾರ್ ಅವರ ಪ್ರಕಾರ ಯುದ್ಧ ಕುರಿತಂತೆ ರಾಜಪಕ್ಸೆ ಅವರ ಸಿದ್ಧಾಂತ ಬಹಳ ಸರಳವಾದದ್ದು. ಆ ಸಿದ್ಧಾಂತದಲ್ಲಿ ಕೇವಲ ಮೂರು ಸೂತ್ರಗಳಿವೆ.

ಮೊದಲನೆಯ ಸೂತ್ರ: ಪ್ರತ್ಯಕ್ಷಸಾಕ್ಷಿಗಳು ಇರದಂತೆ ಯುದ್ಧವನ್ನು ನಡೆಸುವುದು. ಅಂದರೆ ಯುದ್ಧ ಭೂಮಿಗೆ ಮಾಧ್ಯಮಗಳಾಗಲಿ, ಅಂತರರಾಷ್ಟ್ರೀಯ ಮಾನಿಟರ್‌ಗಳಾಗಲಿ, ನಿರಾಶ್ರಿತರಿಗೆ ನೆರವು ನೀಡುವ ಸಂಸ್ಥೆಗಳಾಗಲಿ ಕಾಲಿಡದಂತೆ ನೋಡಿಕೊಳ್ಳುವುದು.

ಎರಡನೆ ಸೂತ್ರ: ಸೈನ್ಯಕ್ಕೆ ಎಲ್ಲಾ ಬಗೆಯ ಸ್ವಾತಂತ್ರ್ಯ ನೀಡುವುದು. ಅಂದರೆ ಅಂತರರಾಷ್ಟ್ರೀಯ ಒಡಂಬಡಿಕೆ ಮತ್ತು ನೀತಿ-ನಿಯಮಗಳಿಗೆ ಸೈನ್ಯವು ಕಿಂಚಿತ್ತೂ ಬೆಲೆ ಕೊಡದಂತೆ ನೋಡಿಕೊಳ್ಳುವುದು.

ಮೂರನೆ ಸೂತ್ರ: ಪ್ರತ್ಯಕ್ಷ ಸಾಕ್ಷಿಗಳು ಇಲ್ಲದಿರುವುದರಿಂದ ಮಾನವಹಕ್ಕುಗಳ ಉಲ್ಲಂಘನೆಯಂತಹ ವಿಚಾರಗಳನ್ನು ಗಾಳಿಗೆ ತೂರುವುದು.

ರಾಜಪಕ್ಸೆ ಅವರ ಈ ಮೂರು ಸೂತ್ರಗಳಿಂದಾಗಿ ಇಂದು LTTE ಯನ್ನು 'ಉಸಿರುಗಟ್ಟಿಸಿ ಕೊಂದುಹಾಕುವ' ಹಂತಕ್ಕೆ ಶ್ರೀಲಂಕಾದ ಸೈನ್ಯ ಬಂದು ನಿಂತಿದೆ. ಮಾತ್ರವಲ್ಲ LTTE ವಿರುದ್ಧದ ಶ್ರೀಲಂಕಾ ಸೈನ್ಯದ ಯುದ್ಧವನ್ನು "ಭಯೋತ್ಪಾದನೆ ವಿರುದ್ಧದ ಜಾಗತಿಕ ಯುದ್ಧ"ದ ಭಾಗವೆಂದು ಬಿಂಬಿಸುವಲ್ಲಿ ರಾಜಪಕ್ಸೆ ಯಶಸ್ವಿಯಾಗಿರುವುದರಿಂದ ಇಂದು ಲಂಕಾದ ಲಕ್ಷಾಂತರ ಅಮಾಯಕ ತಮಿಳರು ನಿರಾಶ್ರಿತರಾಗಿ, ಹೇಳಲಾಗದಷ್ಟು ಸಂಕಷ್ಟಗಳನ್ನು ಅನುಭವಿಸುತ್ತಿದ್ದರೂ ಜಗತ್ತಿನ ಯಾವುದೇ ಸರ್ಕಾರ ಅವರ ಪರವಾಗಿ ಚಕಾರವೆತ್ತಿಲ್ಲ.

ಇತ್ತೀಚೆಗೆ ಲಂಕಾದ ಸೈನ್ಯವು ಸಾರ್ವಜನಿಕರ ಮೇಲೆ ಫಾಸ್ಫರಸ್ ಮತ್ತು ನೇಪಾಮ್ ಬಾಂಬ್‌ಗಳನ್ನು ಸ್ಫೋಟಿಸಿ ಸಾವಿರಾರು ಮಂದಿಯನ್ನು ಕೊಂದಿದೆ ಎಂದು LTTE ಆರೋಪಿಸಿ ಸುಟ್ಟು ಕರಕಲಾಗಿದ್ದ ಜನರ ಶವಗಳ ಚಿತ್ರಗಳನ್ನು ಜಗತ್ತಿಗೆ ಪ್ರದರ್ಶಿಸಿದ್ದರೂ ಯಾವ ಸರ್ಕಾರವೂ ಪ್ರತಿಕ್ರಿಯಿಸಿಲ್ಲ.

ಇದಿಷ್ಟೇ ಅಲ್ಲದೆ, ಶ್ರೀಲಂಕಾದ ಯುದ್ಧ ರಂಗದಲ್ಲಿ ನಿಜವಾಗಲೂ ಏನು ನಡೆಯುತ್ತಿದೆ ಎಂದು ಖುದ್ದಾಗಿ ಪ್ರಚಾರಿಸಲು ಕೆಲ ಪತ್ರಕರ್ತರು ಪ್ರಯತ್ನಿಸಿದಾಗ ಅವರನ್ನು ಶ್ರೀಲಂಕಾದ ಸರ್ಕಾರ ತಡೆದಿದೆ ಅಥವಾ ಇಲ್ಲಸಲ್ಲದ ಆರೋಪಗಳನ್ನು ಹೊರಿಸಿ ಬಂಧನಕ್ಕೆ ದೂಡಿದೆ. ಉದಾಹರಣೆಗೆ ಈ ಹಿಂದೆ ಸೈನ್ಯದ ಅತಿರೇಕಗಳನ್ನು ಬಯಲಿಗೆಳೆಯುವ ತಮಿಳು ಪತ್ರಕರ್ತ ವಿತ್ಯಾಥರನ್ ಎಂಬುವವರು "LTTEಯೊಂದಿಗೆ ಸಂಪರ್ಕ" ಹೊಂದಿದ್ದಾರೆ ಎಂಬ ಆರೋಪದ ಮೇಲೆ ರಾಜಪಕ್ಸೆ ಅವರ ಸರ್ಕಾರ ಎರಡು ವಾರಗಳ ಕಾಲ ಅವರನ್ನು ಜೈಲಿನಲ್ಲಿಟ್ಟಿತ್ತು.

ತಮಿಳರ ಮೇಲಿನ ಈ ಹತ್ಯಾಕಾಂಡಕ್ಕೆ ಚೀನಾ, ಪಾಕಿಸ್ತಾನ ಮತ್ತು ಭಾರತ ಸರ್ಕಾರಗಳು ನೆರವು ನೀಡಿವೆ. ಮಾಜಿ ಪ್ರಧಾನಿ ರಾಜೀವ್‌ಗಾಂಧಿಯವರನ್ನು ಕೊಂದದ್ದಕ್ಕೆ ಸೇಡು ತೀರಿಸಿಕೊಳ್ಳುವ ನಿಟ್ಟಿನಲ್ಲಿ ಭಾರತದ ಸರ್ಕಾರ ಶ್ರೀಲಂಕಾ ಸೈನ್ಯಕ್ಕೆ ರೇಡಾರ್ ಮತ್ತು ಶಸ್ತ್ರಾಸ್ತ್ರಗಳನ್ನು ನೀಡಿದೆಯಲ್ಲದೆ ಮುಖ್ಯವಾದ ಮಾಹಿತಿಗಳನ್ನೂ ನೀಡಿ ಸಹಕರಿಸಿದೆ. ಅಂತಹ ಮಾಹಿತಿಯ ನೆರವಿನಿಂದಾಗಿಯೇ ಇತ್ತೀಚೆಗೆ LTTE ಸೈನ್ಯದ ಹಡಗುಗಳನ್ನು ಶ್ರೀಲಂಕಾದ ಸೈನ್ಯ ನಾಶ ಮಾಡಲು ಸಾಧ್ಯವಾಯಿತು.

ಈ ಎಲ್ಲ ಕಾರಣಗಳಿಂದಾಗಿಯೇ ಇವತ್ತು ಶ್ರೀಲಂಕಾದ ಅಧ್ಯಕ್ಷ ಮಹಿಂದ ರಾಜಪಕ್ಸೆ ಎದೆ ಉಬ್ಬಿಸಿಕೊಂಡು "ಭಯೋತ್ಪಾದನೆ ವಿರುದ್ಧ ಹೇಗೆ ಯುದ್ಧ ಸಾರಬೇಕೆಂದು ನಾನು ಜಗತ್ತಿಗೆ ತೋರಿಸಿಕೊಟ್ಟಿದ್ದೇನೆ" ಎಂದು ಕೊಚ್ಚಿಕೊಳ್ಳುತ್ತಿದ್ದಾರೆ.

ಆದರೆ ಈ "ಯಶಸ್ಸಿಗೆ" ಸಾವಿರಾರು ತಮಿಳರ ಶವಗಳು ಮತ್ತು ನಿರಾಶ್ರಿತರಾಗಿರುವ ಲಕ್ಷಾಂತರ ಜನರೇ ಸಾಕ್ಷಿಗಳಾಗಿವೆ ಎಂಬುದು ವಿಪರ್ಯಾಸ. ■

ಬೆಂಗಳೂರನ್ನು ಹೋಳು ಮಾಡುವ ಕುತಂತ್ರ

ಬೆಂಗಳೂರು ನಾಗರಿಕರನ್ನು ಬೆಚ್ಚಿಬೀಳಿಸುವಂತಹ ಸುದ್ದಿಯೊಂದು ಮುಖ್ಯಮಂತ್ರಿ ಯಡಿಯೂರಪ್ಪನ ಕ್ಯಾಂಪ್‌ನಿಂದ ಹೊರಬಿದ್ದಿದೆ.

ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರನ್ನಾಗಿ ಪರಿವರ್ತಿಸಿದ್ದು ಎಲ್ಲರಿಗೂ ಗೊತ್ತೇ ಇದೆ. ಆದರೆ ಕುಮಾರಸ್ವಾಮಿ ಮಾಡಿದ್ದಕ್ಕೆ ಏನಾದರೂ ವಿರುದ್ಧವಾದ ಕೆಲಸ ಮಾಡುವುದನ್ನೇ ತಮ್ಮ ಕಾಯಕವನ್ನಾಗಿಸಿಕೊಂಡಿರುವ ಯಡ್ಡಿ ಬೆಂಗಳೂರನ್ನು ಎರಡು ತುಂಡು ಮಾಡಲು ಹೊರಟಿದ್ದಾರೆ. ಅದರಲ್ಲಿ ಅವರು ಸಫಲರಾದರೆ ಮುಂದೆ ಹಳೇ ಬೆಂಗಳೂರು ಮತ್ತು ಹೊಸ ಬೆಂಗಳೂರು ಎಂಬ ಎರಡು 'ನಗರಗಳು' ಅಸ್ತಿತ್ವಕ್ಕೆ ಬರಲಿವೆ.

ಇಂತಹದ್ದೊಂದು ಹೊಸ ಕಲ್ಪನೆ ಚೆಡ್ಡಿ ಯಡ್ಡಿಯ ಪಡಸಾಲೆಯಲ್ಲಿ ಮೂಡಿಬಂದಿರುವುದು ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯ ಹಿನ್ನೆಲೆಯಲ್ಲಿ. ಮೊನ್ನೆ ಮೊನ್ನೆಯಷ್ಟೇ ಹೈಕೋರ್ಟ್ ಮತ್ತೊಮ್ಮೆ ಕರ್ನಾಟಕ ಸರ್ಕಾರಕ್ಕೆ ನಗರಪಾಲಿಕೆಯ ಚುನಾವಣೆಯನ್ನು ನಡೆಸದಿರುವ ಬಗ್ಗೆ ಛೀಮಾರಿ ಹಾಕಿತ್ತು. ಯಾವುದೇ ಕುಂಟುನೆಪವನ್ನು ನೀಡದೇ ಜೂನ್ ತಿಂಗಳ ಅಂತ್ಯದೊಳಗೆ ಚುನಾವಣೆಯನ್ನು ನಡೆಸಬೇಕೆಂದು ಹೈಕೋರ್ಟ್ ಆದೇಶಿಸಿತ್ತು.

ಈ ಮಧ್ಯೆ ಲೋಕಸಭಾ ಚುನಾವಣೆಯ ಪ್ರಚಾರ ಕಾರ್ಯವನ್ನು ಮುಗಿಸಿ ಬೆಂಗಳೂರಿಗೆ ವಾಪಸ್ ಬಂದ ಯಡ್ಡಿ "ಜೂನ್ 30ರೊಳಗೆ ಚುನಾವಣೆಯನ್ನು ನಡೆಸುತ್ತೇವೆ" ಎಂದು ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು. ಅಷ್ಟೇ ಅಲ್ಲ, ಮರುದಿನ ನಗರ ಪ್ರದಕ್ಷಿಣೆಯ ನೆಪದಲ್ಲಿ ಬೆಂಗಳೂರಿನ ಸುತ್ತ ಒಂದು ರೌಂಡ್ ಹಾಕಿದ ಯಡಿಯೂರಪ್ಪ ಮತ್ತೊಂದು ಪತ್ರಿಕಾಗೋಷ್ಠಿಯಲ್ಲಿ ಭರವಸೆಗಳ ಸುರಿಮಳೆಯನ್ನೇ ಸುರಿಸಿದರು. ಬೆಂಗಳೂರಿಗೆ 1000 ಕೊಳವೆ ಬಾವಿ, ಸ್ಲಂವಾಸಿಗಳಿಗೆ ಹಕ್ಕುಪತ್ರ, ಬೆಂಗಳೂರಿನ ಹೊರ ವಲಯದಲ್ಲಿ ಇನ್ನು ಎಂಟು ಮೇಲುಸೇತುವೆಗಳು, ... ಇಂತಹ ಹಲವಾರು ಯೋಜನೆಗಳನ್ನು ಯಡ್ಡಿ ಘೋಷಿಸಿದ್ದು ನೋಡಿದರೆ ಜೂನ್ ತಿಂಗಳಲ್ಲೇ ಚುನಾವಣೆ ನಡೆಯುವುದು ಬಹುತೇಕ ಖಚಿತ.




ಸೋಮಣ್ಣ

ಕುಮಾರಸ್ವಾಮಿಯವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ 100 ವಾರ್ಡ್‌ಗಳಿದ್ದ ಬೆಂಗಳೂರಿನ ನಗರಪಾಲಿಕೆಯನ್ನು ವಿಸ್ತರಿಸಿದ್ದರು. ಅದಕ್ಕಾಗಿ ಆರು ಮುನ್ಸಿಪಲ್ ಪಟ್ಟಣಗಳನ್ನು ಮತ್ತು ಒಂದು ತಾಲ್ಲೂಕು ಪಟ್ಟಣವನ್ನು ಸೇರಿಸಿ ಬೃಹತ್ ಬೆಂಗಳೂರು ನಗರ ಪಾಲಿಕೆ ಎಂದು ಹೆಸರಿಸಿದ್ದರು. ಅದರ ಹಿಂದೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳಿದ್ದವು. ಬಹುರಾಷ್ಟ್ರೀಯ ಕಂಪನಿಗಳು ನಗರದ ಹೊರವಲಯದಲ್ಲೂ ತಮ್ಮ ಕಚೇರಿಗಳನ್ನು ತೆರೆಯುವಂತೆ ಅದು ಸಹಕಾರಿಯಾಗಿತ್ತು, ಬೆಂಗಳೂರು ಎಂಬ 'ಬ್ರ್ಯಾಂಡ್'ಅನ್ನು ಇನ್ನಷ್ಟು ಗಟ್ಟಿ ಮಾಡುವ ಕುಮಾರಸ್ವಾಮಿಯವರ ಐಡಿಯಾವನ್ನು ಅಂದು ಐಟಿ ಕಂಪನಿಗಳು, ಬಂಡವಾಳಶಾಹಿಗಳು, ಆಡಳಿತಾ ಯೋಜನಾ ತಜ್ಞರು ಸ್ವಾಗತಿಸಿದ್ದರು.

ಆದರೆ ಈಗ ಯಡಿಯೂರಪ್ಪನವರು ತಮ್ಮ ರಾಜಕೀಯ ಲಾಭಕ್ಕಾಗಿ ಬೆಂಗಳೂರನ್ನು ಎರಡು ಹೋಳು ಮಾಡಲು ಹೊರಟಿದ್ದಾರೆ. "147 ವಾರ್ಡ್‌ಗಳು ಮಹಾನಗರ ಪಾಲಿಕೆಯಲ್ಲಿದ್ದರೆ ಆಡಳಿತ ದೃಷ್ಟಿಯಿಂದ ಅದು ಕಷ್ಟವಾಗುತ್ತದೆ. ಆ ಕಾರಣಕ್ಕಾಗಿ ಹಳೇ ಬೆಂಗಳೂರು ಮತ್ತು ಹೊಸ ಬೆಂಗಳೂರು ಎಂದು ವಿಂಗಡಿಸಬೇಕೆಂಬುದು" ಯಡ್ಡಿಯ ಚೆಡ್ಡಿ ಥಿಂಕ್ ಟ್ಯಾಂಕ್ ಸದಸ್ಯರ ವಾದ. ಇದನ್ನೇ ನೆಪವಾಗಿಟ್ಟುಕೊಂಡು ಇನ್ನು ಸುಮಾರು 55 ಹೊಸ ವಾರ್ಡ್‌ಗಳನ್ನು ಹುಟ್ಟುಹಾಕುವ ಬಗ್ಗೆ ಬಿಜೆಪಿಗಳು ಗಂಭೀರವಾಗಿ ಚಿಂತಿಸುತ್ತಿದ್ದಾರೆ. ಅಂದರೆ ಹಳೇ ಬೆಂಗಳೂರಿನಲ್ಲಿ 100 ವಾರ್ಡ್‌ಗಳು ಮತ್ತು ಹೊಸ ಬೆಂಗಳೂರಿಗೆ 100 ವಾರ್ಡ್‌ಗಳು... ಎಂಬುದೇ ಇವರ ಯೋಜನೆ.

ಹೀಗೆ ಎರಡು ಹೋಳಾಗಿ ಬೆಂಗಳೂರನ್ನು ಕತ್ತರಿಸುವ ಮುಖಾಂತರ ಯಡಿಯೂರಪ್ಪನವರ ಕುರ್ಚಿಯೂ ಗಟ್ಟಿಯಾಗುತ್ತದೆ ಎಂಬುದು ವಿಶೇಷ. ಯಾಕೆಂದರೆ ಮೊನ್ನೆ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಯಡ್ಡಿ ತಮ್ಮ ಕುಲಬಾಂಧವ ಮಠಾಧೀಶರಿಂದ ಒತ್ತಡ ಹೇರಿ ಗೋವಿಂದರಾಜನಗರದ ಶಾಸಕ ವಿ. ಸೋಮಣ್ಣನವರನ್ನು ಬಿಜೆಪಿಗೆ ಬರಮಾಡಿಕೊಂಡಿದ್ದರು. "ನೀವು ಪಕ್ಷಕ್ಕೆ ಬಂದರೆ ನಿಮ್ಮನ್ನು ಬೆಂಗಳೂರಿನ ಮೇಯರ್ ಮಾಡುತ್ತೇನೆ" ಎಂಬ ಆಸೆಯನ್ನೂ ಸಿಎಂ ಸಾಹೇಬರು ಸೋಮಣ್ಣನವರಿಗೆ ತೋರಿಸಿದ್ದರು.



ಯಡಿಯೂರಪ್ಪ

ಮೊದಲಿನಿಂದಲೂ ಬೆಂಗಳೂರು ಮಹಾನಗರಪಾಲಿಕೆಯ ಅಭಿವೃದ್ಧಿಯಲ್ಲಿ ಅದ್ಭುತವಾದ 'ಸುಖ ಮತ್ತು ಏಳಿಗೆ'ಯನ್ನು ಕಂಡ ಸೋಮಣ್ಣ ಸಹಜವಾಗಿಯೇ ಯಡ್ಡಿ ಬೀಸಿದ ಗಾಳಕ್ಕೆ ಬಿದ್ದರು. ಅಷ್ಟೇ ಅಲ್ಲ, ಮೇಯರ್ ಅವಧಿಯನ್ನು ಐದು ವರ್ಷಗಳ ಅವಧಿಗೆ ಫಿಕ್ಸ್ ಮಾಡುವುದಲ್ಲದೆ, ಮೇಯರ್‌ಅನ್ನು ನೇರವಾಗಿ ಜನರಿಂದ ಆಯ್ಕೆ ಮಾಡುವ ಸಂಪ್ರದಾಯವನ್ನು ಹುಟ್ಟುಹಾಕುತ್ತೇವೆ ಎಂದೂ ಯಡ್ಡಿ ಸೋಮಣ್ಣನಿಗೆ ಆಶೆ ತೋರಿಸಿದ್ದರು.

ಆದರೆ ಸೋಮಣ್ಣನವರ ಆಗಮನದಿಂದ ಯಡಿಯೂರಪ್ಪನವರ ಸಮಸ್ಯೆ ದ್ವಿಗುಣವಾಯಿತು: ಬೆಂ.ಮ.ನ.ಪಾಲಿಕೆಯ ಮೇಯರ್ ಸ್ಥಾನದ ಮೇಲೆ ಆಗಲೇ ಸಚಿವ ಆರ್. ಅಶೋಕ್ ಮತ್ತು ಸುರೇಶ್ ಕುಮಾರ್ ಕಣ್ಣಿಟ್ಟಿದ್ದರು. ಮತ್ತೊಂದೆಡೆ ಯಡ್ಡಿಯ ಬಲಗೈ ಬಂಟ ಕಟ್ಟಾ ಸುಬ್ರಮಣ್ಯ ನಾಯ್ಡುಗೂ ನಗರದ ಮೊದಲ ಪ್ರಜೆ ಆಗುವ ಆಸೆ ಇತ್ತು. ಯಾವಾಗ ಯಡ್ಡಿ ತನ್ನ ಕುಲಬಾಂಧವರಾದ ಸೋಮಣ್ಣನವರನ್ನು ರತ್ನಗಂಬಳಿ ಹಾಸಿ ಪಕ್ಷಕ್ಕೆ ಸ್ವಾಗತಿಸಿದರೋ ಆಗ ಈ ತ್ರಿಮೂರ್ತಿಗಳು ಅದನ್ನು ತೀವ್ರವಾಗಿ ಪ್ರತಿಭಟಿಸಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. 'ಆಪರೇಷನ್ ಕಮಲ' ಮುಖಾಂತರ ಪಕ್ಷಕ್ಕೆ ಬಂದ ವಲಸಿಗರಿಗೆ ಮೇಯರ್ ಅಂತಹ ಪ್ರಮುಖ ಹುದ್ದೆಯನ್ನು ನೀಡುವುದು ಸಮಂಜಸವಲ್ಲ ಎಂದು ಅನೇಕ ಬಿಜೆಪಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

ಅದಕ್ಕೆಲ್ಲ ಮುಖ್ಯ ಕಾರಣವೆಂದರೆ ಹೊಸ ನಿಯಮಗಳ ಪ್ರಕಾರ ಜನರಿಂದ ನೇರವಾಗಿ ಆಯ್ಕೆಯಾಗುವ ಮೇಯರ್ ಯಾವುದೇ ಅಡಚಣೆ ಬಂದರೂ ಐದು ವರ್ಷಗಳ ಅಧಿಕಾರಾವಧಿಯನ್ನು ಸಂಪೂರ್ಣವಾಗಿ ಪೂರೈಸುತ್ತಾರೆ. ಮಾತ್ರವಲ್ಲ, ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಿ ಆತನನ್ನು ಪದಚ್ಯುತಿ ಮಾಡಲು ಸಾಧ್ಯವಿಲ್ಲದಂತಹ ಅಪ್ರಜಾತಾಂತ್ರಿಕ ನೀತಿಯನ್ನೂ ಜಾರಿಗೆ ತರಲಾಗುತ್ತದೆ. ಇದೆಲ್ಲಕ್ಕಿಂತಲೂ ಮುಖ್ಯವಾಗಿ, ವರ್ಷಕ್ಕೆ ಸುಮಾರು ಮೂರೂವರೆ ಸಾವಿರ ಕೋಟಿ ರೂಪಾಯಿಗಳ ಬಜೆಟ್‌ಅನ್ನು ಯಾವುದಕ್ಕೆ ವೆಚ್ಚಮಾಡಬೇಕೆಂದು ಸ್ವತಂತ್ರವಾಗಿ ನಿರ್ಧರಿಸುವ ಹಕ್ಕು ಮೇಯರ್‌ಗೆ ಇರುತ್ತದೆ. ಇಂತಹ 'ಮುಖ್ಯ' ಮತ್ತು 'ಶಕ್ತಿಯುತ' ಕಾರಣಗಳಿಗಾಗಿ ಮೇಯರ್ ಹುದ್ದೆಯನ್ನಲಂಕರಿಸಲು ಅನೇಕ ಆಕಾಂಕ್ಷಿಗಳು ತೆರೆಮರೆಯಲ್ಲೇ ಕಸರತ್ತು ನಡೆಸಿದ್ದಾರೆ. ಜೊತೆಗೆ ಬೆಂಗಳೂರಿನ ಮೇಯರ್ ಸ್ಥಾನವೆಂದರೆ ಅದೊಂದು ರೀತಿಯಲ್ಲಿ 'ಬೆಂಗಳೂರಿನ ಮುಖ್ಯಮಂತ್ರಿ' ಸ್ಥಾನದಂತೆಯೇ ಇರುತ್ತಾದರಿಂದ ಆಕಾಂಕ್ಷಿಗಳ ನಡುವಿನ ಪೈಪೋಟಿ ತೀವ್ರವಾಗಿದೆ.

ಆದರೆ ಅದೆಲ್ಲ ಜಾರಿಗೆ ಬರಲು ಸಮಯ ಬೇಕಿದೆ. ಮಾತ್ರವಲ್ಲ ರಾಜಧಾನಿಯಲ್ಲಿ ತನಗೆ ಪ್ರತಿಸ್ಪರ್ಧಿಯಾಗಿ ಮತ್ತೊಂದು 'ಪವರ್ ಸೆಂಟರ್' ಇದ್ದರೆ ಅದರಿಂದ ತನಗೇ ತೊಂದರೆಯೆಂಬ ಸತ್ಯವನ್ನರಿತ ಯಡ್ಡಿ ಸದ್ಯಕ್ಕೆ ಮೇಯರ್ ಅಧಿಕಾರಾವಧಿಯನ್ನು ಐದು ವರ್ಷಗಳ ಬದಲಿಗೆ ಒಂದೇ ವರ್ಷಕ್ಕೆ ನಿಗದಿಗೊಳಿಸಿದ್ದಾರೆ.


ಅದೆಲ್ಲ ಬದಿಗಿರಲಿ, ಸೋಮಣ್ಣನ ಆಗಮನದಿಂದ ಉಂಟಾದ ಗೊಂದಲವನ್ನು ಪರಿಹರಿಸಲು ಮತ್ತು ತನ್ನ ವಿರೋಧಿ ಅನಂತಕುಮಾರ್ ಬಣದಲ್ಲಿರುವ ಶಾಸಕರನ್ನು ತನ್ನೆಡೆಗೆ ಸೆಳೆದುಕೊಳ್ಳಲು ಈಗ ಯಡ್ಡಿ ಬೆಂಗಳೂರನ್ನೇ ಎರಡು ಹೋಳು ಮಾಡಲು ಹೊರಟಿರುವುದು ಆಘಾತಕಾರಿಯಾಗಿದೆ. ತಮ್ಮ ಯೋಜನೆ ಪ್ರಕಾರ ಎಲ್ಲವೂ ಯಶಸ್ವಿಯಾದಲ್ಲಿ ಹಳೆ ಬೆಂಗಳೂರಿಗೆ ಸೋಮಣ್ಣನವರನ್ನು, ಹೊಸ ಬೆಂಗಳೂರಿಗೆ ಅಶೋಕ್ ಅವರನ್ನು ಮೇಯರ್ ಮಾಡುವ ಸ್ಕೆಚ್ ಹಾಕಿದ್ದಾರೆ ಯಡ್ಡಿ.

ಅಷ್ಟೇ ಅಲ್ಲ, ಮುಂದೆ ಸೃಷ್ಟಿಯಾಗಲಿರುವ ಎರಡು ಬೆಂಗಳೂರುಗಳಲ್ಲಿ ಒಂದಕ್ಕೆ ಕೆಂಪೇಗೌಡ ಬೆಂಗಳೂರು ಎಂದೂ, ಇನ್ನೊಂದಕ್ಕೆ ಬಸವಣ್ಣ ಬೆಂಗಳೂರು ಎಂದು ನಾಮಕರಣ ಮಾಡಿ ಆ ಮೂಲಕವೂ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿದ್ದಾರೆ. ಹೀಗೆ ಮಾಡುವ ಮೂಲಕ ರಾಜ್ಯದಲ್ಲಿ ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಪ್ರಬಲವಾಗಿರುವ ಎರಡು ಪ್ರಮುಖ ಜನಾಂಗದವರನ್ನು ಓಲೈಸುವಲ್ಲಿ ಸದ್ಯಕ್ಕೆ ಯಡ್ಡಿ ಯಶಸ್ವಿಯಾಗಬಹುದು. ಆದರೆ ಅವರ ಈ ಯೋಜನೆಯಿಂದಾಗಿ ಮುಂಬರುವ ದಿನಗಳಲ್ಲಿ ಬೆಂಗಳೂರು ನಗರಕ್ಕೂ, ಅದರಲ್ಲಿನ ನಿವಾಸಿಗಳಿಗೂ ಸಾಕಷ್ಟು ಸಮಸ್ಯೆಗಳಾಗುವುದಂತೂ ಕಟ್ಟಿಟ್ಟ ಬುತ್ತಿ.

ಮುಂದೊಂದು ದಿನ ಹಳೇ ಬೆಂಗಳೂರು ಮತ್ತು ಹೊಸ ಬೆಂಗಳೂರಿನ ಜನ ಪರಸ್ಪರ ಕಾದಾಡುವ ಸಂದರ್ಭ ಬಂದರೂ ಆಶ್ಚರ್ಯವಿಲ್ಲ. ಈ ಕಾರಣಕ್ಕೇ ಬೆಂಗಳೂರನ್ನು ತುಂಡರಿಸುವ ಯಡ್ಡಿಯ ಕಾರ್ಯತಂತ್ರವನ್ನು ಎಲ್ಲರೂ ವಿರೋಧಿಸಬೇಕಿದೆ. ಬೆಂಗಳೂರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಅಥವಾ ಆಡಳಿತ ದೃಷ್ಟಿಯಿಂದ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಚಿಂತನೆ ಈ ಯೋಜನೆಯ ಹಿಂದಿದ್ದರೆ ಅದನ್ನು ಸ್ವಾಗತಿಸಬಹುದಿತ್ತು. ಆದರೆ ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಲ್ಲಿ ರಾಜಧಾನಿಯನ್ನೇ ಇಬ್ಭಾಗ ಮಾಡುವ ಇಂತಹ ಯೋಜನೆ ಖಂಡಿತವಾಗಿಯೂ ಅಪಾಯಕಾರಿಯಾದುದು.

ಹೀಗಾಗಿ ಬೆಂಗಳೂರಿನ ಬೆಂ.ಮ.ನ.ಪಾಲಿಕೆ ಚುನಾವಣೆಯನ್ನು ನಡೆಸುವ ಸಂದರ್ಭದಲ್ಲಿ ಯಡ್ಡಿಯ ಕೈಯಿಂದ ಬೆಂಗಳೂರನ್ನು ರಕ್ಷಿಸುವ ಜವಾಬ್ದಾರಿ ಬೆಂಗಳೂರು ನಿವಾಸಿಗಳ ಕೈಯಲ್ಲಿದೆ. ಆದ್ದರಿಂದ ಎಲ್ಲರೂ ಒಕ್ಕೊರಲಿನಿಂದ "Say no to 'two Bangalore' ಎಂದು ಹೇಳಬೇಕಿದೆ. ಎರಡು ಬೆಂಗಳೂರು ಅಥವಾ ಎರಡು ಮೇಯರ್‌ಗಳ ಬದಲಾಗಿ ಬೆಂಗಳೂರಿಗರಿಗೆ ಬೇಕಿರುವುದು ಸದೃಢ ಮತ್ತು ಸಮೃದ್ಧಿಯಾದ ಒಂದೇ ಬೆಂಗಳೂರು ಎಂದು ಸ್ಪಷ್ಟಪಡಿಸಬೇಕಿದೆ.

● ಸದಾಶಿವ ಶೆಣೈ


ಪ್ರಚಂಡ

ಅರಳುವ ಮೊದಲೇ ಕಮರಿದ ನೇಪಾಳಿ ಪ್ರಜಾತಂತ್ರ

ನೇಪಾಳದಲ್ಲಿ ಈಗ ತಾನೆ ಮೊಳಕೆಯೊಡೆಯುತ್ತಿರುವ ಪ್ರಜಾತಂತ್ರವನ್ನು ರಕ್ಷಿಸುವುದಕ್ಕಾಗಿ ಪ್ರಚಂಡ ಅವರ ಈ ತೀರ್ಮಾನ ಸರಿಯಾದುದೇ ಆಗಿತ್ತು. ಆದರೆ, ನೇಪಾಳದ ಪ್ರಮುಖ ಪಕ್ಷಗಳೆಲ್ಲವೂ ಅದನ್ನು ಬೆಂಬಲಿಸುವ ಬದಲು ಅದೊಂದು ಅತಿರೇಕದ ತೀರ್ಮಾನವೆಂದು ವಿರೋಧಿಸಲಾರಂಭಿಸಿದವು. ಇದರ ಬೆನ್ನಲ್ಲೇ ನೇಪಾಳದ ಅಧ್ಯಕ್ಷ ರಾಮ್ ಬರಾನ್ ಯಾದವ್ ಕೂಡ ಪ್ರಧಾನಿ ಪ್ರಚಂಡ ಅವರ ಕ್ರಮವನ್ನು ವಿರೋಧಿಸಿ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಸಲಹೆ ಕೊಟ್ಟು ಸೇನಾ ಮುಖ್ಯಸ್ಥರಿಗೆ ಸೇವೆಯಲ್ಲಿ ಮುಂದುವರೆಯುವಂತೆ ಆದೇಶ ಕೊಟ್ಟರು. ಇದಕ್ಕೆ ಪ್ರತಿಭಟನೆಯಾಗಿ ಪ್ರಧಾನಿ ಪ್ರಚಂಡ ಅವರು ಮೇ 4ರಂದು ತಮ್ಮ ಪ್ರಧಾನಿ ಹುದ್ದೆಗೆ ರಾಜೀನಾಮೆ ಕೊಟ್ಟು ಕೆಳಗಿಳಿದಿದ್ದಾರೆ.

●ಕುಮಾರ್ ಬುರಡಿಕಟ್ಟಿ

ಒಂದೆಡೆ ತಾಲಿಬಾನ್, ಸೇನೆ ಮತ್ತು ಸರ್ಕಾರಗಳ ತಿಕ್ಕಾಟದ ಕಾರಣದಿಂದಾಗಿ ನಿರಂತರ ಆಂತರಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ಪಾಕಿಸ್ತಾನ. ಇನ್ನೊಂದೆಡೆ ಎಲ್‌ಟಿಟಿಇ ಮತ್ತು ಸಿಂಹಳೀಯ ಸೇನೆಯ ನಡುವಿನ ಅಂತರ್ಯುದ್ಧದಿಂದ ತತ್ತರಿಸುತ್ತಿರುವ ಶ್ರೀಲಂಕಾ. ಮತ್ತೊಂದೆಡೆ ಅಧಿಕಾರಕ್ಕಾಗಿ ಮಾವೋವಾದಿಗಳು, ಸೇನೆ ಮತ್ತು ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ನಡುವಿನ ಗುದ್ದಾಟದಿಂದಾಗಿ ರಾಜಕೀಯವಾಗಿ ಪ್ರಕ್ಷುಬ್ಧವಾಗಿರುವ ನೇಪಾಳ. ಈ ಮೂರೂ ದೇಶಗಳ ನಡುವೆ ವಿಶ್ವದ ಅತಿದೊಡ್ಡ ಪ್ರಜಾತಂತ್ರವೆಂದು ಬೀಗುತ್ತಿರುವ ಭಾರತ. ಇದು ಇಂದಿನ ದಕ್ಷಿಣ ಏಶಿಯಾದ ರಾಜಕೀಯ ಪರಿಸ್ಥಿತಿ.


ಮಾವೋವಾದಿ ಗೆರಿಲ್ಲಾ

ಮೊನ್ನೆಮೊನ್ನೆಯ ತನಕ ಪಾಕಿಸ್ತಾನದಲ್ಲಿ ಮತ್ತೆ ಸೇನಾಡಳಿತ ಪ್ರಾರಂಭವಾಗುವ ಭೀತಿ ಆವರಿಸಿತ್ತು. ಪಾಕ್ ಬಿಕ್ಕಟ್ಟು ಒಂದು ಹಂತಕ್ಕೆ ತಲುಪುತ್ತಿದ್ದಂತೆ ಇತ್ತ ಶ್ರೀಲಂಕಾದಲ್ಲಿ ಅಂತರ್ಯುದ್ಧ ಅತಿರೇಕಕ್ಕೆ ಹೋಯಿತು. ದ್ವೀಪರಾಷ್ಟ್ರದಲ್ಲಿನ ಅಂತರ್ಯುದ್ಧ ಮುಂದುವರೆಯುತ್ತಿರುವಾಗಲೇ ಅತ್ತ ನೇಪಾಳದಲ್ಲಿ ಪ್ರಧಾನಿ ಪ್ರಚಂಡ ಅವರ ರಾಜೀನಾಮೆಯಿಂದಾಗಿ ಆ ದೇಶದಲ್ಲೂ ಗಲಭೆಗಳು ಪ್ರಾರಂಭವಾಗಿವೆ.

ಸೇನಾ ಮುಖ್ಯಸ್ಥರಾದ ಜನರಲ್ ರುಕ್ಮಾಂಗದ ಕಟವಾಲ್ ಅವರನ್ನು ಪ್ರಚಂಡ ವಜಾ ಮಾಡಿದ್ದು, ಅಧ್ಯಕ್ಷ ರಾಮ್ ಬರಾನ್ ಯಾದವ್ ಅವರು ಈ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಪ್ರಧಾನಿಗೆ ಸಲಹೆ ಕೊಟ್ಟದ್ದು, ಅದನ್ನು ವಿರೋಧಿಸಿ ಪ್ರಚಂಡ ಅವರ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದು, ಪ್ರಧಾನಿ ಪರ-ವಿರೋಧವಾಗಿ ರಾಜಧಾನಿ ಕಠ್ಮಂಡುನಲ್ಲಿ ಸಾವಿರಾರು ಜನ ಬೀದಿಗಿಳಿದದ್ದು - ಈ ಎಲ್ಲಾ ಬೆಳವಣಿಗೆಗಳು ಹಿಮಾಲಯದ ಪುಟ್ಟ ದೇಶವಾದ ನೇಪಾಳವನ್ನು ಮತ್ತೊಂದು ರಾಜಕೀಯ ಬಿಕ್ಕಟ್ಟಿಗೆ ದೂಡಿವೆ. ನೇಪಾಳದಲ್ಲಿ ಇಂದು ಉಲ್ಬಣಗೊಂಡಿರುವ ಬಿಕ್ಕಟ್ಟನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೆಂದರೆ ಅದರ ಪ್ರಸ್ತುತ ರಾಜಕೀಯ ಪರಿಸ್ಥಿತಿಯನ್ನು ಹಾಗೂ ಅದರ ಚರಿತ್ರೆಯನ್ನೊಮ್ಮೆ ಸ್ಥೂಲವಾಗಿ ಅವಲೋಕಿಸಬೇಕು.

ದಶಕದ ಅಂತರ್ಯುದ್ಧ

ನಮ್ಮಲ್ಲಿರುವಂತೆ ನೇಪಾಳದಲ್ಲಿ ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಿನ್ನೂ ಪರಿಪೂರ್ಣವಾಗಿ ಜಾರಿಗೆ ಬಂದಿಲ್ಲ. ತೀರಾ ಇತ್ತೀಚಿನ ತನಕ, ಅಂದರೆ 2006ರ ತನಕವೂ ಅಲ್ಲಿ ಹಳೆಯ ಊಳಿಗಮಾನ್ಯ ರಾಜಪ್ರಭುತ್ವ ವ್ಯವಸ್ಥೆಯೇ ಅಸ್ತಿತ್ವದಲ್ಲಿತ್ತು. ಸಂಸತ್ತು ಅಸ್ತಿತ್ವದಲ್ಲಿತ್ತಾದರೂ ಅದು ನಾಮಕಾವಸ್ಥೆಯಾಗಿತ್ತು, ಸಂಪೂರ್ಣ ಅಧಿಕಾರ ದೊರೆಯ ಕೈಯಲ್ಲಿತ್ತು, ಅಲ್ಲಿನ ಸೈನ್ಯವೂ ರಾಜನ ನಿಯಂತ್ರಣದಲ್ಲಿಯೇ ಇತ್ತು. ವಾಸ್ತವದಲ್ಲಿ ಅದು ರಾಷ್ಟ್ರೀಯ ಸೇನೆಯಾಗಿರದೆ ರಾಜನ ಸೇನೆಯಾಗಿತ್ತು. ಆದ್ದರಿಂದಲೇ ಅದನ್ನು ನೇಪಾಳಿ ರಾಯಲ್ ಆರ್ಮಿ ಎಂದೇ ಕರೆಯಲಾಗುತ್ತಿತ್ತು.

ಮಾವೋವಾದಿಗಳ ಪಕ್ಷವಾಗಿರುವ ಕಮ್ಯೂನಿಸ್ಟ್ ಪಾರ್ಟಿ ಆಫ್ ನೇಪಾಳ್ (ಮಾವೋವಾದಿ) ಕೂಡ 1996ರ ತನಕ ಈ ನಾಮಕಾವಸ್ಥೆ ಸಂಸತ್ತಿನ ಭಾಗವಾಗಿಯೇ ಇತ್ತು. ಅದರ ಪರಮೋಚ್ಚ ನಾಯಕರಾದ ಪ್ರಚಂಡ ಅಲಿಯಾಸ್ ಪುಷ್ಪ ಕಮಲ್ ದಹಲ್‌ನ ನೇತೃತ್ವದಲ್ಲಿ ಮಾವೋವಾದಿಗಳು 1996ರ ಫೆಬ್ರವರಿ 13ರಂದು ಇಡೀ ದೇಶದಾದ್ಯಂತ ಏಕಕಾಲಕ್ಕೆ ಸಶಸ್ತ್ರ ದಾಳಿಗಳನ್ನು ನಡೆಸುವ ಮೂಲಕ ನೇಪಾಳದಲ್ಲಿ ಪ್ರಜಾಯುದ್ಧವನ್ನು ಪ್ರಾರಂಭಿಸಿದರು. ಈ ಪ್ರಥಮ ದಾಳಿಯಲ್ಲೇ ಅವರು ಒಂದು ಬಹುರಾಷ್ಟ್ರೀಯ ಕಂಪನಿಯನ್ನು, ಒಬ್ಬ ಬಡ್ಡಿ ವ್ಯಾಪಾರಿಯನ್ನು, ಒಂದು ವಿದೇಶಿ ಕಾರ್ಖಾನೆಯನ್ನು ಹಾಗೂ ಕೆಲವು ಪೊಲೀಸ್ ಠಾಣೆಗಳನ್ನು ಸಾಂಕೇತಿಕವಾಗಿ ತಮ್ಮ ಟಾರ್ಗೆಟ್ ಮಾಡಿಕೊಳ್ಳುವ ಮೂಲಕ ಮುಂಬರುವ ಅಂತರ್ಯುದ್ಧದಲ್ಲಿ ಇವರೇ ಶತ್ರುಗಳಾಗಿರುತ್ತಾರೆ ಎಂಬುದರ ಸೂಚನೆ ಕೊಟ್ಟಿದ್ದರು.

ಅಂದು ಪ್ರಾರಂಭವಾದ ಮಾವೋವಾದಿಗಳ ಪ್ರಜಾಯುದ್ಧ ಬರೋಬ್ಬರಿ ಹತ್ತು ವರ್ಷಗಳ ಕಾಲ ಮುಂದುವರೆಯಿತು. ಈ ಅಂತರ್ಯುದ್ಧದಲ್ಲಿ ಏನಿಲ್ಲವೆಂದರೂ 13,000 ಜನ ಬಲಿಯಾಗಿದ್ದರು. ಅಲ್ಲದೇ ಸುಮಾರು ಒಂದೂವರೆ ಲಕ್ಷದಷ್ಟು ಜನ ನಿರಾಶ್ರಿತರಾಗಿದ್ದರು.

ಈ ಸುದೀರ್ಘ ಅವಧಿಯುದ್ದಕ್ಕೂ ಅವರು ಪೊಲೀಸರೊಂದಿಗೆ, ನೇಪಾಳಿ ರಾಯಲ್ ಆರ್ಮಿಯೊಂದಿಗೆ ಕಾದಾಡುತ್ತಾ ಸೇನೆಯ ಶಸ್ತ್ರಾಸ್ತ್ರಗಳನ್ನು ಲೂಟಿ ಹೊಡೆಯುತ್ತಾ ನೇಪಾಳದಲ್ಲಿ ಪ್ರಬಲ ಶಕ್ತಿಯಾಗಿ ಬೆಳೆದರು. ನೇಪಾಳ ಎದುರಿಸುತ್ತಿರುವ ಸಮಸ್ಯೆಗಳನ್ನು, ಅದನ್ನು ಯಶಸ್ವಿಯಾಗಿ ನಿಭಾಯಿಸುವಲ್ಲಿ ಇನ್ನಿತರ ಪಕ್ಷಗಳು ಮತ್ತು ರಾಜ ವಿಫಲವಾಗುತ್ತಿರುವುದನ್ನು ಎಳೆಎಳೆಯಾಗಿ ಬಿಚ್ಚಿಟ್ಟ ಮಾವೋವಾದಿಗಳು ಸಮೃದ್ಧ ನೇಪಾಳ ಸೃಷ್ಟಿಯಾಗಬೇಕೆಂದರೆ ಅದು ಸಶಸ್ತ್ರ ಕ್ರಾಂತಿಯಿಂದ ಮಾತ್ರವೇ ಸಾಧ್ಯ ಎಂದು ಜನರ ಮನವೊಲಿಸುವಲ್ಲಿ ಸಫಲರಾದರು. ಪರಿಣಾಮವಾಗಿ, ಇಡೀ ದೇಶದಾದ್ಯಂತ ಜನರು, ಅದರಲ್ಲೂ ವಿಶೇಷವಾಗಿ ಯುವಕರು ಮತ್ತು ಮಹಿಳೆಯರು ತಂಡೋಪತಂಡವಾಗಿ ಮಾವೋವಾದಿಗಳನ್ನು ಬೆಂಬಲಿಸುತ್ತಾ ಮಾವೋವಾದಿಗಳು ಸ್ಥಾಪಿಸಿದ್ದ ಸಶಸ್ತ್ರ ಗೆರಿಲ್ಲಾ ಸೇನೆಯನ್ನು ಸೇರಿದರು. ಪರಿಣಾಮವಾಗಿ ಆರಂಭದಲ್ಲಿ ಬೆರಳೆಣಿಕೆಯಷ್ಟಿದ್ದ ಮಾವೋವಾದಿ ಗೆರಿಲ್ಲಾಗಳ ಸಂಖ್ಯೆ ಸುಮಾರು ಮೂವತ್ತು ಸಾವಿರಕ್ಕೇರಿತು. ನೇಪಾಳದ ಬೆಟ್ಟಗುಡ್ಡಗಳಿಂದ ಕೂಡಿದ ದುರ್ಗಮ ಗ್ರಾಮೀಣ ಪ್ರದೇಶದಲ್ಲಿ ತಮ್ಮದೇ ಆದ ಸ್ಥಾವರ ಪ್ರದೇಶಗಳನ್ನು ಮಾವೋವಾದಿಗಳು ನಿರ್ಮಿಸಿದರು. ಅಲ್ಲಿಂದ ರಾಜನ ಸೇನೆಯನ್ನು ಓಡಿಸಿ, ರಾಜನ ಆಡಳಿತವನ್ನು ಕೊನೆಗೊಳಿಸಿ ತಮ್ಮದೇ ಪರ್ಯಾಯ ಸರ್ಕಾರ ಸ್ಥಾಪಿಸಿದರು.

ಹತ್ತು ವರ್ಷಗಳ ಈ ಸುದೀರ್ಘ ಪ್ರಜಾಯುದ್ಧದಲ್ಲಿ ಕಠ್ಮಂಡುವಿನಂಥ ಪ್ರಮುಖ ನಗರಗಳನ್ನು ಹೊರತುಪಡಿಸಿ ಇಡೀ ಗ್ರಾಮೀಣ ನೇಪಾಳ ಮಾವೋವಾದಿಗಳ ಆಡಳಿತಕ್ಕೆ ಒಳಗಾಯಿತು. 2006ರ ವೇಳೆಗೆ, ಮನಸ್ಸು ಮಾಡಿದರೆ ಒಂದೇ ವಾರದಲ್ಲಿ ಕಠ್ಮಂಡುವನ್ನೂ ಸುತ್ತುವರೆದು ವಶಪಡಿಸಿಕೊಂಡು ಅಧಿಕಾರಕ್ಕೇರುವ ಪರಿಸ್ಥಿತಿಯಲ್ಲಿ ಮಾವೋವಾದಿಗಳಿದ್ದರು. ಆಗ ಅವರಿಗೆ ಕಾಡಿದ್ದು ಒಂದೇ ಪ್ರಶ್ನೆ, ಅಧಿಕಾರವನ್ನೇನೂ ವಶಪಡಿಸಿಕೊಳ್ಳಬಹುದು. ಆದರೆ, ಅದನ್ನು ಮುಂದುವರೆಸಲು ಸಾಧ್ಯವೆ?


ಅವರ ಈ ಅನುಮಾನದ ಹಿಂದೆ ಒಂದು ತರ್ಕವಿತ್ತು. ನೇಪಾಳ ಹೆಚ್ಚೆಂದರೆ ಮೂರು ಕೋಟಿ ಜನಸಂಖ್ಯೆಯಿರುವ ಪುಟ್ಟದೇಶ. ಅಂದರೆ, ನಮ್ಮ ಕರ್ನಾಟಕದ ಅರ್ಧದಷ್ಟು. ಅದರಲ್ಲಿ ಸುಮಾರು ಎಪ್ಪತ್ತು ಲಕ್ಷದಷ್ಟು ಜನ ಭಾರತದಲ್ಲೇ ಚಿಕ್ಕಪುಟ್ಟ ಉದ್ಯೋಗ ಮಾಡಿಕೊಂಡಿದ್ದಾರೆ. ಪ್ರಾರಂಭದಿಂದಲೂ ನೇಪಾಳಿ ಸರ್ಕಾರಕ್ಕೆ, ರಾಜನಿಗೆ ಭಾರತ ಬೆಂಬಲ ನೀಡುತ್ತಲೇ ಬಂದಿದೆ. ಮಾವೋವಾದಿಗಳ ಸಶಸ್ತ್ರ ಹೋರಾಟ ಉನ್ನತ ಹಂತದಲ್ಲಿದ್ದಾಗ ಅದನ್ನು ದಮನ ಮಾಡುವುದಕ್ಕೆ ಭಾರತದ ಸೇನೆಯೇ ತನ್ನ ಹೆಲಿಕಾಪ್ಟರ್‌ಗಳನ್ನು ಕಳಿಸಿಕೊಟ್ಟಿತ್ತು. ಇಲ್ಲಿ ಭಾರತದಲ್ಲಿ ಬಂಧಿತರಾಗಿದ್ದ ಅನೇಕ ಮಾವೋವಾದಿ ನಾಯಕರನ್ನು ನೇಪಾಳಿ ಸರ್ಕಾರದ ವಶಕ್ಕೆ ಒಪ್ಪಿಸಿತ್ತು.


ಭಾರತದ ಸರ್ಕಾರ ಮಾವೋವಾದಿಗಳನ್ನು ಹೊಸಕಿ ಹಾಕುವುದಕ್ಕೆ ನೇಪಾಳಿ ರಾಜನಿಗೆ ಈ ಪರಿಯಾಗಿ ಸಹಾಯ ಮಾಡಿದ್ದಕ್ಕೆ ಕಾರಣವೂ ಇತ್ತು. ಭಾರತದ ದೊಡ್ಡ ದೊಡ್ಡ ಬಂಡವಾಳಶಾಹಿಗಳು ನೇಪಾಳವನ್ನು ಹತ್ತಾರು ವರ್ಷಗಳ ಕಾಲ ನಿರಂತರವಾಗಿ ಲೂಟಿ ಹೊಡೆಯುತ್ತಾ ಬಂದಿದ್ದಾರೆ. ಭಾರತ ಸರ್ಕಾರವೂ ಕೂಡ ತನಗೆ ಅನುಕೂಲವಾಗುವಂತೆ ನೇಪಾಳಿ ಸರ್ಕಾರದೊಂದಿಗೆ ಅನೇಕ ಅಪಮಾನ ಒಪ್ಪಂದಗಳನ್ನು ಮಾಡಿಕೊಂಡಿತ್ತು. ಅಧಿಕಾರಕ್ಕೆ ಬಂದರೆ ಭಾರತದೊಂದಿಗಿನ ಎಲ್ಲಾ ಅಸಮಾನ ಒಪ್ಪಂದಗಳನ್ನು ರದ್ದುಗೊಳಿಸುವುದಾಗಿ, ಭಾರತೀಯ ಬಂಡವಾಳಶಾಹಿಗಳ ಲೂಟಿಯನ್ನು ಕೊನೆಗೊಳಿಸುವುದಾಗಿ ಮಾವೋವಾದಿಗಳು ಮೊದಲಿನಿಂದಲೂ ಪ್ರಚಾರ ಮಾಡುತ್ತಾ ಬಂದಿದ್ದರು. ಆದ್ದರಿಂದ ಹೇಗಾದರೂ ಮಾಡಿ ಅವರನ್ನು ಹೊಸಕಿ ಹಾಕುವುದಕ್ಕೆ ಭಾರತ ಸರ್ಕಾರ ಸರ್ವ ಪ್ರಯತ್ನಗಳನ್ನೂ ಮಾಡಿತ್ತು.


ಇನ್ನೊಂದೆಡೆಗೆ, ಅಮೆರಿಕವೂ ಮಾವೋವಾದಿಗಳನ್ನು ಬಗ್ಗು ಬಡಿಯುವುದಕ್ಕೆ ನೇಪಾಳಿ ಸರ್ಕಾರಕ್ಕೆ ಬೆಂಬಲವಾಗಿ ನಿಂತಿತ್ತು. 2002ನೇ ಇಸ್ವಿಯೊಂದರಲ್ಲೇ ಅಮೆರಿಕ ಸರ್ಕಾರ 12 ಮಿಲಿಯನ್ ಡಾಲರ್‌ನಷ್ಟು ದುಡ್ಡನ್ನು ನೇಪಾಳಿ ರಾಯಲ್ ಆರ್ಮಿಗೆ ಕೊಟ್ಟಿತ್ತಲ್ಲದೇ ಸುಮಾರು 5000 ಅತ್ಯಾಧುನಿಕ ರೈಫಲ್‌ಗಳನ್ನೂ ಒದಗಿಸಿತ್ತು. ಏಕೆಂದರೆ, ಇಡೀ ವಿಶ್ವದಲ್ಲಿ ಅಮೆರಿಕ ನಡೆಸುತ್ತಿರುವ ಅತ್ಯಾಚಾರಗಳನ್ನು, ಮಿಲಿಟರಿ ದೌರ್ಜನ್ಯಗಳನ್ನು ಮಾವೋವಾದಿಗಳು ಖಂಡತುಂಡವಾಗಿ ಖಂಡಿಸುತ್ತಿದ್ದರು. ಅಧಿಕಾರಕ್ಕೇರಿದರೆ ನೇಪಾಳಿ ನೆಲದಲ್ಲಿ ಅಮೆರಿಕದ ಆಟಗಳು ನಡೆಯದಂತೆ ತಡೆಯುವುದಾಗಿ ಘೋಷಿಸಿದ್ದರು.

ನೇಪಾಳಿ ರಾಯಲ್ ಆರ್ಮಿಯೊಂದಿಗೆ ಬರೋಬ್ಬರಿ ಹತ್ತು ವರ್ಷಗಳಷ್ಟು ಸುದೀರ್ಘ ಕಾಲ ಕಾದಾಡಿ ಇನ್ನೇನು

▶▶▶


ಜನರಲ್ ರುಕ್ಮಾಂಗದ ಕಟುವಾಲ್


ಗಿರಿಜಾ ಪ್ರಸಾದ್ ಕೊಯಿರಾಲ


ಅಧ್ಯಕ್ಷ ರಾಮ್ ಬರಾನ್ ಯಾದವ್

ರಾಜಧಾನಿ ಕಠ್ಮಂಡುವನ್ನು ವಶಪಡಿಸಿಕೊಂಡು ಅಧಿಕಾರ ಕ್ಕೇರುವ ಹಂತಕ್ಕೆ ಬಂದಾಗ ಮಾವೋವಾದಿಗಳಿಗೆ ಒಂದು ವಿಚಾರವಂತೂ ಸ್ಪಷ್ಟವಾಗಿತ್ತು. ವಿಶ್ವದ ಎರಡನೇ ಅತಿದೊಡ್ಡ standing armyಯನ್ನು ಹೊಂದಿರುವ ಭಾರತ, ವಿಶ್ವದಲ್ಲೇ ಅತಿ ಶಕ್ತಿಶಾಲಿ ಮಿಲಿಟರಿಯನ್ನು ಹೊಂದಿರುವ ಅಮೆರಿಕಗಳನ್ನು ಎದುರು ಹಾಕಿಕೊಂಡು ಅಧಿಕಾರ ನಡೆಸು ವುದು ಅಸಾಧ್ಯ ಎಂಬುದು ಮಾವೋವಾದಿಗಳಿಗೆ ಮನವರಿಕೆಯಾಗಿತ್ತು. ಭಾರತದ ದೈತ್ಯ ಮಿಲಿಟರಿಯೇ ನಾದರೂ ನೇಪಾಳಕ್ಕೆ ನುಗ್ಗಿದರೆ ಒಂದೇ ದಿನದಲ್ಲಿ ಮಾವೋ ವಾದಿಗಳ ಸರ್ಕಾರವನ್ನು ಬುಡಮೇಲು ಮಾಡಿಬಿಡುತ್ತೆ ಎಂಬ ವಾಸ್ತವದ ಬಗ್ಗೆ ಯಾರಿಗೂ ಅನುಮಾನಗಳಿರಲಿಲ್ಲ. ಆದ್ದರಿಂದಲೇ ಅವರು ಸಶಸ್ತ್ರ ಹೋರಾಟದ ಮೂಲಕ ಅಧಿಕಾರಕ್ಕೇರುವ ಬದಲು ಚುನಾವಣೆಯ ಮೂಲಕ ಅಧಿಕಾರಕ್ಕೇರುವ ಹೊಸದೊಂದು ಕಾರ್ಯತಂತ್ರ ರೂಪಿಸಿದರು.

ಮೊದಲು ರಾಜನನ್ನು ಮುಗಿಸಿದರು!

ಸೈದ್ಧಾಂತಿಕವಾಗಿ ನೋಡುವುದಾದರೆ ಮಾವೋವಾದಿ ಗಳು ಕಟ್ಟಾ ಕಮ್ಯೂನಿಸ್ಟರು. ನೇಪಾಳವನ್ನು ಒಂದು ಸಮಾಜವಾದಿ ಸಮಾಜವನ್ನಾಗಿ, ನಂತರ ಒಂದು ಕಮ್ಯೂನಿಸ್ಟ್ ದೇಶವನ್ನಾಗಿ ಕಟ್ಟುವುದು ಅವರ ಅಂತಿಮ ಗುರಿ. ಆದರೆ ಆ ಗುರಿ ಸಾಧಿಸುವುದಕ್ಕೆ ಅವರು ಅನುಸರಿಸಿದ ಕಾರ್ಯತಂತ್ರಗಳು ಹಲವು.

ಮೊಟ್ಟಮೊದಲನೆಯದಾಗಿ ನೇಪಾಳದಲ್ಲಿ ರಾಜಪ್ರಭುತ್ವ ವನ್ನು ಕಿತ್ತೆಸೆದು, ಅದರ ಜಾಗದಲ್ಲಿ ಪ್ರಜಾತಂತ್ರವನ್ನು ಪ್ರತಿಷ್ಠಾಪಿಸಬೇಕೆಂಬ ಒಂದೇ ಒಂದು ಬೇಡಿಕೆಯನ್ನಿಟ್ಟು ದೇಶದಲ್ಲಿದ್ದ ಎಲ್ಲಾ ರಾಜಕೀಯ ಶಕ್ತಿಗಳನ್ನು ರಾಜನ ವಿರುದ್ಧ ಒಟ್ಟುಗೂಡಿಸಿದರು. ನೇಪಾಳದಲ್ಲಿ ಮುಖ್ಯ ವಾಹಿನಿಯ ಪ್ರಮುಖ ರಾಜಕೀಯ ಪಕ್ಷಗಳಾಗಿರುವ ನೇಪಾಳಿ ಕಾಂಗ್ರೆಸ್, ಯುಎಂಎಲ್, ಮಾದೇಶಿ ಜನಾಧಿಕಾರ


ಮಾವೋವಾದಿಗಳ ಪ್ರಜಾ ವಿಮೋಚನಾ ಸೇನೆ

ಫೋರಂ ಮುಂತಾದವುಗಳೊಂದಿಗೆ ಅಧಿಕೃತವಾಗಿ ಮೈತ್ರಿ ರೂಪಿಸಿಕೊಂಡು ರಾಜನನ್ನು ಏಕಾಂಗಿ ಮಾಡಿದರು. ನೇಪಾಳದಲ್ಲಿ ಶಾಂತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸುವುದರ ಕುರಿತಂತೆ 2005ರ ನವೆಂಬರ್ 22ರಂದು ನೇಪಾಳಿ ಮುಖ್ಯವಾಹಿನಿಯ ಏಳು ಪಕ್ಷಗಳು ಮತ್ತು ಮಾವೋವಾದಿಗಳ ನಡುವೆ 12 ಅಂಶಗಳ ಒಡಂಬಡಿಕೆಗೆ ಸಹಿ ಬಿತ್ತು.

ನೇಪಾಳ ಇಷ್ಟೊಂದು ಹಿಂದುಳಿದಿರುವುದಕ್ಕೆ ರಾಜನೇ ಕಾರಣ ಎಂದು ಜನರ ಮನವೊಲಿಸುವಲ್ಲಿ ಮಾವೋವಾದಿ ಗಳು ಯಶಸ್ವಿಯಾದ್ದರಿಂದ ರಾಜನ ವಿರುದ್ಧ ನೇಪಾಳದ ಬೀದಿಬೀದಿಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಜನ ಹೋರಾಟಕ್ಕಿಳಿದರು. ನೇಪಾಳದಲ್ಲಿ ಪ್ರಜಾತಂತ್ರ ಸ್ಥಾಪನೆಗಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲೂ ಬೆಂಬಲ ಗಳಿಸುವಲ್ಲಿ ಯಶಸ್ವಿಯಾದರು.

ಮಾವೋವಾದಿಗಳ ಈ ಕಾರ್ಯತಂತ್ರ ಚೆನ್ನಾಗಿಯೇ ಕೆಲಸ ಮಾಡಿತು. ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಅಂತರಾಷ್ಟ್ರೀಯ ಸಮುದಾಯವೂ ಬೆಂಬಲ ವ್ಯಕ್ತಪಡಿಸಿತು. 'ವಿಶ್ವದಲ್ಲೇ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿರುವ ಭಾರತ ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಏಕೆ ಬೆಂಬಲಿಸುತ್ತಿಲ್ಲ?' ಎಂಬ ಪ್ರಶ್ನೆಗೆ ಭಾರತದ ಬಳಿ ಉತ್ತರವೂ ಇರಲಿಲ್ಲ. ಅನಿವಾರ್ಯವಾಗಿ ನೇಪಾಳದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಭಾರತ ಬೆಂಬಲಿಸಲೇಬೇಕಾಯಿತು.


2006ರಲ್ಲಿ ದೊರೆ ಗ್ಯಾನೇಂದ್ರನನ್ನು ಕೆಳಗಿಳಿಸಲಾಯಿತು. ನವೆಂಬರ್ 21ರಂದು ಪ್ರಧಾನಿ ಗಿರಿಜಾ ಪ್ರಸಾದ್ ಕೊಯಿರಾಲ ಮತ್ತು ಮಾವೋವಾದಿ ನಾಯಕ ಪ್ರಚಂಡರ ನಡುವೆ 'ಶಾಂತಿ ಒಪ್ಪಂದ'ಕ್ಕೆ ಸಹಿ ಬೀಳುವುದರೊಂದಿಗೆ ಮಾವೋವಾದಿಗಳು ನೂತನ ನೇಪಾಳ ಮಧ್ಯಂತರ ಸರ್ಕಾರದಲ್ಲಿ ಪಾಲ್ಗೊಂಡರು. ಈ ಒಪ್ಪಂದದ ಪ್ರಕಾರ ಮಾವೋವಾದಿ ಗೆರಿಲ್ಲಾ ಪಡೆಯಾದ ಪ್ರಜಾ ವಿಮೋಚನಾ ಸೇನೆಯು ತನ್ನ ಶಸ್ತ್ರಾಸ್ತ್ರಗಳನ್ನು ವಿಶ್ವಸಂಸ್ಥೆಯ ಪರಿವೀಕ್ಷಣೆಯಲ್ಲಿ ಬದಿಗಿಟ್ಟಿತು. ಮಾವೋವಾದಿ ಗೆರಿಲ್ಲಾಗಳು ಇಟ್ಟಿರುವ ಶಸ್ತ್ರಾಸ್ತ್ರಗಳು ವಿಶ್ವಸಂಸ್ಥೆಯ ಪರಿವೀಕ್ಷಣೆಯಲ್ಲಿವೆಯಾದರೂ ಅವು ಯಾವಾಗ ಬೇಕಾದರೂ ಗೆರಿಲ್ಲಾಗಳಿಗೆ ಸಿಗುವಂತಿವೆ.

ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಹೋರಾಟ

ರಾಜನನ್ನೇನೋ ಕೆಳಗಿಳಿಸುವಲ್ಲಿ ಮಾವೋವಾದಿಗಳು ಯಶಸ್ವಿಯಾದರು. ಅದಕ್ಕಿಂತಲೂ ತ್ರಾಸದಾಯಕವಾದ ಕೆಲಸವಿನ್ನೂ ಬಾಕಿಯಿತ್ತು. ಅದೇಂದರೆ, ನೇಪಾಳಿ ನೆಲದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು. ಅದಕ್ಕಾಗಿ ಒಂದು ಸಂವಿಧಾನವನ್ನು ರಚಿಸುವುದು.

2008ರ ಏಪ್ರಿಲ್‌ನಲ್ಲಿ ನೇಪಾಳಿ ಚರಿತ್ರೆಯಲ್ಲೇ ಮೊದಲ ಬಾರಿಗೆ ಪ್ರಜಾತಾಂತ್ರಿಕ ಚುನಾವಣೆಗಳು ನಡೆದವು. ಸಂವಿಧಾನ ಸಭೆಗಾಗಿ ನಡೆದ ಈ ಚುನಾವಣೆಯಲ್ಲಿ ಎಲ್ಲಾ ರಾಜಕೀಯ ಪಂಡಿತರ ಲೆಕ್ಕಾಚಾರಗಳನ್ನು ತಲೆ ಕೆಳಗೆ ಮಾಡುವಂತೆ ಮಾವೋ ವಾದಿಗಳು 574ರಲ್ಲಿ 220 ಸೀಟುಗಳನ್ನು ಗೆದ್ದು ಅತಿದೊಡ್ಡ ಶಕ್ತಿಯಾಗಿ ಹೊರಹೊಮ್ಮಿದರು. ಇದರ ಅರ್ಧದಷ್ಟು ಸೀಟುಗಳನ್ನು ಗೆದ್ದ (110 ಸೀಟುಗಳನ್ನು) ನೇಪಾಳಿ ಕಾಂಗ್ರೆಸ್ ಎರಡನೇ ಸ್ಥಾನ ಪಡೆದರೆ 103 ಸೀಟುಗಳನ್ನು ಪಡೆದ ಯುಎಮ್‌ಎಲ್ ಮತ್ತು 52 ಸ್ಥಾನಗಳನ್ನು ಪಡೆದ ಮಾದೇಶಿ ಜನಾಧಿಕಾರ ಫೋರಂ ಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನಗಳಿಗೆ ತೃಪ್ತಿಪಟ್ಟುಕೊಳ್ಳಬೇಕಾ ಯಿತು.

ಈ ಚುನಾವಣೆಗಳು ವಾಸ್ತವದಲ್ಲಿ ಮಾವೋವಾದಿಗಳಿಗಿದ್ದ ಜನಬೆಂಬಲವನ್ನು ಇಡೀ ಜಗತ್ತಿಗೆ ತೋರಿಸಿದ್ದವು. ಭಾರತ, ಅಮೆರಿಕಗಳನ್ನೂ ಒಳಗೊಂಡಂತೆ ಇಡೀ ಜಗತ್ತಿನ ಎಲ್ಲಾ ದೇಶಗಳ ಸರ್ಕಾರಗಳೂ ಮಾವೋವಾದಿಗಳನ್ನು ಭಯೋತ್ಪಾದಕರೆಂದು ಬಿಂಬಿಸಿ ಹೊಸಕಿ ಹಾಕುವುದಕ್ಕೆ ಪ್ರಯತ್ನಿಸುತ್ತಿದ್ದರೆ ನೇಪಾಳಿ ಜನತೆ ಅವರೇ ತಮ್ಮ ನಾಯಕರೆಂದು ಆಯ್ಕೆ ಮಾಡಿದ್ದರು.



ಮಾವೋವಾದಿಗಳ ನೇತೃತ್ವದಲ್ಲಿ ಈ ಎಲ್ಲಾ ಪಕ್ಷಗಳೂ ಸೇರಿ ಸರ್ಕಾರ ರಚಿಸಿದರು. ಹತ್ತು ವರ್ಷಗಳ ಕಾಲ ಭೂಗತವಾಗಿದ್ದು ಮಾವೋವಾದಿ ಗೆರಿಲ್ಲಾ ಸೈನ್ಯವನ್ನು ಮುನ್ನಡೆಸಿದ ನಾಯಕ ಪ್ರಚಂಡ ಅಲಿಯಾಸ್ ಪುಷ್ಪ ಕಮಲ್ ದಹಲ್ ಅವರು ಅಧಿಕೃತವಾಗಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡರು.

ನೇಪಾಳವನ್ನು ಒಂದು ಪ್ರಜಾಪ್ರಭುತ್ವ ದೇಶವನ್ನಾಗಿ ಕಟ್ಟುವುದಕ್ಕಾಗಿ ಸಂವಿಧಾನವನ್ನು ಬರೆಯುವುದು ಚುನಾ ವಣೆಯಲ್ಲಿ ಆಯ್ಕೆಯಾಗಿದ್ದ ಜನಪ್ರತಿನಿಧಿಗಳೆಲ್ಲರ ಮುಂದಿದ್ದ ಪ್ರಮುಖ ಗುರಿಯಾಗಿತ್ತು. ಆದರೆ ಅಂತಹದ್ದೊಂದು ಪ್ರಯತ್ನ ಸಫಲವಾಗುವ ಮೊದಲೇ ನೇಪಾಳದಲ್ಲಿ ರಾಜಕೀಯ ಬಿಕ್ಕಟ್ಟು ಸೃಷ್ಟಿಯಾಗಿದೆ.

ಅಸಲಿಗೆ ಮೊನ್ನೆ ನಡೆದದ್ದೇನು?

ನೇಪಾಳದಲ್ಲಿ ಶಾಂತಿ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಸ್ಥಾಪಿಸುವುದರ ಕುರಿತಂತೆ 2005ರ ನವೆಂಬರ್ 22ರಂದು ನೇಪಾಳಿ ಮುಖ್ಯವಾಹಿನಿಯ ಏಳು ಪಕ್ಷಗಳು ಮತ್ತು ಮಾವೋವಾದಿಗಳ ನಡುವೆ ನಡೆದ 12 ಅಂಶಗಳ ಒಡಂಬಡಿಕೆಯ ಪ್ರಕಾರ ಹಾಗೂ ದೊರೆ ಗ್ಯಾನೇಂದ್ರನನ್ನು ಕೆಳಗಿಳಿಸಿದ ನಂತರ ಮಾವೋವಾದಿಗಳು ನೇಪಾಳದ ಮಧ್ಯಂತರ ಸರ್ಕಾರವನ್ನು ಸೇರುವ ಮುನ್ನ 2006 ನವೆಂಬರ್ 21ರಂದು ಮಾವೋ ವಾದಿಗಳ ನಾಯಕ ಪ್ರಚಂಡ ಮತ್ತು ಅಂದಿನ ಪ್ರಧಾನಿ ಗಿರಿಜಾಪ್ರಸಾದ್ ಕೋಯಿರಾಲರ ನಡುವೆ ನಡೆದ 'ಶಾಂತಿ ಒಪ್ಪಂದ'ದ ಪ್ರಕಾರ ನೇಪಾಳಿ ರಾಯಲ್ ಆರ್ಮಿ ಮತ್ತು ಮಾವೋ ವಾದಿಗಳ ಪ್ರಜಾವಿಮೋಚನಾ ಸೇನೆಗಳೆ ರಡನ್ನೂ ವಿಲೀನ ಮಾಡಿ ಹೊಸ ರಾಷ್ಟ್ರೀಯ ಸೇನೆಯನ್ನು ರೂಪಿಸಬೇಕು. ಅದಕ್ಕೆ ಎಲ್ಲಾ ರಾಜಕೀಯ ಪಕ್ಷಗಳೂ ಒಕ್ಕೊರಲಿನಿಂದ ಒಪ್ಪಿ ಕೊಂಡಿದ್ದವು. ಅದರಂತೆ ಮಾವೋವಾದಿಗಳು ಅಧಿಕಾರಕ್ಕೇರಿದ ಮೇಲೆ ಸೇನೆ ಮತ್ತು ಮಾವೋವಾದಿ ಗೆರಿಲ್ಲಾಗಳನ್ನು ವಿಲೀನಗೊಳಿಸಬೇಕೆಂದು ನಿರಂತರವಾಗಿ ಪ್ರಯತ್ನಿಸುತ್ತಲೇ ಇದ್ದರು. ಅದಕ್ಕೆ ನೇಪಾಳದ ಎರಡು ದೊಡ್ಡ ಪಕ್ಷಗಳಾದ ನೇಪಾಳಿ ಕಾಂಗ್ರೆಸ್ ಮತ್ತು ಯುಎಂಎಲ್‌ಗಳೂ ಬೆಂಬಲಿಸುತ್ತಾ ಬಂದಿದ್ದವು.

ಆದರೆ ಸೇನೆಯ ಮುಖ್ಯಸ್ಥರಾಗಿರುವ ಜನರಲ್ ರುಕ್ಮಾಂಗದ ಕಟವಾಲ್ ಅವರು ಮಾವೋವಾದಿ ಗೆರಿಲ್ಲಾ ಯೋಧರನ್ನು ಸೇನೆಯೊಳಗೆ ಸೇರಿಸಿಕೊಳ್ಳುವುದಕ್ಕೆ ಸುತಾರಾಂ ಸಿದ್ಧರಿಲ್ಲ. ಮೊನ್ನೆ ಅವರು ಇದ್ದಕ್ಕಿದ್ದಂತೆ ಸುಮಾರು ಮೂರು ಸಾವಿರ ಹೊಸ ಯೋಧರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭಿಸಿಬಿಟ್ಟರು. ಅದೂಅಲ್ಲದೇ ಸೇವೆಯಿಂದ ನಿವೃತ್ತರಾಗಿದ್ದ ಹಳೆಯ ಎಂಟು ಬ್ರಿಗೇಡಿಯರ್ ಜನರಲ್‌ಗಳ ಸೇವಾವಧಿಯನ್ನೂ ಸರ್ಕಾರದ ಅನುಮತಿ ಪಡೆಯದೇ ವಿಸ್ತರಿಸಿಬಿಟ್ಟರು. ವಾಸ್ತವದಲ್ಲಿ ಜನ ರಲ್ ಕಟವಾಲ್ ಅವರ ಈ ಹೆಜ್ಜೆಗಳು ಮಾವೋವಾದಿಗಳ ನೇತೃತ್ವದ ಸರ್ಕಾರಕ್ಕೆ ತಾನು ಬದ್ಧನಲ್ಲ ಎಂದು ತೋರಿಸುವಂತಿದ್ದವು. ಅಷ್ಟೇ ಅಲ್ಲ, 2006ರ 'ಶಾಂತಿ ಒಪ್ಪಂದ'ದ ಸಂಪೂರ್ಣ ಉಲ್ಲಂಘನೆಯಾಗಿದ್ದವು. ಜನರಿಂದ ಆಯ್ಕೆಯಾದ ಸರ್ಕಾರಕ್ಕೆ ಸೇನೆ ಬದ್ಧವಾಗಿರಬೇಕು ಎಂಬುದು ಎಲ್ಲಾ ಪ್ರಜಾತಂತ್ರಗಳ ತಿರುಳು. ಆದ್ದರಿಂದ ಈ ಮೂಲಮಂತ್ರಕ್ಕೇ ಕೊಡಲಿಪೆಟ್ಟು ಕೊಟ್ಟ ಸೇನಾ ಮುಖ್ಯಸ್ಥ ಕಟವಾಲ್ ಅವರನ್ನು ಪ್ರಧಾನಿ ಪ್ರಚಂಡ ಮೊನ್ನೆ ಏಪ್ರಿಲ್ 3ರಂದು ಸೇವೆಯಿಂದ ವಜಾಗೊಳಿಸಿಬಿಟ್ಟರು.

ನೇಪಾಳದಲ್ಲಿ ಈಗತಾನೆ ಮೊಳಕೆಯೊಡೆಯುತ್ತಿರುವ ಪ್ರಜಾತಂತ್ರವನ್ನು ರಕ್ಷಿಸುವುದಕ್ಕಾಗಿ ಪ್ರಚಂಡ ಅವರ ಈ ತೀರ್ಮಾನ ಸರಿಯಾದುದೇ ಆಗಿತ್ತು. ಆದರೆ, ನೇಪಾಳದ ಪ್ರಮುಖ ಪಕ್ಷಗಳೆಲ್ಲವೂ ಅದನ್ನು ಬೆಂಬಲಿಸುವ ಬದಲು ಅದೊಂದು ಅತಿರೇಕದ ತೀರ್ಮಾನವೆಂದು ವಿರೋಧಿಸಲಾ ರಂಭಿಸಿದವು. ಇದರ ಬೆನ್ನಲ್ಲೇ ನೇಪಾಳದ ಅಧ್ಯಕ್ಷ ರಾಮ್ ಬರಾನ್ ಯಾದವ್ ಕೂಡ ಪ್ರಧಾನಿ ಪ್ರಚಂಡ ಅವರ ಕ್ರಮವನ್ನು ವಿರೋಧಿಸಿ ತೀರ್ಮಾನವನ್ನು ಪುನರ್ ಪರಿಶೀಲಿಸುವಂತೆ ಸಲಹೆ ಕೊಟ್ಟು ಸೇನಾ ಮುಖ್ಯಸ್ಥರಿಗೆ ಸೇವೆಯಲ್ಲಿ ಮುಂದುವರೆಯುವಂತೆ ಆದೇಶ ಕೊಟ್ಟರು. ಇದಕ್ಕೆ ಪ್ರತಿಭಟನೆಯಾಗಿ ಪ್ರಧಾನಿ ಪ್ರಚಂಡ ಅವರು ಮೇ 4ರಂದು ತಮ್ಮ ಪ್ರಧಾನಿ ಹುದ್ದೆಗೆ ರಾಜೀನಾಮೆ ಕೊಟ್ಟು ಕೆಳಗಿಳಿದಿದ್ದಾರೆ.


ಕಠ್ಮಂಡುವಿನಲ್ಲಿ ಪ್ರಚಂಡ ಪರ ಪ್ರತಿಭಟನೆ...

ವಾಸ್ತವದಲ್ಲಿ ಪ್ರಧಾನಿಯ ಕ್ರಮವನ್ನು ವಿರೋಧಿಸು ವುದಕ್ಕೆ ಅಥವಾ ಅದನ್ನು ತಡೆಹಿಡಿಯುವುದಕ್ಕೆ ಅಧ್ಯಕ್ಷ ರಾಮ್ ಬರಾನ್ ಯಾದವ್‌ಗೆ ಅಧಿಕಾರವೇ ಇಲ್ಲ. ನೇಪಾಳದಲ್ಲಿನ್ನೂ ಒಂದು ಸಂವಿಧಾನವೇ ರಚನೆಯಾಗಿಲ್ಲ ದಿರುವುದರಿಂದ ಅಧ್ಯಕ್ಷನಿಗಿರುವ ಅಧಿಕಾರಗಳೇನು ಎಂಬುದು ಎಲ್ಲೂ ವ್ಯಾಖ್ಯಾನಗೊಂಡಿಲ್ಲ. ಸದ್ಯಕ್ಕೆ ಜನರಿಂದ ಆಯ್ಕೆಯಾಗಿರುವ ಸಂವಿಧಾನ ಸಭೆ ಮತ್ತು ಪ್ರಧಾನಿ ನೇತೃತ್ವದ ಸರ್ಕಾರವೇ ಎಲ್ಲಾ ಅಧಿಕಾರಗಳನ್ನು ಹೊಂದಿ ರುತ್ತದೆ.

ತಮ್ಮ ರಾಜೀನಾಮೆಯನ್ನು ನೀಡಿದ ತಕ್ಷಣ ದೇಶವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಪ್ರಚಂಡ ಇದೇ ವಿಚಾರಗಳನ್ನು ಎತ್ತಿದ್ದಾರೆ. "ಸಾಂವಿಧಾನಿಕ ಅಧ್ಯಕ್ಷನಿಗೆ ಪರ್ಯಾಯ ಶಕ್ತಿಕೇಂದ್ರವಾಗಿ ವರ್ತಿಸುವುದಕ್ಕೆ ಯಾವುದೇ ಅಧಿಕಾರವಿಲ್ಲ. ಅಸಂವಿಧಾನಿಕ ಕ್ರಮಗಳಿಂದ ಸೃಷ್ಟಿ ಗೊಂಡಿರುವ ಈ ಎರಡು ಶಕ್ತಿಕೇಂದ್ರಗಳ ಆಧಿಪತ್ಯವನ್ನು ಕೊನೆಗಳಿಸುವ ತುರ್ತು ನಮ್ಮ ಮುಂದಿದೆ. ಇಡೀ ದೇಶ ಇದಕ್ಕಾಗಿ ಒಗ್ಗಟ್ಟಾಗಬೇಕಿದೆ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಸದ್ಯಕ್ಕೆ ಮತ್ತೆ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿ ಕೊಂಡು ಗೆರಿಲ್ಲಾ ಯುದ್ಧ ಮಾಡುವ ಸಿದ್ಧತೆಯಲ್ಲಿ ಮಾವೋವಾದಿಗಳಿಲ್ಲ. ಮತ್ತೆ ಜನರನ್ನು ಸಂಘಟಿಸಿ ದೇಶದಾದ್ಯಂತ ದೊಡ್ಡ ಮಟ್ಟದ ಜನಾಂದೋಲನ ಕಟ್ಟುವ ಮೂಲಕವೇ ಉಲ್ಬಣಿಸಿರುವ ಬಿಕ್ಕಟ್ಟನ್ನು ಶಮನ ಮಾಡುವ ಪ್ರಯತ್ನ ಆರಂಭವಾಗಿದೆ. ನೆರೆಯ ರಾಷ್ಟ್ರವಾಗಿರುವ ಭಾರತ ನೇಪಾಳದ ಈ ಸಮಸ್ಯೆಯ ಬಗ್ಗೆ ಯಾವ ನಿಲುವನ್ನು ತಳೆಯುತ್ತದೆ ಎಂಬುದರ ಮೇಲೂ ಆ ದೇಶದ ಭವಿಷ್ಯ ಆಧರಿಸಿದೆ. ■

ಇದು ರಾಜಕೀಯಾಧಿಕಾರಕ್ಕಾಗಿನ ಹೋರಾಟ!

ಮೇಲ್ನೋಟಕ್ಕೆ ಕಾಣುವಷ್ಟು ಈ ಬೆಳವಣಿಗೆಗಳು ಸರಳವಾಗಿಲ್ಲ. ಅಂತರ್ಯದಲ್ಲಿ ಇದು ಹಲವು ಶಕ್ತಿಕೇಂದ್ರಗಳ ನಡುವೆ ರಾಜ್ಯಾಧಿಕಾರಕ್ಕಾಗಿ ನಡೆಯುತ್ತಿರುವ ಸಂಘರ್ಷ.

ಮಾವೋವಾದಿಗಳನ್ನು ಹೊರತುಪಡಿಸಿದರೆ ನೇಪಾಳದಲ್ಲಿ ಮೂರು ರಾಜಕೀಯ ಪಕ್ಷಗಳಿವೆ. ಮೊದಲನೆಯದು ನೇಪಾಳಿ ಕಾಂಗ್ರೆಸ್. ಅದು ಭಾರತದ ಕಾಂಗ್ರೆಸ್‌ನ ತದ್ರೂಪದಂತಿದೆ. ಭಾರತದ ಕಾಂಗ್ರೆಸ್ಸೇ ನೇಪಾಳಿ ಕಾಂಗ್ರೆಸ್ಸಿಗೆ ಬೆನ್ನೆಲುಬಾಗಿ ನಿಂತಿದೆ.

ಎರಡನೆಯ ದೊಡ್ಡ ಪಕ್ಷ ಎಂದರೆ ಸಂಕ್ಷಿಪ್ತವಾಗಿ ಯುಎಂಎಲ್ ಎಂದು ಕರೆಯಲಾಗುವ Communist Party of Nepal (Unified Marxist-Leninist). ಇದು ನಮ್ಮ ಭಾರತದ ಸಿಪಿಎಂ ಪಕ್ಷದ ತದ್ರೂಪಿ. ಸಿಪಿಎಂ ಪಕ್ಷವೇ ಅದರ ಹಿಂದಿರುವ ಶಕ್ತಿ. ಇನ್ನು ಮೂರನೇ ದೊಡ್ಡ ಪಕ್ಷ ಎಂದರೆ ಮಾದೇಶಿ ಜನಾಧಿಕಾರ ಫೋರಂ. ಅದು ನಮ್ಮ ದೇಶದ ಬಿಜೆಪಿ ಪಕ್ಷದ ತದ್ರೂಪಿ. ಬಿಜೆಪಿಯೇ ಅದಕ್ಕೆ ಬೆನ್ನೆಲುಬು.

ಈ ಮೂರೂ ಪಕ್ಷಗಳು ನೇಪಾಳದ ರಾಜನ ಸೇವೆ ಮಾಡಿಕೊಂಡು, ಭಾರತದ ಬಂಡವಾಳಶಾಹಿಗಳು ನೇಪಾಳವನ್ನು ಲೂಟಿ ಹೊಡೆಯುವುದಕ್ಕೆ ಅವಕಾಶ ಮಾಡಿಕೊಟ್ಟು, ಅಧಿಕಾರ ಅನುಭವಿಸುತ್ತಾ ಇದ್ದವು. ಮಾವೋವಾದಿಗಳು ಸಶಸ್ತ್ರ ಹೋರಾಟ ಪ್ರಾರಂಭಿಸಿ, ತಳಮಟ್ಟದ ಶೋಷಿತ ಜನಸಮುದಾಯಗಳನ್ನು ಸಂಘಟಿಸಿ ದೊಡ್ಡ ಪ್ರಮಾಣದ ಜನಾಂದೋಲನಗಳನ್ನು ನಿರ್ಮಿಸಿ ದೊಡ್ಡ ಶಕ್ತಿಯಾಗಿ ಹೊರಹೊಮ್ಮುತ್ತಿದ್ದಾಗ ಇವೇ ಮೂರು ಪಕ್ಷಗಳು ಅವರ ವಿರುದ್ಧ ನಿಂತಿದ್ದವು. ಯಾವಾಗ ಮಾವೋವಾದಿಗಳಿಗೆ ನೇಪಾಳದಾದ್ಯಂತ ಜನಬೆಂಬಲವಿರುವುದು ಸ್ಪಷ್ಟವಾಯಿತೋ ಆಗ ಅನಿವಾರ್ಯವಾಗಿ ಈ ಮೂರೂ ಪಕ್ಷಗಳು ಮಾವೋವಾದಿಗಳೊಂದಿಗೆ ಕೈಜೋಡಿಸಿದವು. ರಾಜನ ವಿರುದ್ಧ ತಿರುಗಿಬಿದ್ದು ಅವನನ್ನು ಅಧಿಕಾರದಿಂದ ಕೆಳಗಿಳಿಸಿದವು. ಅವರು ಹಾಗೆ ಮಾಡಿದ್ದು ಅನಿವಾರ್ಯತೆಯಿಂದಾಗಿಯೇ ಹೊರತು ಮಾವೋವಾದಿಗಳ ಸೈದ್ಧಾಂತಿಕ ನಿಲುವುಗಳನ್ನು ಒಪ್ಪಿಕೊಂಡದ್ದೇನಲ್ಲ.

ನಂದಕುಮಾರ್ ಕಪಿಚೇಷ್ಟೆ!


ನಂದಕುಮಾರ್

ಅನನುಭವಿ ಮುಖ್ಯಮಂತ್ರಿ ಯಡಿಯೂರಪ್ಪನ ಚೇಲಾಗಿರಿ ಮಾಡಲು ಹೋಗಿ ಐಎಎಸ್ ಅಧಿಕಾರಿ ನಂದಕುಮಾರ್ ಒದೆ ತಿಂದಿದ್ದಾನೆ.

ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಅಸಂಬದ್ಧ ಕೆಲಸಗಳನ್ನು ಮಾಡಲು ಚಿಕ್ಕಮಗಳೂರಿಗೆ ಹೋಗಿದ್ದ ನಂದಕುಮಾರ್ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದು ಈಗ ಕಣ್ಣುಬಾಯಿ ಬಿಡುತ್ತಿದ್ದಾನೆ.


ಹಾಗೆ ಹೇಳಬೇಕೆಂದರೆ ಬಿಜೆಪಿಗಳು ಸರ್ಕಾರದ ಉನ್ನತಾಧಿಕಾರಿಗಳನ್ನು ಚುನಾವಣಾ ಅಕ್ರಮಗಳಿಗೆ ಬಳಸಿಕೊಂಡ ಕನಿಷ್ಠ ಅರ್ಧ ಡಜನ್ ಘಟನೆಗಳು ಈ ಬಾರಿ ನಡೆದಿವೆ.

ಮುಖ್ಯಮಂತ್ರಿ ಜಿಲ್ಲೆಯಲ್ಲಿ ಷಡಕ್ಷರಿ ಎಂಬ ಅಧಿಕಾರಿ ಮೊಟ್ಟಮೊದಲಿಗೆ ಶಿವಮೊಗ್ಗದಲ್ಲಿ ಸಿಕ್ಕಿಹಾಕಿಕೊಂಡು ಚುನಾವಣಾ ಆಯೋಗದಿಂದ ತಪರಾಕಿ ತಿಂದ. ಆಮೇಲೆ ಚನ್ನಪಟ್ಟಣದ ಡಿವೈಎಸ್ಪಿ ಪ್ರಕಾಶ್ ಗೌಡ ಬಿಜೆಪಿಯ ಯೋಗೀಶ್ವರ್‌ಗೆ ಸಪೋರ್ಟು ಮಾಡಿ ಈಗ ಸಸ್ಪೆಂಡ್ ಆಗಿದ್ದಾನೆ. ಮತ್ತೊಂದೆಡೆ ಆಯುರ್ವೇಶ್ ಎಂಬ ಸರ್ಕಾರಿ ಸಂಸ್ಥೆಯ ಹಿರಿಯ ಅಧಿಕಾರಿ ಡಾ. ಪ್ರಕಾಶ ಬಿಜೆಪಿಗೆ ಓಟು ಹಾಕುವಂತೆ ಇಲಾಖಾ ನೌಕರರಿಗೆ ಸುತ್ತೋಲೆ ಬರೆದು ಸಿಕ್ಕಿಬಿದ್ದಿದ್ದಾನೆ. ಅತ್ತ ದಾವಣಗೆರೆಯಲ್ಲಿ ಜೆಡಿಎಸ್ ನಾಯಕ ವಿಜಯ ಕುಮಾರ್ ಕೊಂಡಜ್ಜಿಯ ಹತ್ಯೆ ಕೇಸಿನಲ್ಲಿ ನಿರ್ಲಕ್ಷ್ಯ ತೋರಿದರೆಂದು ಇಬ್ಬರು ಪೊಲೀಸ್ ಅಧಿಕಾರಿಗಳು ಸಸ್ಪೆಂಡಾಗಿದ್ದಾರೆ.

ಇಷ್ಟೂ ಸಾಲದೆಂಬಂತೆ ಸ್ವತಃ ಮುಖ್ಯಮಂತ್ರಿ ಯಡ್ಡಿಯೇ ಓಟು ಹಾಕಿದ ಮೇಲೆ ಚುನಾವಣಾ ಅಧಿಕಾರಿಯನ್ನು ಗದರಿಸಿ ಎಡಗೈ ಬದಲಿಗೆ ಬಲಗೈಗೆ ಇಂಕ್ ಹಾಕಿಸಿಕೊಂಡು ಕೊನೆಗೆ ಅದೂ ಒಂದು ರಾದ್ಧಾಂತವಾಗಿದೆ...

ಇದೆಲ್ಲಾ 'ಸಾಕಪ್ಪಾ ಸಾಕು ಈ ಬಿಜೆಪಿಗಳ ಸಹವಾಸ' ಅನ್ನುವಂತೆ ಮಾಡಿಬಿಟ್ಟಿದೆ.

ಮೊದಲಿಗೆ ಈ ನಂದಕುಮಾರ್ ಪ್ರಕರಣವನ್ನೇ ನೋಡಿ.



ಚುನಾವಣೆಗೆ ಇನ್ನೂ ಮೂರು ದಿನ ಇದೆ ಎನ್ನುವಾಗ ಈತ ರಜೆ ಹಾಕಿ ಚಿಕ್ಕಮಗಳೂರಿಗೆ ಹೋಗುವ ಪ್ರಮೇಯವೇ ಇರಲಿಲ್ಲ. ಇಷ್ಟಕ್ಕೂ "ಸ್ವಂತ ಊರಿಗೆ ಹೋಗಿದ್ದೆ, ನೆಂಟರನ್ನು ನೋಡಲು ಬಂದಿದ್ದೆ" ಎಂದು ನಂದಕುಮಾರ್ ಹೇಳಿದ್ದಾನಲ್ಲವೇ?

ಈ ಘನಂದಾರಿ ಕೆಲಸಕ್ಕೆ ಈತ ಸರ್ಕಾರಿ ಕಾರನ್ನು ಯಾಕೆ ಬಳಸಿದ? ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿ, ಡಿಸಿ ಆದೇಶವನ್ನು ಕಡೆಗಣಿಸಿ ಸರ್ಕಾರಿ ಗೆಸ್ಟ್‌ಹೌಸ್‌ನಲ್ಲೇ ಹೇಗೆ ಉಳಿದುಕೊಂಡ?

ನಂದಕುಮಾರ್‌ಗೆ ಇವೆಲ್ಲಾ ತಪ್ಪು ಎಂಬುದು ಗೊತ್ತಿರಲಿಲ್ಲ ಎಂದೇನಲ್ಲ. ಇಷ್ಟಕ್ಕೂ ಈತ ಮೊದಲು ಕೆಲಕಾಲ ರಾಜ್ಯ ಚುನಾವಣಾ ಆಯೋಗದಲ್ಲೇ ಕೆಲಸ ಮಾಡಿದ್ದ.

ಈ ಪ್ರಕರಣದ ಇಡೀ ಹೂರಣ ಏನೆಂದರೆ ಯಡಿಯೂರಪ್ಪ ಕೆಲವು ಪ್ರಮುಖ ಸಂಸತ್ ಕ್ಷೇತ್ರಗಳಲ್ಲಿ ಹಣ ಸಾಗಾಣಿಕೆಗೆ ಹಾಗೂ Co-ordinationಗೆ ತನ್ನ ಖಾಸಗಿ ಸಿಬ್ಬಂದಿಯನ್ನೇ ನಿಯೋಜಿಸಿದ್ದರು. ಆದರೆ ಎಲ್ಲೆಲ್ಲೂ ಚುನಾವಣಾ ಸಿಬ್ಬಂದಿ, ಪೊಲೀಸರು ಬಿಗಿಕಾವಲು, ತಪಾಸಣೆ ನಡೆಸುತ್ತಿದ್ದ ಕಾರಣ ಶಿವಮೊಗ್ಗ ಹಾಗೂ ಉಡುಪಿ ಕ್ಷೇತ್ರಕ್ಕೆ ಹಣ ಸಾಗಿಸಲು ಯಡ್ಡಿ ಕಚೇರಿಯ ಸರ್ಕಾರಿ ಅಧಿಕಾರಿಗಳನ್ನೇ ಬಳಸಿದರು ಎಂಬ ಅನುಮಾನ ಇದೆ. ಶಿವಮೊಗ್ಗದಲ್ಲಿ ಯಡ್ಡಿ ಮಗ ಮಡ್ಡಿ ರಾಘು ಹಾಗೂ ಉಡುಪಿಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಹಲ್ಲುಬಿ ಸದಾನಂದ ಗೌಡನೇ ಅಭ್ಯರ್ಥಿಯಾಗಿದ್ದರಲ್ಲವೇ. ಹಾಗಾಗಿ ಈ ಕ್ಷೇತ್ರಗಳ ಬಗ್ಗೆ ಯಡ್ಡಿಗೆ ವಿಶೇಷ ಕಾಳಜಿ ಇತ್ತು. ಚುನಾವಣಾ ಬಿಸಿ ಏರುತ್ತಿದ್ದಾಗಲೇ ಯಡ್ಡಿ ತನ್ನ ಹೆಲಿಕಾಪ್ಟರ್‌ನಲ್ಲಿ ಹಣ ಸಾಗಿಸುತ್ತಿದ್ದಾರೆಂಬ ಆರೋಪಗಳು ಕೇಳಿಬಂದಿದ್ದವು. ಆದರೆ ಪೊಲೀಸರು ಅದನ್ನು ಎಂದೂ ತನಿಖೆ ಮಾಡಲಿಲ್ಲ. ಒಮ್ಮೆ ಮಾತ್ರ ಸರ್ಕಾರಿ ನೌಕರನಾದ ಷಡಕ್ಷರಿ ಯಡ್ಡಿಯ ಖಾಸಗೀ ಸಂಸ್ಥೆಯ ಸಭೆಯಲ್ಲೇ ಕಾಣಿಸಿಕೊಂಡು ಬಿಜೆಪಿ ಪರ ಪ್ರಚಾರ ಮಾಡಿ ಸಿಕ್ಕಿಬಿದ್ದು ಶಿಕ್ಷೆಗೊಳಗಾದ.

ಆದರೆ ನಂದಕುಮಾರ್ ಆತನಿಗಿಂತ ಹಿರಿಯ ಸ್ಥಾನದಲ್ಲಿರುವ ಅಧಿಕಾರಿ. ಈತ ಚಿಕ್ಕಮಗಳೂರಿನ ಸರ್ಕಾರಿ ಗೆಸ್ಟ್‌ಹೌಸ್‌ನಲ್ಲಿದ್ದಾಗ ಪೊಲೀಸರು ನುಗ್ಗಿ ಈತನನ್ನು ಬಂಧಿಸಿದಾಗ ಬೀದಿ ಕಳ್ಳನಂತೆ ಜೇಬಿನಲ್ಲಿರಿಸಿಕೊಂಡಿದ್ದ ಒಂದು ಕಾಗದವನ್ನು ಚಕ್ಕೆಂದು ಬಾಯಿಗೆಸೆದುಕೊಂಡು ನುಂಗಿದ್ದಾನೆ. ಅದರಲ್ಲಿ ಯಾರಿಗೆ ಎಷ್ಟು ಹಣ ಹಂಚಬೇಕೆಂಬ ವಿವರಗಳಿರಲಿಕ್ಕೂ ಸಾಕು!

ಹಿರಿಯ ಐಎಎಸ್ ಆಫೀಸರ್ ಒಬ್ಬ ಅನ್ನ ತಿನ್ನುವ ಬದಲು ಹೀಗೆ ಪೇಪರ್ ತಿಂದ ಪ್ರಹಸನ ಹಿಂದೆಂದೂ ನಡೆದಿರಲಿಲ್ಲ.

ಮುಖ್ಯಮಂತ್ರಿ ಯಡಿಯೂರಪ್ಪ ಎಂಥ ಅಪಕ್ವ ಮನುಷ್ಯನೆಂದರೆ ನಂದಕುಮಾರ್ ತಪ್ಪಿನ ಬಗ್ಗೆ ಇನ್ನೂ ತನಿಖೆ ನಡೆಯದಿದ್ದರೂ, ಅಂತಿಮ ತೀರ್ಪು ಬಂದಿರದಿದ್ದರೂ ಅದಕ್ಕೂ ಮೊದಲೇ 'ನಂದಕುಮಾರ್ ಒಬ್ಬ ಮುಗ್ಧ ನಿರಪರಾಧಿ' ಎಂದು ಕ್ಲೀನ್ ಚೀಟ್ ಕೊಡುತ್ತಿದ್ದಾರೆ.

ನಂದಕುಮಾರ್ ತಪ್ಪಿತಸ್ಥನೋ ಅಲ್ಲವೋ ಎಂಬುದನ್ನು ಆಯೋಗದ ತನಿಖೆ ಹೇಳಬೇಕೆ ವಿನಃ ಯಡ್ಡಿ ಅಲ್ಲ. ಇಷ್ಟೂ ಚಡ್ಡಿಗಳ ನಾಯಕ ಯಡ್ಡಿಗೆ ಗೊತ್ತಿಲ್ಲ ಅಂದರೆ ಅದು ಅವಿವೇಕತನವಲ್ಲವೇ?

ಪ್ರಕಾಶ್ ಗೌಡನ ಪ್ರಹಸನ

ಮೂಲತಃ ಕೆ.ಎಂ. ದೊಡ್ಡಿಯವನಾದ ಪ್ರಕಾಶ್ ಗೌಡ ಕೆಲವರ್ಷ ಎಎಸ್‌ಐ ಆಗಿದ್ದು ನಂತರ ಸ್ವಂತ ಪರಿಶ್ರಮದಿಂದ ಕೆಎಎಸ್ ಪಾಸ್ ಮಾಡಿ ಡಿವೈಎಸ್ಪಿಯಾಗಿ ಚನ್ನಪಟ್ಟಣದಲ್ಲಿದ್ದ. ಈತನಿಗೆ ಬಿಜೆಪಿ ಕ್ಯಾಂಡಿಡೇಟ್ ಯೋಗೀಶ್ವರನ ತಮ್ಮ ರಾಜೇಶ್ ಜೊತೆ ನಾನಾ ತರದ ಲಿಂಕುಗಳಿವೆ. ಏಪ್ರಿಲ್ 22ರಂದು ಚನ್ನಪಟ್ಟಣದ ಲ್ಯಾಬ್ ದಿನೇಶ್‌ನ ಮನೆ ಮೇಲೆ ರೈಡ್ ಮಾಡುವಂತೆ ರಾಮನಗರ ಜಿಲ್ಲಾಧಿಕಾರಿ ಮನೀಶ್ ಮುದ್ಗಲ್ ಕೊಟ್ಟ ಆದೇಶವನ್ನು ಪ್ರಕಾಶ್ ಗೌಡ ಕ್ಯಾರೇ ಅನ್ನದೇ ನಿರ್ಲಕ್ಷಿಸಿದ್ದ.

ಆವತ್ತು ದಿನೇಶನ ಮನೆಗೆ ಒಂದೂವರೆ ಕೋಟಿಯಷ್ಟು ಬಳ್ಳಾರಿ ರೆಡ್ಡಿಗಳ ಹಣ ಬಂದು ತಲುಪಿದೆ ಎಂಬ ಮಾಹಿತಿಯಿತ್ತು. ಈ ಪ್ರಕಾಶ್ ಗೌಡ ಏನೇನೋ ನೆಪಹೇಳಿ ಮಾರನೇ ದಿನ ದಿನೇಶ್ ಮನೆ ಮೇಲೆ ದಾಳಿಗೆ ಹೋಗುವಷ್ಟರಲ್ಲಿ ಅಲ್ಲಿದ್ದದ್ದು ಕೇವಲ 17 ಲಕ್ಷ ರೂಪಾಯಿ ಮಾತ್ರ. ಅಷ್ಟರಲ್ಲಾಗಲೇ ಉಳಿದ 1.33 ಕೋಟಿ ರೂ.ವನ್ನು ಯೋಗೀಶ್ವರ ಬೇರೆಡೆ ಸಾಗಿಸಿಬಿಟ್ಟಿದ್ದ.

ಬಿಜೆಪಿಗಳಿಗೆ ಈ ಉಪಕಾರ ಮಾಡಲು ಹೋಗಿ ಪ್ರಕಾಶ್ ಗೌಡ ಈಗ ಸಸ್ಪೆಂಡಾಗಿದ್ದಾನೆ.

ಆಯುರ್ವೇಶ್ ಪ್ರಕಾಶನೆಂಬ ಇನ್ನೊಬ್ಬ ಅವಿವೇಕಿ

"ಆಯುರ್ವೇದ, ಹೋಮಿಯೋಪತಿ, ಯುನಾನಿ ವೈದ್ಯಕೀಯ ಸಂಸ್ಥೆಯ ಸಮಸ್ತ ಸಿಬ್ಬಂದಿಗಳಿಗೂ ಈ ಮೂಲಕ ತಿಳಿಸುವುದೇನೆಂದರೆ ಈ ಚುನಾವಣೆಯಲ್ಲಿ ತಾವು ಸಕುಟುಂಬ ಸಮೇತ ಬಿಜೆಪಿಗೆ ಮತ ನೀಡುವಂತೆ ಸೂಚಿಸಲಾಗಿದೆ" ಎಂಬರ್ಥದ ಸುತ್ತೋಲೆ ಹೊರಡಿಸಿ ಪೆದ್ದುಪೆದ್ದಾಗಿ ಸಿಕ್ಕಿಬಿದ್ದಿರುವವನು ಸರ್ಕಾರಿ ಅಧಿಕಾರಿ ಡಾ. ಬಿ.ಎನ್. ಪ್ರಕಾಶ್.

ಈ ಬಗ್ಗೆ ಈಗ ಗಂಭೀರ ತನಿಖೆ ನಡೆಯುತ್ತಿದೆ. ಇನ್ನೊಂದೆರಡು ದಿನದಲ್ಲೇ ಪ್ರಕಾಶನೂ ಸಸ್ಪೆಂಡಾಗಿ ಮನೆಗೆ ಹೋಗಲಿದ್ದಾನೆ. ಈ ಅವಿವೇಕಿಗೆ ಬಿಜೆಪಿಯ ಪಿತ್ತ ನೆತ್ತಿಗೇರಿತ್ತೇನೊ? ತಾನ್ಯಾರು, ತನ್ನ ಹುದ್ದೆ ಎಂಥದ್ದೆಂಬ ವಿವೇಚನೆಯೂ ಇಲ್ಲದೆ ಇಂಥ ಸುತ್ತೋಲೆ ಹೊರಡಿಸಿ ಈಗ "ಯಾರೋ ನನ್ನ ಸಹಿ ಫೋರ್ಜರಿ ಮಾಡಿದ್ದಾರೆ" ಎಂದು ಚೀರಿಕೊಳ್ಳುತ್ತಿದ್ದಾನೆ.



ಹರಿಹರ: ಬಿಜೆಪಿಗಳು ದಲಿತನನ್ನು ಕೊಂದು ಹಾಕಿದರು!

ಈ ಹಿಂದೆ ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ತಕ್ಷಣ ಯಡಿಯೂರಪ್ಪ ಅಂಬೇಡ್ಕರ್‌ರವರ ಭಾವಚಿತ್ರವನ್ನು ತಮ್ಮ ಕಚೇರಿಯಿಂದ ಹೊರ ಹಾಕಿಸಿ ದಲಿತ ಜನಾಂಗದ ಬಗ್ಗೆ ತಮಗಿದ್ದ ತಿರಸ್ಕಾರವನ್ನು ತೋರಿದ್ದು ಜಗತ್ತಿಗೇ ತಿಳಿದ ವಿಷಯ. ನಂತರದಲ್ಲಿ ಬಾಳೆಹೊನ್ನೂರಿನ ಶಾಂತಿಪುರದಲ್ಲಿ ದನದ ಮಾಂಸದ ಮಾರಾಟದ ಆರೋಪದ ಮೇಲೆ ಭಜರಂಗದಳದ ಚಡ್ಡಿಗಳು ದಲಿತನೊಬ್ಬನ ಎದೆಗೆ ಬೂಟುಗಳಿಂದ ಹೊಡೆಯುತ್ತ ಮಾಧ್ಯಮಗಳಿಗೆ ಪೋಸು ನೀಡುವ ಮೂಲಕ ಅಧಿಕಾರ ಸಿಕ್ಕರೆ ದಲಿತರಿಗೆ ಇಂಥದೇ ಮರ್ಯಾದೆ ನೀಡುತ್ತೇವೆಂದು ತೋರಿಸಿಕೊಂಡಿದ್ದೂ ಸಹ ಈಗ ಇತಿಹಾಸ. ಬಿಜೆಪಿಗಳ ದಲಿತ ವಿರೋಧಿ ವಿಕೃತಿಗಳ ಮುಂದುವರೆದ ಭಾಗವಾಗಿ ಮೊನ್ನೆ ಏಪ್ರಿಲ್ 30ರಂದು (ಚುನಾವಣೆಯ ದಿನ) ಹರಿಹರದಲ್ಲಿ ದಲಿತ ಕಾರ್ಮಿಕ ಕೊಂಡಜ್ಜಿ ವಿಜಯಕುಮಾರ್‌ರವರನ್ನು ಬರ್ಬರವಾಗಿ ಹತ್ಯೆ ಮಾಡಿದ್ದಾರೆ. ಈ ಕೊಲೆಗೆ ಹರಿಹರದ ಬಿಜೆಪಿ ಶಾಸಕ ಬಿ.ಪಿ.ಹರೀಶನೇ ಸಾರಥ್ಯ ವಹಿಸಿಕೊಂಡಿದ್ದ. ಈಗ ಕೊಲೆ ಕೇಸು ಜಡಿಸಿಕೊಂಡು ತಲೆಮರೆಸಿಕೊಂಡಿರುವ ಹರೀಶ ಅಲೆಮಾರಿಯಂತೆ ತಿರುಗುತ್ತಿದ್ದಾನೆ.


ವಿಜಯ್‌ಕುಮಾರ್ ಪತ್ನಿ

ಈಗ ಕೊಲೆಯಾಗಿರುವ ವಿಜಯಕುಮಾರ್‌ರವರ ಪತ್ನಿ ಹೊನ್ನಮ್ಮ ಹರಿಹರ ಜೈಭೀಮ ನಗರದಿಂದ ನಗರಸಭಾ ಸದಸ್ಯೆಯಾಗಿ ಜನತಾದಳ ಪಕ್ಷದಿಂದ ಆರಿಸಿ ಬಂದಿದ್ದಾರೆ. ತಮ್ಮ ಹೆಂಡತಿ ಹೊನ್ನಮ್ಮರ ಜೊತೆಯಲ್ಲಿ ವಿಜಯಕುಮಾರ್ ಆಗಾಗ ಜೈಭೀಮನಗರಕ್ಕೆ ಹೋಗಿ ಬರುವುದು ನಡೆದೇ ಇತ್ತು. ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಈಗ್ಗೆ ಒಂದು ತಿಂಗಳ ಹಿಂದೆ ವಿಜಯಕುಮಾರ್‌ರವರ ಮೇಲೆ ಹಲ್ಲೆಯೂ ನಡೆದಿತ್ತು. ಅಲ್ಲಿಂದ ಶುರುವಾದ ಈ ರೀತಿಯ ಘರ್ಷಣೆಗಳು ಈತ ಕೊಲೆಯಾಗುವ ದಿನದವರೆಗೆ ನಿರಂತರವಾಗಿ ನಡೆದೇ ಇತ್ತು. ಈ ಬಗ್ಗೆ ವಿಜಯಕುಮಾರ್‌ರವರ ಪತ್ನಿ ಹೊನ್ನಮ್ಮ ಮೌಖಿಕವಾಗಿ ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ ಪೊಲೀಸರು ಈಕೆಯ ದೂರನ್ನು ನಿರ್ಲಕ್ಷಿಸುತ್ತಲೇ ಬಂದಾಗ ಜನತಾದಳದ ನಾಯಕರಾದ ಎಚ್.ಎಸ್.ಶಿವಶಂಕರ್‌ರವರು ವಿಜಯಕುಮಾರ್‌ರವರ ಕೊಲೆಯ ಹಿಂದಿನ ದಿನ ಪೊಲೀಸರಿಗೆ ದೂರು ನೀಡಿ ಅಮರಾವತಿ ಗ್ರಾಮದ ಎ.ಬಿ.ನಾಗರಾಜ, ಚಿಂಟು, ನಾಯಿ ಜಗ್ಗ, ಕಿರಣ್ ಮುಂತಾದ ಕ್ರಿಮಿನಲ್ ಹಿನ್ನಲೆಯುಳ್ಳವರಿಂದ ಹೊನ್ನಮ್ಮ ಕೊಂಡಜ್ಜಿ ವಿಜಯಕುಮಾರ್‌ರವರಿಗೆ ಪ್ರಾಣಭೀತಿ ಇದೆ, ಇವರಿಗೆ ಸೂಕ್ತ ರಕ್ಷಣೆ ನೀಡಿ ಮುಕ್ತವಾಗಿ ಮತದಾನ ನಡೆಯಲು ಅನುವು ಮಾಡಿಕೊಡಬೇಕೆಂದು ಲಿಖಿತ ಮನವಿ ಮಾಡಿಕೊಂಡಿದ್ದಾರೆ. ಕೊಲೆಯ ಹಿಂದಿನ ದಿನದ ಈ ಮನವಿಯನ್ನಾದರೂ ಪೊಲೀಸರು ಗಂಭೀರವಾಗಿ ಪರಿಗಣಿಸಿದ್ದರೆ ಅಮಾಯಕ ದಲಿತ ಜೀವವೊಂದು ಬಲಿಯಾಗುವುದು ತಪ್ಪುತ್ತಿತ್ತು. ಆದರೆ, ಬಿಜೆಪಿಯ ಸೇವೆ ಮಾಡುವುದರಲ್ಲೇ ಮೈಮರೆತಿದ್ದ ಪೊಲೀಸರಿಗೆ ಇಂಥ ದೂರಿನ ಬಗ್ಗೆ ಯೋಚಿಸುವ ವ್ಯವಧಾನವಾದರೂ ಎಲ್ಲಿತ್ತು?

ಆತ ಶಾಸಕ ಬಿ.ಪಿ. ಹರೀಶ

ಬಹಳ ವರ್ಷಗಳಿಂದ ಶಾಸಕನಾಗಬೇಕೆಂಬ ಹಂಬಲದಿಂದ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಎಲ್ಲಾ ರೀತಿಯ ಕುತಂತ್ರಗಳನ್ನು ಬಳಸಿ ಕೊನೆಗೂ ಬಿಜೆಪಿ ಪಕ್ಷದಿಂದ ಈ ಬಿ.ಪಿ.ಹರೀಶ ಗೆದ್ದು ಬಂದ. ಈತನಿಗೆ ತನ್ನ ಹೆಸರಿಗೆ ಅಂಟಿಕೊಂಡಿರುವ ಇನಿಷಿಯಲ್‌ನ ಪ್ರಭಾವದಿಂದಾಗಿಯೋ ಏನೋ ಆಗಾಗ್ಗೆ ಬ್ಲಡ್ ಪ್ರೆಷರ್ ಅಂತೂ ಏರುತ್ತಿರುತ್ತದೆ. ಬಿಜೆಪಿ ಸರ್ಕಾರ ರಚನೆಯಾದ 30 ದಿನಗಳಲ್ಲೇ 35 ಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದೇ ಸಂದರ್ಭದಲ್ಲಿ ಹರಿಹರ ಪಕ್ಕದ ಮಲೆಬೆನ್ನೂರಿನ ರೈತನೊಬ್ಬ ಆತ್ಮಹತ್ಯೆ ಮಾಡಿಕೊಂಡು ದಾವಣಗೆರೆಯ ಶವಾಗಾರದಲ್ಲಿ ಮಲಗಿದ್ದಾಗ ಈ ರೈತನ ಕುಟುಂಬಕ್ಕೆ ಸಾಂತ್ವನ ಹೇಳುವ ಬದಲು ಆತನ ವಿರುದ್ಧವೇ ಬಾಯಿಗೆಬಂದಂತೆ ಮಾತನಾಡಿ ಜನರಿಂದ ಛೀ... ಥೂ... ಅಂತ ಉಗಿಸಿಕೊಂಡಿದ್ದ. ಈಗ ತಾನೊಬ್ಬ ಶಾಸಕನೆಂಬ ಘನತೆಯನ್ನು ಮರೆತು ಕೆಲವು ಪುಂಡು ಪೋಕರಿಗಳ ಜೊತೆಗೂಡಿ ದಲಿತ ಜನಾಂಗದ



ಹೊನ್ನಮ್ಮ ಮತ್ತು ವಿಜಯಕುಮಾರ್‌ರವರ ಮೇಲೆ ಸೇಡನ್ನು ಸಾಧಿಸಿ ವಿಜಯಕುಮಾರ್‌ರವರ ಕೊಲೆಗೆ ನೇರ ಕಾರಣವಾಗಿದ್ದಾನೆ.

ಆ ದಿನ ನಡೆದದ್ದೇನು?

ಏಪ್ರಿಲ್ 30ರ ಬೆಳಗ್ಗೆ 8.00 ಗಂಟೆಗೆ ಮತದಾನ ನಡೆಯುತ್ತಿದ್ದುದರಿಂದ ನಗರಪಾಲಿಕೆ ಸದಸ್ಯೆ ಹೊನ್ನಮ್ಮ ಜೈಭೀಮನಗರಕ್ಕೆ ಹೋಗಿದ್ದರು. ಅಲ್ಲಿನ ಕಸ್ತೂರಮ್ಮ, ಚಿಂಟು, ನಾಯಿ ಜಗ್ಗ, ಕಿರಣ, ಅಜಯ್ ಎನ್ನುವವರು ಹೊನ್ನಮ್ಮನ ಹತ್ತಿರ ಜಗಳ ತೆಗೆದು, ಜಾತಿ ನಿಂದನೆ ಮಾಡಿ ಹಲ್ಲೆ ನಡೆಸಲು ಪ್ರಯತ್ನಿಸಿದ್ದಾರೆ. ಇದೆಲ್ಲಕ್ಕೂ ಅಲ್ಲೇ ಇದ್ದ ಪೊಲೀಸರು ಮೂಕ ಸಾಕ್ಷಿಗಳಾಗಿದ್ದರು. ಈ ಎಲ್ಲಾ ಘಟನೆಯನ್ನು ಚುನಾವಣಾ ಆಯೋಗದವರು ವೀಡಿಯೋ ತೆಗೆದುಕೊಂಡಿದ್ದಾರೆ. ಆದರೂ ಪೊಲೀಸರು ಎಚ್ಚೆತ್ತುಕೊಳ್ಳಲಿಲ್ಲ. ಮತ್ತೆ ಸಂಜೆ 5.00 ಗಂಟೆಯ ಹೊತ್ತಿಗೆ ಶಾಸಕ ಬಿ.ಪಿ.ಹರೀಶ ಜೈಭೀಮನಗರಕ್ಕೆ ಬಂದಾಗ ಹರೀಶನ ಚೇಲಾಗಳಿಗೆ ಎಲ್ಲಾ ಕಡೆಯೂ ಕೋಡು ಬಂದಂತಾಗಿ ಉದ್ವಿಗ್ನತೆಯನ್ನು ಸೃಷ್ಟಿಸಿ ವಿಜಯಕುಮಾರ್ ಮೇಲೆ ಹಲ್ಲೆಗಿಳಿದಿದ್ದಾರೆ. ಇದಕ್ಕೆ ಪೂರಕವಾಗಿ ಶಾಸಕ ಬಿ.ಪಿ.ಹರೀಶ ವಿಜಯಕುಮಾರ್‌ರವರನ್ನು ಜಾತಿ ಹೆಸರಿನಿಂದ ನಿಂದಿಸಿ ಹಲ್ಲೆಗೆ ಪ್ರಚೋದನೆ ನೀಡಿದ. ಆಗಲೇ ಹೆಂಡ ಕುಡಿದ ಮಂಗನಂತಾಗಿದ್ದ ಆ ಪೋಕರಿಗಳು ವಿಜಯಕುಮಾರ್‌ರವರ ಮೇಲೆ ತೀವ್ರವಾಗಿ ಹಲ್ಲೆ ನಡೆಸಿಬಿಟ್ಟರು. ಗುಂಪಿನಲ್ಲಿದ್ದವನೊಬ್ಬ ವಿಜಯಕುಮಾರ್‌ರವರ ತಲೆಯ ಹಿಂಭಾಗಕ್ಕೆ ಚಪ್ಪಲಿಯ ಚರ್ಮ ಕತ್ತರಿಸುವ ರೆಂಪಿಗೆಯಿಂದ ಹೊಡೆದಾಗ ವಿಜಯಕುಮಾರ್ ಅಲ್ಲೇ ಕುಸಿದು ಪ್ರಾಣ ಬಿಟ್ಟಿದ್ದಾರೆ. ಗಲಾಟೆಯನ್ನು ನಿಯಂತ್ರಿಸಲು ಹೊನ್ನಮ್ಮ ಶಾಸಕ ಹರೀಶನಿಗೆ ಪರಿಪರಿಯಾಗಿ ಬೇಡಿಕೊಂಡರೂ ಅದನ್ನು ಲೆಕ್ಕಿಸದೇ ಆತ ಅಲ್ಲಿಂದ ಹೊರಟುಹೋಗಿದ್ದಾನೆ.

ಸಾಲುಸಾಲು ಪ್ರತಿಭಟನೆಗಳು

ವಿಜಯಕುಮಾರ್‌ರವರ ಕೊಲೆಯ ಮರುದಿನ ವಿವಿಧ ಪಕ್ಷಗಳು ಮತ್ತು ಸಾರ್ವಜನಿಕರು ಸೇರಿ ಬಿಜೆಪಿಗಳ ರಕ್ತದಾಹದ ವಿರುದ್ಧ 'ಹರಿಹರ ಬಂದ್' ಮಾಡಿಸಿ ಪ್ರತಿಭಟನೆ ಮಾಡಿದ್ದಾರೆ. ಹರಪನಹಳ್ಳಿ, ಜಗಳೂರು ತಾಲ್ಲೂಕುಗಳಲ್ಲೂ ತೀವ್ರವಾದ ಪ್ರತಿಭಟನೆಗಳು ನಡೆದಿವೆ. ದಿನಾಂಕ 06.05.2009ರಂದು ಕಾಂಗ್ರೆಸ್, ಜನತಾದಳ, ಸಿಪಿಐ, ಸಿಪಿಐಎಂ ಪಕ್ಷಗಳು ಸೇರಿದಂತೆ ಕರ್ನಾಟಕ ಜನಪರ ವೇದಿಕೆ, ಕೋಮುಸೌಹಾರ್ದ ವೇದಿಕೆ, ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿ ಮುಂತಾದ ಸಂಘಟನೆಗಳು ಒಂದಾಗಿ "ಜಾತ್ಯತೀತ ಜನತಂತ್ರ ರಕ್ಷಣಾ ವೇದಿಕೆ"ಯಡಿಯಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ಹಾಗೂ ರಸ್ತೆ ತಡೆ ಕಾರ್ಯಕ್ರಮ ನಡೆಸಿವೆ. ಇಷ್ಟೆಲ್ಲಾ ಪ್ರತಿಭಟನೆಗಳು ನಡೆದರೂ ಕೊಲೆಯ ಆರೋಪಿ ಬಿ.ಪಿ.ಹರೀಶನನ್ನು ಪೊಲೀಸರು ಇದುವರೆಗೂ ಬಂಧಿಸಿಲ್ಲ. ಅಕ್ಕ-ಪಕ್ಕದ ಊರುಗಳಲ್ಲಿ ನಡೆಯುತ್ತಿರುವ ಮದುವೆ ಮುಂತಾದ ಕಾರ್ಯಕ್ರಮಗಳಲ್ಲಿ ಬಿ.ಪಿ.ಹರೀಶ ಭಾಗವಹಿಸುತ್ತಿರುವುದು ಪೊಲೀಸರಿಗೆ ಗೊತ್ತಿದ್ದರೂ ಮೌನವಾಗಿದ್ದಾರೆ.

ಬಿಜೆಪಿ ಸರ್ಕಾರದ ಕುತಂತ್ರ

ಯಡಿಯೂರಪ್ಪನ ಸರ್ಕಾರ ಈ ಕೊಲೆಯನ್ನು ಮುಚ್ಚಿ ಹಾಕಲು ಎಲ್ಲಾ ಕುತಂತ್ರಗಳನ್ನು ನಡೆಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ. ಮೊದಲನೆಯದಾಗಿ ವಿಜಯಕುಮಾರ್‌ರವರ ಕೊಲೆ ನಡೆಯುತ್ತಿದ್ದ ವೇಳೆ ಚುನಾವಣಾ ಆಯೋಗದವರು ತೆಗೆದಿರುವ ವೀಡಿಯೋ ಕ್ಲಿಪ್ಪಿಂಗ್‌ಗಳು ನಾಪತ್ತೆಯಾಗಿವೆ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಕೊಲೆಯಾದ ಕೆಲವೇ ಗಂಟೆಗಳಲ್ಲಿ ಆಗುಂಬೆಯಲ್ಲಿ ಈಗ ಡಿವೈಎಸ್‌ಪಿಯಾಗಿರುವ ರುದ್ರಮುನಿ ಮತ್ತು ಇದೇ ಲೆವೆಲ್ಲಿನ ಇನ್ನೊಬ್ಬ ಪೊಲೀಸ್ ಅಧಿಕಾರಿಯನ್ನು (ಇವರಿಬ್ಬರೂ ಪರಿಶಿಷ್ಟ ಜಾತಿ ಎಂಬ ಕಾರಣಕ್ಕೆ) ಹರಿಹರಕ್ಕೆ ಕರೆಸಿ ವಿಜಯಕುಮಾರ್‌ರವರ ಕುಟುಂಬವನ್ನು ದಿಕ್ಕೆಡಿಸುವ ಪ್ರಯತ್ನವನ್ನು ಮಾಡಲಾಗಿದೆ. ಒಡಕು ಬಾಯಿ ನರ್ಸ್ ರೇಣುಕಾಚಾರ್ಯ 'ಇದು ಕೊಲೆಯಲ್ಲ ಹೃದಯಾಘಾತ' ಎಂದು ಮಾಧ್ಯಮಗಳ ಮೂಲಕ ಸುಳ್ಳುಗಳನ್ನು ಹರಿಬಿಡುತ್ತಿದ್ದಾನೆ. ಇದೇ ಸುಳ್ಳುಗಳನ್ನು ಬಿಜೆಪಿ ವಲಯವು ವ್ಯಾಪಕವಾಗಿ ಹಬ್ಬಿಸುತ್ತಿದೆ. ವಿಜಯಕುಮಾರ್ ಕೊಲೆಯಾದ ನಂತರ ರಾತ್ರಿ 11.00 ಗಂಟೆಗೆ ಬೇಕಂತಲೇ ವಿದ್ಯುಚ್ಛಕ್ತಿ ಕಟ್ ಮಾಡಿಸಿ ಟಾರ್ಚ್ ಲೈಟುಗಳ ಬೆಳಕಿನಲ್ಲಿ ಪೋಸ್ಟ್‌ಮಾರ್ಟಮ್ ಮಾಡಲಾಗಿದೆ ಎನ್ನುವ ಆಪಾದನೆಗಳು ಕೇಳಿಬರುತ್ತಿವೆ. ನಡೆದಿರುವ ಕೊಲೆಯನ್ನು ಮುಚ್ಚಿಹಾಕಲು ಬಿಜೆಪಿ ಸರ್ಕಾರ ಇದೇರೀತಿಯ ಪ್ರಯತ್ನಗಳನ್ನು ಮುಂದುವರೆಸಿದರೆ ಈ ಸರ್ಕಾರದ ವಿರುದ್ಧ ತೀವ್ರ ರೀತಿಯ ಪ್ರತಿಭಟನೆಗಳು ರಾಜ್ಯಾದ್ಯಂತ ಭುಗಿಲೇಳುತ್ತವೆ ಎಂಬುದು ಮಾತ್ರ ಸೂರ್ಯನ ಬೆಳಕಿನಷ್ಟೇ ಸತ್ಯ.

ಚಂದ್ರಶೇಖರ ತೋರಣಘಟ್ಟ

ಮೈಸೂರು: ವಿಕೃತಕಾಮಿ ಶ್ರೀಹರಿ ಪಾಠಕ್



ಶ್ರೀಹರಿ ಪಾಠಕ್

'ಪಾಠಕ್ ಕನ್‌ಸ್ಟ್ರಕ್ಷನ್ಸ್' ಹೆಸರನ್ನು ಪ್ರಾಯಶಃ ಮೈಸೂರಿನ ಜನರೆಲ್ಲರೂ ಕೇಳಿದ್ದಾರೆ. ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವ ಈ ಸಂಸ್ಥೆ ಮೈಸೂರು ನಗರವೊಂದರಲ್ಲೇ ನೂರಾರು ಅಪಾರ್ಟ್‌ಮೆಂಟುಗಳನ್ನು ಕಟ್ಟಿ ಮಾರಾಟ ಮಾಡುತ್ತಿದೆ. ಈ ಕಂಪೆನಿಗೆ ಅಪ್ಪ ಜಯರಾಮ್ ಪಾಠಕ್, ಮಗ ಶ್ರೀಹರಿ ಪಾಠಕ್ ಮತ್ತು ಮಗಳು ಶ್ರದ್ಧಾ ಪಾಠಕ್‌ರೇ ಡೈರೆಕ್ಟರುಗಳು. ಕಟ್ಟಡ ನಿರ್ಮಾಣದಲ್ಲಿ ಅನೇಕ ವರ್ಷಗಳಿಂದ ಕೆಲಸ ಮಾಡುತ್ತಿರುವ ಈ ಸಂಸ್ಥೆ ಇಂದು ಏನಿಲ್ಲವೆಂದರೂ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಸುತ್ತಿದೆ.

ಜಯರಾಮ್ ಪಾಠಕ್ ಅವರ ಮಗ ಶ್ರೀಹರಿ ಪಾಠಕ್‌ಗೆ ಅಗಾಧವಾಗಿ ಬೆಳೆಯುತ್ತಿರುವ ಈ ಸಂಸ್ಥೆಯ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ಬಿಡುವಿಲ್ಲ. ಆದರೆ, ತನ್ನ ಕಾಮಕೇಳಿ ತೀರಿಸಿಕೊಳ್ಳಲು ಬೇಕಾದಷ್ಟು ಸಮಯವನ್ನು ಪೋಲು ಮಾಡುತ್ತಾನೆ. ಪಕ್ಕಾ ಸೆರಗುಪ್ರಿಯನಾಗಿರುವ ಈತನ ಕಾಮಕೇಳಿಗೆ ಬಲಿಯಾದ ಅಮಾಯಕ ಹೆಣ್ಣು ಜೀವಗಳೆಷ್ಟೋ?

ತನ್ನ ಇನೋವಾ ಕಾರನ್ನೇ (ಕೆ.ಎ.-09, ಎಂ.ಜಿ-8118) ಈತ ಕಾಮಕೇಳಿಯ ಅಡ್ಡೆಯನ್ನಾಗಿ ಮಾಡಿಕೊಂಡಿದ್ದಾನೆ. ಅಲ್ಲದೇ ನಗರದ ಹೆಸರಾಂತ ಹೋಟೆಲ್‌ಗಳಲ್ಲಿ, ಡಿಸ್ಕೋಥೆಕ್ ಗಳಲ್ಲಿ ಪಾನಮತ್ತನಾಗಿ ಅಮಾಯಕ ಹೆಣ್ಣುಗಳೊಂದಿಗೆ ಕುಣಿದು ಕುಪ್ಪಳಿಸುವುದು ಮಾಮೂಲಿ.


ಅನೇಕ ಅಮಾಯಕ ಹೆಣ್ಣುಮಕ್ಕಳು ಈತನ ಬಲೆಯಲ್ಲಿ ಬಿದ್ದು ಮಾನ ಕಳೆದುಕೊಂಡು



ಪಾಠಕ್ ಆಫೀಸ್


ಭಯಭೀತಿಯಿಂದ ಬಾಯ್ಮುಚ್ಚಿಕೊಂಡಿದ್ದರೆ ಇನ್ನು ಕೆಲವರು ಈ ರಕ್ಕಸನಿಂದ ಅದ್ಹೇಗೋ ತಪ್ಪಿಸಿಕೊಂಡದ್ದೂ ಉಂಟು. ಈತ ಅದೆಂಥಾ ನೀಚನೆಂಬುದಕ್ಕೆ ಇತ್ತೀಚಿನ ಉದಾಹರಣೆಯೊಂದೇ ಸಾಕಾಗುತ್ತದೆ.

ಪಾಠಕ್ ಕನ್‌ಸ್ಟ್ರಕ್ಷನ್ಸ್‌ನಲ್ಲಿ ನೇಹಾ ಎಂಬ ಹುಡುಗಿ (ಹೆಸರು ಬದಲಾಯಿಸಲಾಗಿದೆ) ಗ್ರಾಹಕ ಸಂಪರ್ಕಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿದ್ದಳು. ಶ್ರೀಹರಿ ಪಾಠಕ್‌ನ ವಕ್ರದೃಷ್ಟಿ ಆಕೆಯ ಮೇಲೆ ಬಿದ್ದಿದ್ದೇ ತಡ ಎಂದಿನಂತೆ ಕಿರುಕುಳ ಪ್ರಾರಂಭಿಸಿದ್ದಾನೆ. ಹಣ, ಪ್ರಮೋಶನ್ ಮುಂತಾದ ಆಮಿಷವೊಡ್ಡಿ ಆಕೆಯನ್ನು ಬುಟ್ಟಿಗೆ ಹಾಕಿಕೊಳ್ಳಲು ನಿರಂತರ ಪ್ರಯತ್ನ ನಡೆಸಿದ್ದಾನೆ. "ಲಾಡ್ಜ್‌ಗೆ ಹೋಗೋಣ, ಮಜಾ ಮಾಡೋಣ" ಎಂದೆಲ್ಲಾ ಹೇಳುತ್ತಾ ಆಕೆಯನ್ನು ನಿತ್ಯವೂ ಗೋಳುಹೊಯ್ಯುಕೊಳ್ಳಲಾರಂಭಿಸಿದ್ದಾನೆ. ಯಾವಾಗ ಈತನ ಕಾಟ ಜಾಸ್ತಿಯಾಯಿತೋ ಅನಿವಾರ್ಯವಾಗಿ ಆಕೆ ಪ್ರತಿಭಟಿಸಿ ಕೆಲಸವನ್ನೇ ಬಿಟ್ಟು ಪರಾರಿಯಾಗಿದ್ದಾಳೆ.



ಜಯರಾಮ್ ಪಾಠಕ್

ಆವಾಗಲಾದರೂ ಶ್ರೀಹರಿ ಸುಮ್ಮನಾಗುತ್ತಾನಾ ಎಂದರೆ ಅದೂ ಇಲ್ಲ. ತನ್ನ ಮೊಬೈಲ್‌ನಿಂದ ಆಕೆಯ ಮೊಬೈಲ್‌ಗೆ ಒಂದಾದಮೇಲೊಂದರಂತೆ ನಿರಂತರವಾಗಿ ಎಸ್‌ಎಂಎಸ್ ಕಳುಹಿಸಿ ಹಿಂಸೆ ಕೊಡಲಾರಂಭಿಸಿದ. ಆ ಎಸ್‌ಎಂಎಸ್‌ಗಳಾದರೂ ಎಂತಹದ್ದು? ಒಂದೇ ಒಂದು ಎಸ್‌ಎಂಎಸ್ ನ್ನಾದರೂ ಇಲ್ಲಿ ನಮೂದಿಸಲು ಸಾಧ್ಯವಿಲ್ಲ. ಅಷ್ಟೊಂದು ಕೊಳಕು, ಅಶ್ಲೀಲ ಭಾಷೆ ಬಳಸಿದ್ದಾನೆ. ಆ ಹುಡುಗಿಯ ಒಂದೊಂದು ಅಂಗಾಂಗಗಳನ್ನೂ ತನ್ನ ಕಾಮುಕ ಶೈಲಿಯಲ್ಲಿ ವರ್ಣಿಸಿ ಬರೆದಿದ್ದಾನೆ. ಈತನ ಕಿರುಕುಳ ತಾಳಲಾರದೇ ಆಕೆ ಕಂಪ್ಲೇಂಟ್ ಕೊಡುವತನಕ ಈತ ಬರೊಬ್ಬರಿ 145 ಎಸ್‌ಎಂಎಸ್ ಕಳಿಸಿದ್ದಾನೆ. 9819731356 ನಂಬರಿನಿಂದ 17 ಎಸ್‌ಎಂಎಸ್‌ಗಳನ್ನು ಹಾಗೂ 9620682711 ನಂಬರಿನಿಂದ 128 ಎಸ್‌ಎಂಎಸ್‌ಗಳನ್ನು ಕಳುಹಿಸಿದ್ದಾನೆ.



ಅಪ್ಪಾ ಮಾದೇಶ್

ಅಸಲಿಗೆ ಇಷ್ಟೊಂದು ಕೊಳಕು, ಅಶ್ಲೀಲ ಎಸ್‌ಎಂಎಸ್‌ಗಳನ್ನು ಮರ್ಯಾದೆಯಿರುವ ಯಾವ ಹುಡುಗಿಯೂ ಬೇರೆಯವರಿಗೆ ತೋರಿಸಲಾರಳು, ಮಾನ-ಮರ್ಯಾದೆಯ ಭಯದಿಂದ, ಭವಿಷ್ಯದ ಭಯದಿಂದ ಸುಮ್ಮನಿದ್ದು ಒಪ್ಪಿಕೊಂಡುಬಿಡುತ್ತಾಳೆ ಎಂಬುದು ಅವನ ಎಣಿಕೆ. ಆದರೆ, ಈತನ ಎಸ್‌ಎಂಎಸ್ ಕಿರುಕುಳ ವಿಪರೀತವಾದಾಗ ಅನಿವಾರ್ಯವಾಗಿ ನೇಹ ಮತ್ತು ಆಕೆಯ ಸಹೋದರ ಇಬ್ಬರೂ ಸೇರಿ ಕುವೆಂಪು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಕುವೆಂಪು ನಗರದ ಪೊಲೀಸರಾದರೂ ಅದೆಷ್ಟು ಸಮರ್ಥರು ಅಂತೀರಾ? ನೊಂದ ಹುಡುಗಿಯೊಬ್ಬಳು ಲಿಖಿತವಾಗಿ ಕಂಪ್ಲೇಂಟ್ ಕೊಟ್ಟರೂ, ತನಗೆ ಕಿರುಕುಳ ಕೊಟ್ಟಾತನ ಮೊಬೈಲ್ ನಂಬರುಗಳನ್ನು ಒದಗಿಸಿದರೂ ಅವರು ಒಂದಿಷ್ಟೂ ಆಸಕ್ತಿ ತೋರಲಿಲ್ಲ. "ಅಯೋ ಹೋಗಮ್ಮ ಇಂಥ ಎಷ್ಟು ಕೇಸುಗಳು ಬರ್‍ತವೆ?" ಎಂದು ಠಾಣೆಯ ಎಸ್ಸೈ ಪ್ರಸನ್ನ ಕುಮಾರ್ ಅಸಡ್ಡೆ ಪ್ರದರ್ಶಿಸಿದ್ದಾನೆ. ಕೊನೆಗೆ ನೇಹ ಮತ್ತವಳ ಸಹೋದರ ಪಟ್ಟು ಹಿಡಿದಾಗ ಅನಿವಾರ್ಯವಾಗಿ "ನೀನೇ ಅವನೊಂದಿಗೆ ಮೊಬೈಲ್‌ನಲ್ಲಿ ಚಾಟಿಂಗ್ ಮಾಡಿ ಅವನನ್ನು ಶಾಂತಿ ಸಾಗರ್ ಹೋಟೆಲ್ ಹತ್ತಿರ ಬರುವುದಕ್ಕೆ ಹೇಳು. ಆಗ ಹಿಡಿಯುತ್ತೇವೆ" ಎಂದು ಒಪ್ಪಿಕೊಂಡಿದ್ದಾನೆ. ಎಸ್ಸೈ ಪ್ರಸನ್ನ ಕುಮಾರ್‌ನ ಸಲಹೆಯಂತೆ ನೇಹ ಶ್ರೀಹರಿಯೊಂದಿಗೆ ಚಾಟ್ ಮಾಡಿ ಶಾಂತಿಸಾಗರ್ ಹೋಟೆಲ್ ಬಳಿ ಬರುವುದಕ್ಕೆ ಹೇಳಿದ್ದಾಳೆ. ಆದರೆ, ಅವನಿಗೆ ಅದೇನು ಅನುಮಾನ ಬಂತೋ ಗೊತ್ತಿಲ್ಲ ಆತ ಆ ಹೋಟೆಲ್ ಬಳಿ ಸುಳಿಯಲೇ ಇಲ್ಲ.

ಮುಂದಿನ ಎರಡು ದಿನಗಳ ಕಾಲ ನೇಹಳ ಸಹೋದರ ಮತ್ತು ಆತನ ಸ್ನೇಹಿತರು ಅದ್ಹೇಗೋ ಶ್ರೀಹರಿ ಪಾಠಕ್‌ನನ್ನು ಪತ್ತೆ ಮಾಡಿ ಅವನ ಹಿಂದೆ ಬಿದ್ದಿದ್ದಾರೆ. ವಿಜಯನಗರದ ಎರಡನೇ ಹಂತದಲ್ಲಿ ಪಾಠಕ್ ಕನ್‌ಸ್ಟ್ರಕ್ಷನ್ಸ್ ಅಪಾರ್ಟ್‌ಮೆಂಟೊಂದನ್ನು ನಿರ್ಮಾಣ ಆಗುತ್ತಿದೆ. ಸುತ್ತಮುತ್ತ ಅಲ್ಲೊಂದು ಇಲ್ಲೊಂದು ಮನೆಗಳಿರುವ ಈ ಪ್ರದೇಶದಲ್ಲಿ ಜನ ತಿರುಗಾಡುವುದೇ ವಿರಳ. ಅಂಥ ಜಾಗದಲ್ಲಿ ಶ್ರೀಹರಿ ಪಾಠಕ್ ತನ್ನ ಇನ್ನೋವಾ ಕಾರನ್ನು ನಿಲ್ಲಿಸಿಕೊಂಡು ಅದ್ಯಾವುದೋ ಹುಡುಗಿಯೊಂದಿಗೆ ಕಾಮಕೇಳಿ ತೀರಿಸಿಕೊಳ್ಳುತ್ತಿದ್ದ. ಈತ ಈ ರೀತಿ ಮಾಡುತ್ತಿದ್ದುದು ಇದೇ ಮೊದಲೇನಲ್ಲ, ವಾಸ್ತವದಲ್ಲಿ ಅದೇ ಅವನ ಮೂಲ ದಂಧೆ. ಕಂಪೆನಿ ಕೆಲಸವೇನಿದ್ದರೂ ಸೆಕೆಂಡರಿ. ಜನಕ್ಕೆ ಇದೆಲ್ಲಾ ಗೊತ್ತಿದ್ದರೂ "ಹಣವಂತರ ಸಹವಾಸ

▸▸▸18

ಚಿಗುರಿಕೊಳ್ಳುತ್ತಿರುವ ರೌಡಿಸಂ

ಮೈಸೂರಿನಲ್ಲಿ ತಣ್ಣಗಾದಂತೆ ಕಾಣುತ್ತಿದ್ದ ರೌಡಿಸಂ ಇತ್ತೀಚೆಗೆ ಚಿಗುರೊಡೆಯುತ್ತಿದೆ. ಹಫ್ತಾ ವಸೂಲಿ, ಬಡ್ಡಿ ದಂಧೆ, ರಿಯಲ್ ಎಸ್ಟೇಟ್ ದಾಂಧಲೆಗಳು ಬಲಿತು ನಿಂತಿವೆ. ನೀರವವಾಗಿದ್ದ ಸಾಂಸ್ಕೃತಿಕ ರಾಜಧಾನಿ ಮಚ್ಚು-ಲಾಂಗುಗಳ ಝಳಪಿಸುವಿಕೆಯ ಸದ್ದಿನಿಂದ ಕದಲುತ್ತಿದೆ. ಒಂದು ನರಬಲಿಯಾಗುವ ತನಕ ಅದು ನಿಲ್ಲುವಂತೆ ಕಾಣುತ್ತಿಲ್ಲ. ಈಗಾಗಲೇ ಭಯಭೀತವಾಗಿರುವ ಮೈಸೂರಿನ ಶಾಂತಿಪ್ರಿಯ ಜನ ಮತ್ತೊಬ್ಬ ಕಸ್ತೂರಿರಂಗನ್‌ಗಾಗಿ ಚಾತಕಪಕ್ಷಿಯಂತೆ ಕಾಯುತ್ತಿದ್ದಾರೆ.

ಒಂದು ವರ್ಷದ ಹಿಂದೆ ಹುಣಸೂರಿನ ಸಮೀಪದ ಮುದ್ದಪ್ಪ ಎಂಬುವವರ ತೋಟದ ಮನೆಯಲ್ಲಿ ಪಡುವಾರಹಳ್ಳಿಯ ತನ್ನ ವಿರೋಧಿಗಳಾದ ರಾಮು ಹಾಗೂ ರಾಜೇಶ ಎಂಬುವವರನ್ನು ಸೀಳಿ ಹಾಕಿ ಜೈಲು ಪಾಲಾಗಿದ್ದ ಅಪ್ಪಾ ಮಾದೇಶ ಕೆಲವೇ ತಿಂಗಳುಗಳ ಹಿಂದೆ ರಾಮನಗರ ಜೈಲಿನಿಂದ ವಾಪಸ್ಸಾಗಿದ್ದಾನೆ. ಅಪ್ಪಾ ಮಾದೇಶ ಮತ್ತಾತನ ಸೋದರ ಮಂಜನ ನೇತೃತ್ವದಲ್ಲಿ ಭೂಗತ ಲೋಕದ ಪಾತಕಿಗಳು ಮೈಸೂರು ನಗರವನ್ನೇ ಆಳಲಾರಂಭಿಸಿದ್ದಾರೆ. ಅಳಿದುಳಿದ ಚಿಕ್ಕಪುಟ್ಟ ಬೀದಿ ರೌಡಿಗಳು ಇವರ ಸಾಮ್ರಾಜ್ಯದಡಿಯಲ್ಲಿ ವಸೂಲಿ ದಂಧೆ, ಡೀಲುಗಳನ್ನು ಮಾಡಿಕೊಂಡಿದ್ದಾರೆ.

ಈಗಾಗಲೇ ಕೊಲೆ, ಸುಲಿಗೆ, ಡೀಲುಗಳಿಂದ ಮೈಸೂರು ನಗರವೊಂದರಲ್ಲೇ ನೂರು ಕೋಟಿಯಷ್ಟು ಮೌಲ್ಯದ ಆಸ್ತಿ ಮಾಡಿಕೊಂಡಿರುವ ಅಪ್ಪಾ ಮಾದೇಶನಿಗೆ ದುಡ್ಡಿನ ದಾಹ ಶುರುವಾಗಿಬಿಟ್ಟಿದೆ. ಮೀಟರ್ ಬಡ್ಡಿ ದಂಧೆ, ಹಫ್ತಾ ವಸೂಲಿ, ರಿಯಲ್ ಎಸ್ಟೇಟ್ ಡೀಲ್ - ಹೀಗೆ ಮಾದೇಶನ ಅಕ್ರಮ ಸಾಮ್ರಾಜ್ಯ ಬೆಳೆಯುತ್ತಲೇ ಇದೆ. ರಾಮನಗರದ ಜೈಲಿನಲ್ಲಿದ್ದಾಗ ಬೆಂಗಳೂರಿನ ಭೂಗತ ಲೋಕದೊಂದಿಗೆ ಸಂಪರ್ಕ ಸಾಧಿಸಿ ಕೆಲವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡಿದ್ದು ಅಪ್ಪಾ ಮಾದೇಶನ ಬಲವನ್ನು ಹೆಚ್ಚಿಸಿದೆ. ಈಗ ದುಡ್ಡಿಗಾಗಿ ಪೊಲೀಸರೂ ಇವನೊಂದಿಗೆ ಕೈಜೋಡಿಸುತ್ತಿದ್ದಾರೆಂಬುದು ಹಲವರ ಗುಮಾನಿ.

ಅಪ್ಪ ಮಾದೇಶ ರಾಮನಗರ ಜೈಲಿನಿಂದ ಬಿಡುಗಡೆಯಾಗುವ ಮುನ್ನಾ ದಿನ ರೌಡಿ ಸೈಲೆಂಟ್ ಸುನೀಲ ಅಂದು ಅಪ್ಪಾ ಮಾದೇಶನನ್ನು ಭೇಟಿಯಾಗಲು ಬರುತ್ತಿದ್ದಾನೆ ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದಕ್ಕಾಗಿ ಸೀಜರ್ ಹೇಮಂತ್ ಎಂಬ ರೌಡಿಯನ್ನು ಮಾದೇಶ ಜೈಲಿನಲ್ಲೇ ಬಡಿದುಹಾಕಿದ್ದ. ಇದು ಎಲ್ಲಾ ಜೈಲು ಅಧಿಕಾರಿಗಳಿಗೂ ಗೊತ್ತು, ಪೊಲೀಸರಿಗೂ ಗೊತ್ತು, ಆದರೂ ಅಪ್ಪಾ ಮಾದೇಶನಿಗೆ ಅವರ್‍ಯಾರೂ ಏನೂ ಮಾಡಲಿಲ್ಲ. ಆತ ಇದ್ದದ್ದು ಹೆಸರಿಗೆ ಜೈಲಾದರೂ ಕೇಬಲ್ ಸಹಿತವಿರುವ ಟಿವಿಯಾದಿಯಾಗಿ ಮಧ್ಯಮ ವರ್ಗದ ಮನೆಯೊಂದರಲ್ಲಿ ಸಿಗುವ ಎಲ್ಲಾ ಸೌಲಭ್ಯಗಳೂ ಅವನಿಗೆ ದೊರೆಯುವಂತೆ ಮಾಡಿದ್ದು ಇದೇ ಜೈಲಿನ ಅಧಿಕಾರಿಗಳು.

ಆತ ರಾಮನಗರ ಜೈಲಿನಿಂದ ಹೊರಬಿದ್ದಾಗ ನೂರಾರು ಕಾರುಗಳು ಅವನಿಗಾಗಿ ಕಾದಿದ್ದು ಮೈಸೂರಿನ ತನಕ ಆತನನ್ನು ಮಹಾರಾಜನಂತೆ ಮೆರವಣಿಗೆಯಲ್ಲಿ ಕರೆದುಕೊಂಡು ಬರಲಾಗಿತ್ತು. ಇನ್ನೂ ವಿಶೇಷ ಎಂದರೆ ಕಾಂಗ್ರೆಸ್, ಜನತಾದಳ, ಬಿಜೆಪಿಯ ಅನೇಕ 'ಗಣ್ಯ' ರಾಜಕಾರಣಿಗಳೂ ಈ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಈಗ ಮೈಸೂರಿಗೆ ಬಂದ ಮೇಲೆ ಅಪ್ಪಾ ಮಾದೇಶನ ಗಾಡ್‌ಫಾದರ್ ಜಿ.ಟಿ.ದೇವೇಗೌಡ ಅವನಿಗೆ ಬೆಂಗಾವಲಾಗಿ ನಿಂತಿದ್ದಾನೆ.

ಒಂದೆಡೆ ಜಿ.ಟಿ.ದೇವೇಗೌಡನಂಥ ರಾಜಕಾರಣಿಗಳು, ಇನ್ನೊಂದೆಡೆ ಜಯರಾಮ್ ಪಾಠಕ್‌ನಂಥ ದುಡ್ಡಿನ ಗಣಿಗಳು, ಮತ್ತೊಂದೆಡೆ ಭ್ರಷ್ಟ ಪೊಲೀಸರು - ಎಲ್ಲರೂ ಅಪ್ಪಾ ಮಾದೇಶನ ಬೆನ್ನಿಗೆ ನಿಂತಿದ್ದಾರೆ. ಇನ್ನು ಸುಂದರ ಮೈಸೂರನ್ನು ರಕ್ತದೋಕುಳಿಯಿಂದ ಯಾರು ರಕ್ಷಿಸುತ್ತಾರೆ ಹೇಳಿ?

ಯಾರೇ ತಂದೆಯೊಬ್ಬ ತನ್ನ ಮಗಳಿಗೆ ಇಂಥ ಉಡುಗೆ ತೊಡಿಸಿ ಫೋಟೋ ತೆಗೆಸಲು ಸಾಧ್ಯವಾ? ಅದೂ ಬಹಿರಂಗವಾಗಿ ತನ್ನ ಮಗಳ ಜೊತೆಗೇ ಪ್ರಣಯ ದೃಶ್ಯವೊಂದರಲ್ಲಿ ನಟಿಸುವ ತಂದೆಗೆ ನಾಚಿಕೆ, ಪಾಪಪ್ರಜ್ಞೆ, ಪಶ್ಚಾತ್ತಾಪ ಯಾವುದೂ ಬೇಡವೇ? 'ಮುಸ್ಸಂಜೆಯ ಗೆಳತಿ' ಕೇವಲ ಸಿನಿಮಾ ಮಾತ್ರವೇ ಆಗಿದ್ದರೆ, ಜನ ಅದನ್ನು ಕೇವಲ ಸಿನಿಮಾ ಆಗೇ ನೋಡುವಂತಿದ್ದರೆ ಇಂಥದೊಂದು ವರದಿಯ ಅಗತ್ಯವಿರುತ್ತಿರಲಿಲ್ಲ. ಆದರೆ ಅದು ಮನುಷ್ಯತ್ವಕ್ಕೇ ಬಗೆದ ಅಪಚಾರ. ಇಂಥದೊಂದು ಸಾಂಸ್ಕೃತಿಕ, ನೈತಿಕ, ಸಾಮಾಜಿಕ ಮತ್ತು ಭಾವನಾತ್ಮಕ ಅಸಹ್ಯಕ್ಕೆ ಕಾರಣನಾದವನು 'ಮುಸ್ಸಂಜೆಯ ಗೆಳತಿ' ಎಂಬ ಲೇಟೆಸ್ಟ್ ಚಿತ್ರದ ಸೋಕಾಲ್ಡ್ ಹೀರೋ ಕಂ ಪ್ರೊಡ್ಯೂಸರ್ ಕಂ ಡೈರೆಕ್ಟರ್ ಬಿ.ಪಿ. ಶ್ರೀನಿವಾಸ್!

● ರಾ. ಸೋಮನಾಥ್




ಅಪ್ಪಮಗಳ ವಿಕೃತಿಯ ಮುಸ್ಸಂಜೆಯ ಗೆಳತಿ

ಬಹಿರಂಗವಾಗಿ ತನ್ನ ಮಗಳ ಜೊತೆಗೇ ಪ್ರಣಯ ದೃಶ್ಯವೊಂದರಲ್ಲಿ ನಟಿಸುವ ತಂದೆಗೆ ನಾಚಿಕೆ, ಪಾಪಪ್ರಜ್ಞೆ, ಪಶ್ಚಾತ್ತಾಪ ಯಾವುದೂ ಬೇಡವೇ?

'ಮುಸ್ಸಂಜೆಯ ಗೆಳತಿ' ಕೇವಲ ಸಿನಿಮಾ ಮಾತ್ರವೇ ಆಗಿದ್ದರೆ, ಜನ ಅದನ್ನು ಕೇವಲ ಸಿನಿಮಾ ಆಗೇ ನೋಡುವಂತಿದ್ದರೆ ಇಂಥದೊಂದು ವರದಿಯ ಅಗತ್ಯವಿರುತ್ತಿರಲಿಲ್ಲ. ಆದರೆ ಅದು ಮನುಷ್ಯತ್ವಕ್ಕೇ ಬಗೆದ ಅಪಚಾರ. ಈ ಹಿಂದೆ ಪುಟ್ಟಣ್ಣ ಕಣಗಾಲ್ 'ರಂಗನಾಯಕಿ' ಚಿತ್ರದಲ್ಲಿ ತನ್ನ ಮಗನನ್ನೇ ಪ್ರೇಮಿಸುವ ತಾಯಿ ಪಾತ್ರವನ್ನು ಸೃಷ್ಟಿಸುವಾಗಲೂ ಅದಕ್ಕೊಂದು ತರ್ಕವಿತ್ತು, ತಾನು ಹಚ್ಚಿಕೊಂಡ ಹುಡುಗ ತಾನೇ ಜನ್ಮ ಕೊಟ್ಟ ಮಗ ಎಂಬ ಸತ್ಯ ಗೊತ್ತಾಗಿದ್ದೇ ತಾಯಿ ಆತ್ಮಹತ್ಯೆ ಮಾಡಿಕೊಳ್ಳುವ ದೃಶ್ಯವಿತ್ತು, ಆ ಮಟ್ಟಿಗೆ ಸಾಮಾಜಿಕ, ಸಾಂಸ್ಕೃತಿಕ ಪಾಪಪ್ರಜ್ಞೆಯೊಂದನ್ನು ಕಟ್ಟಿಕೊಟ್ಟವರು ಪುಟ್ಟಣ್ಣ ಕಣಗಾಲ್. ತೀರ ಇತ್ತೀಚೆಗೆ ಹಿಂದಿಯಲ್ಲಿ ಅಮಿತಾಭ್ ಬಚ್ಚನ್ ನಟಿಸಿದ 'ನಿಶಬ್ದ' ಮತ್ತು 'ಚೀನಿ ಕಮ್' ಚಿತ್ರಗಳು ಮಗಳ ವಯಸ್ಸಿನ ಯುವತಿಯನ್ನು ಪ್ರೀತಿಸುವ 'ಮುದಿಚಪಲದ' ವಿರುದ್ಧದ ಗೇಲಿಯಾಗಿತ್ತೇ ಹೊರತು ಎಲ್ಲೂ ಅದಕ್ಕೆ ಸಮರ್ಥನೆಯಿರಲಿಲ್ಲ.

ಆದರೆ 'ಮುಸ್ಸಂಜೆಯ ಗೆಳತಿ' ಇಂಥ ಎಲ್ಲಾ ಸಜ್ಜನಿಕೆ, ಭ್ರಷ್ಟಾಚಾರ ಮತ್ತು ಮನುಷ್ಯ ಸಂಬಂಧಗಳನ್ನು ಮೀರಿದ ಚಿತ್ರ. ಇಲ್ಲಿ ಹೀರೋರೂಪಿ ತಂದೆಗೆ ಆತನ ಮಗಳೇ ಹೀರೋಯಿನ್ನು. ತನ್ನ ಮೇಕಪ್‌ದಾರಿ ತಂದೆಯನ್ನು ಮದೋನ್ಮತ್ತ ಮಗಳು ಚುಂಬಿಸಲೆತ್ನಿಸುತ್ತಿರುವ ದೃಶ್ಯಾವಳಿಗಳನ್ನು ಲಜ್ಜೆಗೆಟ್ಟು ಜಾಹೀರಾತು ಕೊಡುತ್ತಿದ್ದಾನೆ ಬಿ.ಪಿ. ಶ್ರೀನಿವಾಸ್. ಇನ್ನೂ ಸೆನ್ಸಾರಿಗೆ ಹೋಗಿಲ್ಲ. ಸ್ವತಃ ಫಿಲ್ಮ್ ಛೇಂಬರ್ ಅಧ್ಯಕ್ಷೆ ಜಯಮಾಲಾರೇ ಆತನನ್ನು ಕರೆದು ಮಂಗಳಾರತಿ ಮಾಡಿದ್ದಾರೆ. ತಂದೆ-ಮಗಳು ಹೀರೋ-ಹೀರೋಯಿನ್ನಾಗಿ ನಟಿಸುವುದು ತಪ್ಪಲ್ಲ, ಆದರೆ ನಟಿಸುತ್ತಿರುವ ಪಾತ್ರ ಮತ್ತು ದೃಶ್ಯಗಳಿವೆಯಲ್ಲ; ಅದು ಸಮಾಜದ ದೃಷ್ಟಿಯಲ್ಲಿ ಅಕ್ಷಮ್ಯ.



ಕೆರಳಿದ ಜಯಮಾಲಾ

"....ನಿಜಕ್ಕೂ ಆಕೆಗೆ ನೀನು ಜನ್ಮ ಕೊಟ್ಟ ತಂದೆಯಾ? ನಿಜ ಹೇಳು, ಆ ಮಗುವಿಗೆ ತಾಯಿಯಾದವಳು ಇದಕ್ಕೆಲ್ಲ ಒಪ್ಪಿದಳಾ? ಮಗಳ ಜೊತೆಗೆ ಹೀಗೆಲ್ಲ ಪೋಜು ಕೊಡುವಾಗ ನಿನಗೆ ಕರುಳು ಚುರುಕ್ ಅನ್ನಲಿಲ್ಲವಾ?" ಎಂದು ಫಿಲ್ಮ್ ಛೇಂಬರ್ ಅಧ್ಯಕ್ಷೆ ಜಯಮಾಲಾ ರೇಗುತ್ತಿದ್ದರೆ ಶ್ರೀನಿವಾಸ್ ತಗ್ಗಿಸಿದ ತಲೆ ಮೇಲೆತ್ತಲೇ ಇಲ್ಲ. ಇದು ಕೇವಲ ಜಯಮಾಲಾರ ಗುಮಾನಿಯಷ್ಟೇ ಅಲ್ಲ, ಬಿ.ಪಿ. ಶ್ರೀನಿವಾಸ್ ಎಂಬ ಭೂಪನ ಹಿನ್ನೆಲೆ ಮತ್ತು ಜಾತಕ ಬಲ್ಲವರೆಲ್ಲರನ್ನೂ ಕಾಡುತ್ತಿರುವ ಪ್ರಶ್ನೆ. ಈತ ಅರೆಕಾಲಿಕ ಪುಢಾರಿ ಮತ್ತು ಅರೆಬರೆ ಸಿನಿಮಾ ಕ್ರಿಮಿ. 2004ರ ವಿಧಾನಸಭಾ ಚುನಾವಣೆಯಲ್ಲಿ ತುಮಕೂರಿನ ಬೆಳ್ಳಾವಿ ಕ್ಷೇತ್ರಕ್ಕೆ ಜನತಾಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಶ್ರೀನಿವಾಸ್ ಈ ಹಿಂದೆ 'ವಾರಸ್ದಾರ' ಎಂಬ ಥರ್ಡ್‌ರೇಟ್ ಚಿತ್ರ ನಿರ್ಮಿಸಿದ್ದ.

ವಿಕೃತಿಗೂ ಒಂದು ಮಿತಿಯಿದೆ. ತನ್ನ ಮಗಳು ಮೊಮ್ಮಗಳ ವಯಸ್ಸಿನ ಹುಡುಗಿಯೊಂದಿಗೆ ಮರಸುತ್ತುವ ಪಾತ್ರ ಮಾಡಿದ್ದ ಎನ್‌ಟಿಆರ್, ಅಕ್ಕಿನೇನಿ, ಬಚ್ಚನ್ ಇತ್ಯಾದಿಗಳಿಗೆಲ್ಲ ಆ ಬಗ್ಗೆ ವಿಷಾದವಿತ್ತೇ ಹೊರತು ಯಾವತ್ತೂ ಅಹಂಕಾರದ ಮಾತಾಡಿದ್ದಿಲ್ಲ. ಆದರೆ ಈ ಭೂಪನ ದುಸ್ಸಾಹಸವಿದೆಯಲ್ಲ; ಆತನ ಧೈರ್ಯಕ್ಕೆ ಸೈತಾನನೂ ನಾಚಲೇಬೇಕು.

ತಂದೆಯೊಬ್ಬ ತನ್ನ ಮಗಳ ಜೊತೆಗೇ ಚಕ್ಕಂದ ಆಡುವುದನ್ನು ಲೋಕ ಸಹಿಸುತ್ತಾ? ಕ್ಷಮಿಸುತ್ತಾ?

ಕೇಳುವುದಕ್ಕೇ ಅಸಹ್ಯದ ಪ್ರಶ್ನೆಯಿದು. ಇಂಥದೊಂದು ಸಾಂಸ್ಕೃತಿಕ, ನೈತಿಕ, ಸಾಮಾಜಿಕ ಮತ್ತು ಭಾವನಾತ್ಮಕ ಅಸಹ್ಯಕ್ಕೆ ಕಾರಣನಾದವನು 'ಮುಸ್ಸಂಜೆಯ ಗೆಳತಿ' ಎಂಬ ಲೇಟೆಸ್ಟ್ ಚಿತ್ರದ ಸೋಕಾಲ್ಡ್ ಹೀರೋ ಕಂ ಪ್ರೊಡ್ಯೂಸರ್ ಕಂ ಡೈರೆಕ್ಟರ್ ಬಿ.ಪಿ. ಶ್ರೀನಿವಾಸ್!

ವಿಶ್ವದ ಚಿತ್ರರಂಗದಲ್ಲೇ ತಂದೆ-ಮಗಳು ನಾಯಕ ನಾಯಕಿಯಾಗಿ ಅಭಿನಯಿಸಿರುವ ಮೊಟ್ಟಮೊದಲ ಕನ್ನಡ ಚಿತ್ರ ಎಂಬ ಹೆ(ಕು)ಗ್ಗಳಿಕೆಯೊಂದಿಗೆ ಈತನ 'ಮುಸ್ಸಂಜೆಯ ಗೆಳತಿ' ಚಿತ್ರ ಇಷ್ಟರಲ್ಲೇ ಬಿಡುಗಡೆಯಾಗುತ್ತಿದೆ. ತನ್ನ ಮಗಳಿಗೆ ಅರೆಬರೆ ಉಡುಗೆ ತೊಡಿಸಿ ಪಕ್ಕಾ ಪ್ರಿಯಕರನಂತೆ ಪೋಜು ಕೊಡುತ್ತಿರುವ ಈತನ ಪೋಸ್ಟರುಗಳು ಬೆಂಗಳೂರಿನ ಸಂದಿಗೊಂದಿಗಳಲ್ಲೂ ಇಟ್ಯಾಡುತ್ತಿದೆ. ಪತ್ರಿಕಾ ಜಾಹೀರಾತು, ಭಿತ್ತಿಪತ್ರಗಳು, ಸಿನಿಮಾ ಸಂಬಂಧಿ ಪತ್ರಿಕೆಗಳಲ್ಲಿ ಅಚ್ಚಾಗುತ್ತಿರುವ ದೃಶ್ಯಾವಳಿಯನ್ನೆಲ್ಲ ಲೆಕ್ಕ ಹಾಕಿ ಹೇಳುವುದಾದರೆ; 'ಮುಸ್ಸಂಜೆಯ ಗೆಳತಿ' ಒಂದು ವಿಲಕ್ಷಣ ಗ್ಲಾಮರಸ್ ಚಿತ್ರ. ಅದರ ಹೀರೋಯಿನ್ ಶಾಲಿನಿ 'ಬಿಂದಾಸ್' ಆಗಿಯೇ ತನ್ನ ಅಪ್ಪನ ಜೊತೆ ಪ್ರಣಯ ದೃಶ್ಯಗಳಲ್ಲಿ ನಟಿಸಿದ್ದಾಳೆ. ಹೀರೋರೂಪಿ ಅಪ್ಪನ ತೆಕ್ಕೆಯಲ್ಲಿ ಸೆಕ್ಸಿ ಡ್ರೆಸ್ ತೊಟ್ಟು ಪೋಜು ಕೊಡುವ ಮಗಳು, ಒಳಉಡುಪುಗಳೂ ಕೂಡ ಕಾಣಿಸುವಂತೆ ಹೀರೋಯಿನ್ನಳ ಪಾರದರ್ಶಕ ಪೋಷಾಕು, ಅಪ್ಪನನ್ನೇ ಅಪ್ಪಿ ನಿಂತು ರಮಿಸುತ್ತಿರುವ ನಾಯಕಿ; ಹೀಗೆ ಹಸಿಬಿಸಿ ಚಿತ್ರಾವಳಿಗಳಿರುವ 'ಮುಸ್ಸಂಜೆಯ ಗೆಳತಿ' ಚಿತ್ರದ ಜಾಹೀರಾತನ್ನು ಈ ಭೂಮಿಯ ಯಾರೇ ತಂದೆ-ಮಗಳು ಒಟ್ಟೊಟ್ಟಿಗೆ ನಿಂತು ನೋಡಲು ಸಾಧ್ಯವೇ?



ರಂಗನಾಯಕಿ?

ಯಾರೇ ತಂದೆಯೊಬ್ಬ ತನ್ನ ಮಗಳಿಗೆ ಇಂಥ ಉಡುಗೆ ತೊಡಿಸಿ ಫೋಟೋ ತೆಗೆಸಲು ಸಾಧ್ಯವಾ? ಅದೂ

ಅನಂತ್‌ನಾಗ್ ಏಕೆ?

ಈತ ನವನೀತಾ ಎಂಬ ಸಿನಿಮಾ ನಟಿಯೊಬ್ಬಳ ಗಂಡ. 'ವಾರಸ್ದಾರ' ಚಿತ್ರದಲ್ಲಿ ತಾನೂ ನಟಿಸಿದ್ದಲ್ಲದೇ ಪತ್ನಿಗೂ ಸಿನಿಮಾದಲ್ಲಿ ಪ್ರಮುಖ ಪಾತ್ರ ಕೊಟ್ಟಿದ್ದ. ತೆರೆಕಂಡ ಮೂರನೇ ದಿನಕ್ಕೇ ಥಿಯೇಟರ್‌ಗಳಿಂದ ಎತ್ತಂಗಡಿಯಾದ 'ವಾರಸ್ದಾರ' ಅತ್ಯಂತ ಕಳಪೆ ಚಿತ್ರಗಳ ಸಾಲಿಗೆ ಸೇರಿತು. ಆನಂತರ ಹತ್ತು ಕೋಟಿ ರೂಪಾಯಿಗಳ ಬಜೆಟ್ಟಿನಲ್ಲಿ 'ಹರಿಶ್ಚಂದ್ರಾಘಾಟ್' ಎಂಬ ಚಿತ್ರಕ್ಕೆ ಶ್ರೀನಿವಾಸ್ ಕೈಯಿಟ್ಟ. ಹರಿಶ್ಚಂದ್ರಾಘಾಟ್ ಅಂದರೆ ಸ್ಮಶಾನ! ಹೆಸರಿನ ಲೀಲೆಯೋ ಅಥವಾ ಸ್ಥಳ ಮಹಿಮೆಯೋ 'ಹರಿಶ್ಚಂದ್ರಘಾಟ್' ಡಬ್ಬಾ ಬಿಟ್ಟು ಹೊರಬರಲೇ ಇಲ್ಲ. ಈಗ ಬರುತ್ತಿರುವ 'ಮುಸ್ಸಂಜೆಯ ಗೆಳತಿ' ಆತನ ಮೂರನೇ ಚಿತ್ರ.

"ನೋಡಿ ಸಾರ್, ನನ್ನ ಮಗಳು ಶಾಲಿನಿ ಕೃಪಾನಿಧಿ ಕಾಲೇಜಿನಲ್ಲಿ ಸೆಕೆಂಡ್ ಪಿಯೂಸಿ ಸ್ಟೂಡೆಂಟು. ಅವಳಿಗೆ ಸಿನಿಮಾದಲ್ಲಿ ನಟಿಸೋದಕ್ಕೆ ತುಂಬಾ ಆಸೆಯಿತ್ತು. ಮಗಳ ಆಸೆ ಪೂರೈಸಬೇಕಲ್ಲ; ಅದಕ್ಕೇ 'ಮುಸ್ಸಂಜೆಯ ಗೆಳತಿ'ಗೆ ಎರಡು ಕೋಟಿಯ ಬಂಡವಾಳ ಹಾಕಿದ್ದೀನಿ. ನಂದೇ ಕತೆ. ನಂದು ಅದರಲ್ಲಿ ನಡುವಯಸ್ಸಿನ ಅವಿವಾಹಿತ ಪ್ರೊಫೆಸರ್ ಪಾತ್ರ. ಅನಾಥ ಹೆಣ್ಣುಮಗುವೊಂದನ್ನು ಸಾಕಿಕೊಂಡು ಸಾಕ್ಷಾತ್ ತಂದೆಯಂತೆ ಪ್ರೀತಿಸುವ ಪ್ರೊಫೆಸರ್‌ಗೆ ಮಗಳ ಗೆಳತಿಯ ಪರಿಚಯವಾಗುತ್ತದೆ. ಮಗಳ ಗೆಳತಿಗೂ ಪ್ರೊಫೆಸರ್ ಅಂದರೆ ಅಚ್ಚುಮೆಚ್ಚು. ಅದನ್ನೇ ಪ್ರೊಫೆಸರ್ ತಪ್ಪಾಗಿ ಭಾವಿಸಿ ಮಗಳ ಗೆಳತಿಯನ್ನು ಪ್ರೀತಿಸಲಾರಂಭಿಸುತ್ತಾನೆ. ಆದರೆ ಹೀರೋಯಿನ್‌ಗಿದು ಗೊತ್ತಿಲ್ಲ. ಆಕೆ ತನ್ನ ವಯಸ್ಸಿನ ಹುಡುಗನೊಬ್ಬನ ಜೊತೆ ಸಲುಗೆಯಿಂದಿರುತ್ತಾಳೆ. ಇನ್ನೇನು ಹೀರೋಯಿನ್ ತನ್ನ ಪ್ರಿಯಕರನ ಜೊತೆ ಮದುವೆಯಾಗಬೇಕೆನ್ನುವಷ್ಟರಲ್ಲಿ ತನ್ನ ತಪ್ಪಿನ ಅರಿವಾದ ಪ್ರೊಫೆಸರ್ ಆತ್ಮಹತ್ಯೆಗೆ ಯತ್ನಿಸುತ್ತಾನೆ. ಆದರೆ ಸಾಯದೇ ಇಪ್ಪತ್ತು ವರ್ಷಗಳ ನಂತರ ಮತ್ತೆ ಹೀರೋಯಿನ್‌ಗೆ ಮುಖಾಮುಖಿಯಾಗುತ್ತಾನೆ. ಆಗ ಏನು ನಡೆಯುತ್ತೆ ಅನ್ನೋದೇ ಕ್ಲೈಮ್ಯಾಕ್ಸು ಮತ್ತು ಸಸ್ಪೆನ್ಸು..."

ಮಗಳೋ ಮಲಮಗಳೊ?

ಫೈನಾನ್ಶಿಯರ್, ಬ್ಯಾಂಕರ್, ಬಿಲ್ಡರ್, ಫಿಲ್ಮ್ ಪ್ರೊಡ್ಯೂಸರ್, ಆಕ್ಟರ್, ರಾಜಕಾರಣಿ ಎಲ್ಲವೂ ಆಗಿರುವ ಬಿ.ಪಿ. ಶ್ರೀನಿವಾಸ್‌ನ ಹಿನ್ನೆಲೆ ಬಲ್ಲವರೊಬ್ಬರ ಪ್ರಕಾರ 'ಮುಸ್ಸಂಜೆಯ ಗೆಳತಿ' ಚಿತ್ರದ ಹೀರೋಯಿನ್ ಶಾಲಿನಿ ಆತನಿಗೆ ಸ್ವಂತ ಮಗಳೇನಲ್ಲ, ಆತನ ಮೂವರು ಪತ್ನಿಯರ ಪೈಕಿ ವಸಂತ ಎಂಬಾಕೆಯ ವಿಚ್ಛೇದಿತ ಪತಿಯೇ ಜೈವಿಕವಾಗಿ ಆಕೆಗೆ ತಂದೆಯಾಗಬೇಕು!

ಅದು ನಿಜವೇ ಆಗಿದ್ದಲ್ಲಿ ಹೀರೋಯಿನ್ ಶಾಲಿನಿಗೆ ಶ್ರೀನಿವಾಸ್ ಮಲತಂದೆಯಾಗುತ್ತಾನೆ. ಆದರೆ ಆತ ಹೇಳಿಕೊಳ್ಳುವುದೇ ಬೇರೆ. ಶಾಲಿನಿ ತನ್ನ ನಟಿಪತ್ನಿ ನವನೀತಾರ ಮಗಳು ಎಂಬ ಆತನ ಮಾತೇ ಶುದ್ಧಾಂಗ ಸುಳ್ಳು. ಎರಡನೇ ಪತ್ನಿ ವಸಂತಾ ಶಾಲಿನಿಯ ತಾಯಿಯೇ ಹೊರತು ನವನೀತಾ ಅಲ್ಲ. ಈ ನವನೀತಾ ಕೇವಲ ಸಿನಿಮಾ ನಟಿಯಷ್ಟೇ ಅಲ್ಲ, ತುಮಕೂರು ಗ್ರಾಮಾಂತರದ ಬುಗುಡನಹಳ್ಳಿಯ ತಾಲ್ಲೂಕು ಪಂಚಾಯ್ತಿ ಸದಸ್ಯೆ ಬಹುಶಃ 2004 ರಲ್ಲಿ ಕೆ.ಎನ್. ರಾಜಣ್ಣ ಜೆಡಿಎಸ್ ಅಭ್ಯರ್ಥಿಯಾಗಿ ಬೆಳ್ಳಾವಿಗೆ ಸ್ಪರ್ಧಿಸದೇ ಹೋಗಿದ್ದರೆ ಶ್ರೀನಿವಾಸ್ ಈ ಹೊತ್ತಿಗೆ ಎಮ್ಮೆಲ್ಲೆಯಾಗಿರುತ್ತಿದ್ದ. ಆ ಮಟ್ಟಿಗೆ ಶ್ರೀನಿವಾಸ್ ದುಡ್ಡನ್ನು ಚೆಲ್ಲಿದ್ದ. ಇವಾಗ್ಲೂ ಆತನಿಗೆ ರಾಜಕೀಯದ ಹುಚ್ಚು ಬಿಟ್ಟಿಲ್ಲ. ಸದ್ಯ ಬಿಜೆಪಿ ಪಾಳಯದಲ್ಲಿ ಓಡಾಡಿಕೊಂಡಿದ್ದಾನೆ. 'ಮುಸ್ಸಂಜೆಯ ಗೆಳತಿ' ಬಿಡುಗಡೆಯಾಗಿದ್ದೇ ಮತ್ತೊಂದು ಸಿನಿಮಾ ನಿರ್ಮಿಸುತ್ತಾನಂತೆ. ಅದಕ್ಕೂ ಈತನೇ ಹೀರೋ ಕಂ ಪ್ರೊಡ್ಯೂಸರ್ ಕಂ ಡೈರೆಕ್ಟರ್.



ಕತೆಯೇನು ಗೊತ್ತೆ?

ಮೂವರು ಹೆಂಡತಿಯರೊಂದಿಗೆ ಗಂಡನೊಬ್ಬ ಎಷ್ಟೆಲ್ಲಾ ಹೆಣಗಾಡುತ್ತಾನೆ ಎಂಬುದು! ಇಂಥ ಒಂದೊಂದೇ ವಿಕೃತಿಗಳನ್ನೆಲ್ಲ ಸಿನಿಮಾ ಮಾಡುತ್ತಾ ಹೊರಟನೆಂದರೆ ನೋಡಿದವರ ಗತಿ ಏನಾಗಬೇಕು? ಇಂಥ ಅಸಹ್ಯಕ್ಕೆ ಚಿತ್ರರಂಗ ಬಳಕೆಯಾಗಬೇಕೆ? ಕರ್ನಾಟಕದ ಪ್ರೇಕ್ಷಕರೇನು ಸಂಸ್ಕೃತಿಹೀನರೆ? ಅನಾಗರಿಕರೆ?

ಯಾವುದೇ ಕಾರಣಕ್ಕೂ 'ಮುಸ್ಸಂಜೆಯ ಗೆಳತಿ'ಯಂಥ ವಿಕೃತ ಚಿತ್ರಕ್ಕೆ ಜನ ಮಣೆಹಾಕದಂತೆ ಮಾಡುವ ಜವಾಬ್ದಾರಿ ಜನಪರ ಸಂಘಟನೆಗಳ ಮೇಲಿದೆ. ಫಿಲ್ಮ್ ಚೇಂಬರ್ ಅಧ್ಯಕ್ಷೆ ಜಯಮಾಲಾ ಈ ನಿಟ್ಟಿನಲ್ಲಿ ಮೊದಲು ಕೂಗೆಬ್ಬಿಸಲಿ.

▶▶▶ 12

...ಆಪ'ಶ್ರುತಿ' ಮೂಡಿಸಿದ್ದೇ ಚಂದ್ರ'ಚೋಡ್'



ಕನ್ನಡದ ಅತ್ಯುತ್ತಮ ಕಲಾವಿದೆ ಶ್ರುತಿ ಇನ್ನೊಬ್ಬ ...ತ್ತಮ ನಿರ್ದೇಶಕ ಮಹೇಂದರ್‌ರಿಂದ ಡೈವೋರ್ಸ್ ...ಯಲು ಹೊರಟಿದ್ದಾರೆ.

ಇದಕ್ಕೆ ಕಾರಣಗಳೇನೇ ಇರಲಿ, ಯಾರದ್ದೇ ದಾಂಪತ್ಯ ...ವನದಲ್ಲಿ ಬಿರುಕು ಮೂಡಿದಾಗ ಸಹನೆ ಇರುವವರು ...ಂದಾಣಿಕೆಗೆ ಯತ್ನಿಸುತ್ತಾರೆ, ಆಗದಿದ್ದಾಗ ಧೈರ್ಯ ...ಉಳ್ಳವರು ಅದರಿಂದ ಹೊರಬಂದು ಹೊಸ ಬದುಕು ...ಕೊಳ್ಳಲು ಹೊರಡುತ್ತಾರೆ.

ಶ್ರುತಿ ಈಗ ಮಾಡುತ್ತಿರುವುದು ಅದನ್ನೇ. ಅದನ್ನು ...ಪ್ಪು ಎನ್ನಲಾಗದು.

ಆದರೆ ಅಲ್ಲಿಂದಾಚೆಗೆ ಏನು ನಡೆಯಲಿದೆ ಎಂಬ ...ದ್ದಿಗಳೂ ಈಗ ಕೇಳಿಬರುತ್ತಿವೆ. ಅದನ್ನು ಕೇಳಿದವರು ...ದಿ ಹೋಯ್ತು ಬಿಡಿ, ಮುಂದೆ ಈವಮ್ಮ ಬಯಸೋ ...ಮ್ಮದಿ, ಸೌಖ್ಯ ಯಾವುದೂ ಸಿಗೋ ತರ ಕಾಣಲ್ಲ" ...ತಲೇ ಗೇಲಿ ಮಾಡುತ್ತಿದ್ದಾರೆ.

ಯಾಕೆ ಗೊತ್ತಾ?

ಮಹೇಂದರ್‌ರಿಂದ ಡೈವೋರ್ಸ್ ಪಡೆದುಕೊಂಡ ...ತರ ಶ್ರುತಿ ಇನ್ನೊಂದು ಮದುವೆ ಆಗುತ್ತಿದ್ದಾರಂತೆ. ...ವರು ಕೈ ಹಿಡಿಯಲಿರುವ ಆ ವರಮಹಾಶಯ ಯಾರು ...ತ್ತಾ?

ಚಂದ್ರಚೋಡ್ ಅಲಿಯಾಸ್ ಚಕ್ರವರ್ತಿ!

ಯಾರಿದು? ಏನಿದು? ಎಂಬ ಪ್ರಶ್ನೆಗಳೇಳುವ ...ದಿರಿದು. ಅಸಲಿಗೆ ಈತನ ಬಗ್ಗೆ ಬಹುತೇಕರಿಗೆ ಗೊತ್ತೇ ಇಲ್ಲ. ಸದ್ಯಕ್ಕೆ ಗೊತ್ತಾಗುತ್ತಿರುವ ವಿಚಾರ ಹೇಳಬೇಕೆಂದರೆ ಈ ಚಂದ್ರಚೋಡ್ ಒಬ್ಬ ವಿಫಲ ಮಾಜಿ ಪತ್ರಕರ್ತ. ಅಷ್ಟೇ ಅಲ್ಲ ಪತ್ರಿಕೋದ್ಯಮದಲ್ಲಿ ಬಂಡಲ್ ಬಾಸ್ ಎಂಬ ಕೀರ್ತಿ ಗಳಿಸಿ ಆಮೇಲೆ 'ನಾನೂ ಪಿಚ್ಚರ್ ತೆಗೀತೀನಿ' ಅಂತ ಕಳೆದ ನಾಲ್ಕೈದು ವರ್ಷಗಳಿಂದ ಓಡಾಡುತ್ತಿರುವ ಆಸಾಮಿ. ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ತೂಕದಲ್ಲಾಗಲಿ, ವ್ಯಕ್ತಿತ್ವದಲ್ಲಾಗಲಿ, ಇಮೇಜಿನಲ್ಲಾಗಲಿ ಮಹೇಂದರ್‌ಗೆ ಹೋಲಿಸಿದರೆ ಒಂದಾಣೆಯ ಸಮಕ್ಕೂ ಬಾರದವನು.

ಇಷ್ಟಕ್ಕೂ ಈ ಹೊಸ ಮದುವೆ ವಿಚಾರವನ್ನು ಶ್ರುತಿ ಇನ್ನೂ ಖಚಿತಪಡಿಸಿಲ್ಲ ಆದರೆ ಚಕ್ರವರ್ತಿ ಮಾತ್ರ ಒಬ್ಬೊಬ್ಬರೆ ಪತ್ರಕರ್ತರಿಗೆ, ಟಿವಿ ಚಾನಲ್ಲುಗಳಿಗೆ ತಾನೆ ಮೇಲೆಬಿದ್ದು ಫೋನ್ ಮಾಡಿ "ನಾವು ಎರಡು ವರ್ಷದಿಂದ ಲವ್ ಮಾಡ್ತಿದ್ದೀವಿ, ಇನ್ನೇನು ಮದುವೇನೂ ಆಗ್ತೀವಿ" ಎಂದು ಸುದ್ದಿ ಹಬ್ಬಿಸುತ್ತಿದ್ದಾನೆ. ಇವನ ಮಾತು, ವರ್ತನೆಗಳಲ್ಲಂತೂ ಒಂದು ತರದ ಅಸಹಜ ಅರ್ಜೆನ್ಸಿ ಇದೆ. ಇದರ ಕಾರಣವನ್ನು ನೀವೇ ಊಹಿಸಬೇಕು.

ಅಂದಹಾಗೆ ಈ ಚಂದ್ರಚೂಡನೂ ವಿವಾಹಿತನೆ. ಹೆಂಡತಿ ಟೀಚರ್. ಚುಕ್ಕಿ ಎನ್ನುವ ಪುಟ್ಟ ಮಗಳೂ ಇದ್ದಾಳೆ. ಈಗ ಶ್ರುತಿ ಒಂದು ಕಡೆ ಡೈವೋರ್ಸ್‌ಗೆ ಅರ್ಜಿ ಹಾಕಿರುವಾಗಲೇ ಈ ಚಂದ್ರಚೂಡನೂ ತನ್ನ ಹೆಂಡತಿಗೆ ಡೈವೋರ್ಸ್ ಕೊಡಲು ಹೊರಟಿದ್ದಾನೆ.

ಈ ಆಸಾಮಿ ಶ್ರುತಿ-ಮಹೇಂದರ್ ಮಧ್ಯೆ ಯಾವಾಗ ನುಗ್ಗಿ ಬಂದ, ದಂಪತಿಗಳ ನಡುವೆ ವೈಮನಸ್ಸು ಹುಟ್ಟಲು ಏನು ಮಾಡಿದ, ಎನ್ನುವುದೆಲ್ಲಾ ಇಂಟರೆಸ್ಟಿಂಗ್ ಆದ ಒಂದು ಸಿನಿಮಾ ಕತೆ ತರಹವೇ ಇದೆ.

ಈ ನಡುವೆ ಸಿನಿಮಾ ಅವಕಾಶಗಳೇ ಇರದೇ ನಟಿ ಶ್ರುತಿ ಹಾಗೂ ನಿರ್ದೇಶಕ ಮಹೇಂದರ್ ಹೈರಾಣಾಗಿ ಹೋಗಿದ್ದರು ನಿಜ. ಕೈಲಿ ದುಡ್ಡಿರದಿದ್ದರೆ, ಯಶಸ್ಸು ಅನ್ನುವುದು ಕೈಕೊಟ್ಟರೆ, ಕುಂತು ತಿನ್ನಲು ಅಪ್ಪ ಮಾಡಿಟ್ಟ ಆಸ್ತಿಯಿರದೇ ಹೋದರೆ ಅದಿನ್ನೆಂತಾ ಮಹೋನ್ನತ ಪ್ರೇಮಿಗೂ ಬದುಕು ಕಡುಕಷ್ಟವೇ.

ಮಹೇಂದರ್ ಈಗಿನ ಸ್ಥಿತಿ ಅದೇ ತರ ಇದೆ. ಈತ ಇದುವರೆಗೂ 25 ಸಿನಿಮಾ ನಿರ್ದೇಶಿಸಿದ್ದಾನೆ. ಆದರೂ ದೊಡ್ಡ ಮಟ್ಟದ ದುಡಿಮೆ ಮಾಡಿರಲಿಲ್ಲ. ಇನ್ನು ಸಿನಿಮಾ ಸಾಕು, ರಾಜಕೀಯಕ್ಕಿಳಿದು ಎಂಎಲ್‌ಎ ಆಗುತ್ತೇನೆ ಅಂತ ಹೊರಟು ಕಳೆದ ವರ್ಷ ಮೇನಲ್ಲಿ ಕೊಳ್ಳೇಗಾಲ ಅಸೆಂಬ್ಲಿಗೆ ನಿಂತ. ಟಿಕೆಟ್ ಕೊಟ್ಟ ಬಿಜೆಪಿಗಳು ಖರ್ಚಿಗೂ ಸ್ವಲ್ಪ ಕಾಸು ಕೊಟ್ಟರಾದರೂ ದೇವರು ಮೈಮೇಲೆ ಬಂದವನಂತೆ ಲೆಕ್ಕಬುಕ್ಕಿಲ್ಲದೆ ಸಾಲ ಮಾಡಿ ಎಲೆಕ್ಷನ್ ನಡೆಸಿದ್ದ. ಮನೆ ಅಡವಿಟ್ಟು ಸಾಲಾನೂ ತಂದ ಎಂಬ ಮಾತೂ ಕೇಳಿ ಬರುತ್ತಿದೆ. ಬೆಂಗಳೂರಿನ ಬಸವೇಶ್ವರ ನಗರದಲ್ಲಿರುವ 'ಮಡಿಲು' ಎಂಬ ಶ್ರುತಿಯ ಮನೆ ಅದು. ಆದರೆ ಮಹೇಂದರ್ ಎಲೆಕ್ಷನ್‌ನಲ್ಲಿ ಹೀನಾಯವಾಗಿ ಸೋತ.

ಅವೊತ್ತಿಗೆ ಆತ ಪೂರಾ ಪಾತಾಳ ಸೇರಿದ್ದ. ಈ ನಡುವೆ ಶ್ರುತಿ ಬಿಜೆಪಿ ಪರ ಎಲೆಕ್ಷನ್‌ಗೆ ಓಡಾಡುತ್ತಲೇ ಮಹಿಳಾ ಮಕ್ಕಳ ಅಭಿವೃದ್ಧಿ ನಿಗಮದ ಅಧ್ಯಕ್ಷಗಿರಿ ಗಿಟ್ಟಿಸಿಕೊಂಡಳು. ಸಹಜವಾಗೇ ಆಕೆಯ ಬದುಕಿನ ಗ್ರಾಫ್ ಮೇಲೇರಿತ್ತು, ಕೆಳಗೆ ಬಿದ್ದ ಮಹೇಂದರ್ ಈಗ ಶ್ರುತಿ ಬದುಕಿನಿಂದಲೇ ಹೊರಹೋಗಬೇಕಾಗಿ ಬಂದಿದೆ.

ಶ್ರುತಿ ದುರ್ಬಲನಾದ ಗಂಡನ ಕೈಬಿಡುತ್ತಿದ್ದಾಳೆ ಎಂದು ಸುಖಾಸುಮ್ಮನೆ ಆರೋಪಿಸಲು ಈ ಮಾತುಗಳನ್ನು ಹೇಳುತ್ತಿಲ್ಲ. ಇದರ ಜೊತೆಗೆ ಈ ತಾರಾ ದಂಪತಿಗಳು ಯಾವಾಗ ಬಿಜೆಪಿ ಸೇರಿ ಪೂರ್ಣ ರಾಜಕೀಯ ಶುರು ಮಾಡಿಕೊಂಡರೋ ಆ ಅಂಶಗಳೂ ಸಹ ಈ ದಂಪತಿಗಳ ಬಿರುಕು ಹೆಚ್ಚಿಸಿವೆ. ಅದಕ್ಕೆ ಮುಖ್ಯ ಕಾರಣರಾದವರು ಸಚಿವ ಅಶೋಕ್ ಹಾಗೂ


ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಚೋಡ್ ಜೊತೆ ಶ್ರುತಿಯ ಉಪಹಾರ

ಹಿಂದೂ ವೀರ ಸಿ.ಟಿ. ರವಿ. ಶ್ರುತಿ-ಮಹೇಂದರ್ ಬಿಜೆಪಿ ಸೇರಿದ ಮೇಲೆ ವಿಪರೀತ ಸಾಲ ಮಾಡಿಕೊಂಡಿದ್ದರು ಎನ್ನುವುದನ್ನು ಬಿಟ್ಟರೆ ಬೇರೇನೂ ಸಾಧಿಸಿರಲಿಲ್ಲ. ರಾಜಕೀಯದ ಚಟ ಹತ್ತಿ ಮಾಡಿದ್ದ ಸಾಲವನ್ನು ರಾಜಕೀಯದಿಂದಲೇ ದುಡಿದು ತೀರಿಸಲು ಬಯಸಿದ್ದ ಶ್ರುತಿಗೆ ಸಚಿವ ಆರ್. ಅಶೋಕ್ ಬೇಕಾದಷ್ಟು ಹಣ ನೀಡುತ್ತಿದ್ದನೆಂದು ಹೇಳಲಾಗುತ್ತಿದೆ. ಮೊನ್ನೆ ಸಂಸತ್ ಚುನಾವಣೆ ನಡೆಯುತ್ತಿದ್ದಾಗಲೂ ಅತ್ತ ಮಹೇಂದರ್ ಕೊಳ್ಳೇಗಾಲದಲ್ಲಿ ಚುನಾವಣಾ ಪ್ರಚಾರ ಮಾಡುತ್ತಿದ್ದರೆ ಇತ್ತ ಶ್ರುತಿ ಅಶೋಕ್, ಸಿ.ಟಿ. ರವಿ ಜೊತೆ ಪ್ರಚಾರಕ್ಕೆ ಹೋಗುತ್ತಿದ್ದಳು. ಇದನ್ನು ನೋಡಿ ನೋಡಿ ಸಾಕಾದ ಮಹೇಂದರ್ ಜಗಳ ಆಡಿದ್ದು ಉಂಟು. ಕೊನೆಗಿದು ಯಾವ ಮಟ್ಟಕ್ಕೆ ಹೋಯಿತೆಂದರೆ ಮಹೇಂದರ್ ಫೋನ್ ಮಾಡಿದರೆ ಶ್ರುತಿ ತನ್ನ ಮೊಬೈಲ್ ಆನ್ ಮಾಡುತ್ತಲೇ ಇರಲಿಲ್ಲ. ಶ್ರುತಿ ಬಳ್ಳಾರಿ, ಚಿಕ್ಕಮಗಳೂರು, ತುಮಕೂರು, ಮಂಗಳೂರಿನಲ್ಲಿ ಓಡಾಡಿದರೇ ವಿನಃ ಕೊಳ್ಳೇಗಾಲ, ಚಾಮರಾಜನಗರದತ್ತ ತಲೆ ಹಾಕಲಿಲ್ಲ. ಕೊನೆಗೆ ಬಿಜೆಪಿಗಳು ನಟ ತಾರಾಳನ್ನು ಕರೆತಂದು ಅಲ್ಲೆಲ್ಲಾ ರೋಡ್ ಶೋ ಮಾಡಿಸಬೇಕಾಯಿತು.

ಹಾಜರಾದ ಚಕ್ರವರ್ತಿ

ಶ್ರುತಿ ಚುನಾವಣಾ ಪ್ರಚಾರಕ್ಕೆಂದು ಎಲ್ಲೆಲ್ಲಿ ಹೋಗುತ್ತಿದ್ದಳೋ ಅಲ್ಲೆಲ್ಲಾ ಆಕೆಯ ಜೊತೆಗಿದ್ದ ಇನ್ನೊಬ್ಬ ಆಸಾಮಿಯೇ ಈ ಚಂದ್ರಚೂಡ್ ಅಲಿಯಾಸ್ ಚಕ್ರವರ್ತಿ. ಶ್ರುತಿ ಹುಬ್ಬಳ್ಳಿಗೆ ಹೋದಾಗ ಆರ್.ಎನ್. ಶೆಟ್ಟಿಯ ನವೀನ್ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಎರಡು ರೂಂ ಬುಕ್ಕಾಗಿದ್ದವು. ಒಂದು ಶ್ರುತಿಗೆ ಇನ್ನೊಂದು ಚಕ್ರವರ್ತಿಗೆ. ಅದೇ ರೀತಿ ಗುಲ್ಬರ್ಗಾದಲ್ಲೂ ಆದಿತ್ಯ ಲಾಡ್ಜ್‌ನಲ್ಲಿ ಇವರಿಗೆ ಎರಡೂ ರೂಂ ರಿಸರ್ವ್ ಆಗಿದ್ದವು. ಆದರೆ ಬಿಜೆಪಿಯ ಕೆಲವು ಘಟಂಗರು 'ಒಂದು ರೂಂ ಬಾಡಿಗೆ ವೇಸ್ಟ್ ಆಯ್ತು' ಎಂದು ಅಪಪ್ರಚಾರ ಮಾಡಿ ನಾಲಿಗೆ ಚಪಲ ತೀರಿಸಿಕೊಂಡಿದ್ದರು.

ಶ್ರುತಿಯ ಹಾಲಿ ಮೀಡಿಯಾ ಸಲಹೆಗಾರನೆಂದು ಹೇಳಿಕೊಳ್ಳುತ್ತಿರುವ ಚಕ್ರವರ್ತಿಯ ಅಸಲಿ ಜಾತಕ ಏನೆಂದು ಶ್ರುತಿಗೆ ಗೊತ್ತಾದರೆ ಆಕೆ ಬಹುಶಃ ಮತ್ತೆ ಪಶ್ಚಾತ್ತಾಪ ಪಡಬೇಕಾಗಿ ಬರುತ್ತದೆ.

ಒಬ್ಬ ಪ್ರಬುದ್ಧ ಕಲಾವಿದೆಯಾಗಿ, ಸೂಕ್ಷ್ಮತೆ, ಘನತೆಯಿಂದಲೇ ಬದುಕಿರುವ ಶ್ರುತಿಯ ವೈಯಕ್ತಿಕ ಬದುಕು ಈಗ ಕವಲುದಾರಿಯಲ್ಲಿದೆ. ಆಕೆ ಈ ಹಂತದಲ್ಲಿ ವಿವೇಚನೆ ಕಳೆದುಕೊಳ್ಳದೆ ತನ್ನ ಹಾಗೂ ಪುಟ್ಟ ಮಗಳು ಗೌರಿಯ ಬದುಕು-ಭವಿಷ್ಯಗಳ ಬಗ್ಗೆ ಸರಿಯಾಗಿ ಯೋಚಿಸಿ ಮುಂದಿನ ನಿರ್ಧಾರ ಮಾಡಲಿ.

ಮಹೇಂದರ್‌ರಿಂದ ಡೈವೋರ್ಸ್ ಕೇಳಿರುವ ಅರ್ಜಿಯಲ್ಲಿ ಶ್ರುತಿ ಮುಖ್ಯವಾಗಿ ಹೇಳಿರುವ ಕಾರಣ ಹಣಕಾಸಿನದ್ದು.

ಮಹೇಂದರ್‌ಗೆ ಮನೆ-ಮಗಳ ಬಗ್ಗೆ ಜವಾಬ್ದಾರಿ ಇಲ್ಲ, ಆರ್ಥಿಕ ನೆರವು ನೀಡುತ್ತಿಲ್ಲ... ಇದೇ ಮುಂತಾದ ಕಾರಣಗಳವು.

ಒಂದು ಮಟ್ಟಿಗೆ ಇದನ್ನೆಲ್ಲಾ ನಿಜ ಅಂತಲೇ ಒಪ್ಪಿಕೊಂಡರೂ ಈಗ ಶ್ರುತಿಯನ್ನು ಮದುವೆಯಾಗ್ತೀನಿ ಅಂತ ಕುಣಿಯುತ್ತಿರುವ ಚಕ್ರವರ್ತಿ ತಾನೇ ಏನು?

ಆತನೂ ಪಾಪರ್ ಗಿರಾಕಿಯೆ! ಸಾಲದು ಅಂತಾ ವಿಪರೀತ ಕುಡಿತದ ಚಟವೂ ಇದೆ. ●

ಆಗ ಸೂರ್ಯಾಚಾರಿ ಈಗ ಚಂದ್ರಾಚಾರಿ



"ನಾವೂ ಆಚಾರ‍್ರು, ಚಕ್ರವರ್ತಿನೂ- ಆಚಾರ‍್ರು.."

ಇದು ಶ್ರುತಿಯ ವಿಚಿತ್ರ ಲಾಜಿಕ್. ಇದರರ್ಥ ನಾಳೆ ತಾನು ...ವರ್ತಿಯನ್ನು ಮದುವೆ ಆಗುವುದಾದರೆ ಜಾತಿ ಸಮಸ್ಯೆ ಬರುವುದಿಲ್ಲ ...ದಿರಬಹುದು.

ಶ್ರುತಿಯಂಥ ಓರ್ವ ಪ್ರಬುದ್ಧ ನಟಿ, ಸೆನ್ಸಿಟೀವ್ ಮಹಿಳೆಯೇ ...ಗೆ ಮದುವೆ ಎಂಬುದನ್ನು 'ಆಚಾರ್' ಜಾತಿ ಮಟ್ಟಕ್ಕೆ ...ಳಿತಗೊಳಿಸಿ ನೋಡುವುದೇ ಆದರೆ ಅದಕ್ಕಿಂತ ಹಾಸ್ಯಾಸ್ಪದ ...ಚಾರ ಇನ್ನೊಂದಿರಲಾರದು. ಅದರ ಬದಲಾಗಿ ಈ ಶ್ರುತಿ ...ದ್ರಾಚಾರಿ ಎಂತವನು, ಆತನ ಹಿನ್ನೆಲೆ, ವ್ಯಕ್ತಿತ್ವ ಎಂತಹದೆಂದು ...ಡಬೇಕಲ್ಲವೇ?


...ಹಾಗೆ ನೋಡಿದರೆ ಶ್ರುತಿಗೆ ಈತನ ಬಗ್ಗೆ ಕೆಲವು ವಿಚಾರ ...ತ್ತಿವೆ. ಹೊಳೆನರಸೀಪುರದಲ್ಲಿ ಕೆಲಕಾಲ ಇವರಿಬ್ಬರೂ ಒಟ್ಟಿಗೆ ...ಕಲಿತಿದ್ದಾರೆ. ಗುಬ್ಬಿ ವೀರಣ್ಣನವರ ಮರಿಮೊಮ್ಮಗಳಾದ ಶ್ರುತಿ ...ಟಕ ಕಂಪನಿಗಳ ಜೊತೆಯಲ್ಲೇ ಹತ್ತಾರು ಊರುಕೇರಿ ಸುತ್ತಿದ್ದಾಳೆ. ...ದೆ ಆ ನಂತರ ಈ ಚಕ್ರವರ್ತಿ ಎಲ್ಲಿದ್ದ ಏನು ಮಾಡಿದನೆಂಬುದು ...ಗೆ ತಿಳಿದಂತಿಲ್ಲ.

ಈ ಚಕ್ರವರ್ತಿ ಕೆಲಕಾಲ ಚಂದ್ರಚೂಡನೆಂಬ ಹೆಸರಿನಲ್ಲಿ ...ರ್ನಲಿಸಂ ಮಾಡುತ್ತಿದ್ದ, ಆಗ ಹಫ್ತಾ ವಸೂಲಿಯೇ ಆತನ ನಿತ್ಯ ...ಕಾಯಕವಾಗಿತ್ತು, ಒಮ್ಮೆ ಹಾಸನದಲ್ಲಿದ್ದಾಗ ಲೋಕಲ್ ಪೇಪರ್ ...ಡುತ್ತೇನೆಂದು ಜನ... ಲಕ್ಷಾಂತರ ರೂಪಾಯಿ ಎತ್ತಿ ಮಾಯವಾಗಿದ್ದ. ಮಗಳಿಗೆ ಹುಷಾರಿಲ್ಲವೆಂದು ಲೇಖಕಿ ಬಾನುರಿಂದ ಹಣ ಪಡೆದು ಸಿನಿಮಾಗೆ ಹೋಗಿದ್ದ ಭೂಪನೀತ. ನಂತರ ಬೆಂಗಳೂರಿಗೆ ಬಂದು ಸಿನಿಮಾ ಮಾಡಲು ಹೊರಟ. ಆಗ 'ಮೆಂಟಲ್ ಮಂಜ' ನಿರ್ಮಾಪಕ ಚಳವಳಿ ನಾರಾಯಣಗೂ ಇವನು ಚಳ್ಳೇಹಣ್ಣು ತಿನ್ನಿಸಿದ್ದ. ಅದು ಹೇಗೆಂದರೆ ಪ್ರಮುಖ ದಿನಪತ್ರಿಕೆಗಳ ಸಿನಿಮಾ ವರದಿಗಾರರ ಗೆಳೆತನ ಬೆಳೆಸಿ ಅವರ ಆಫೀಸ್‌ಗೆ ಆಯಾ ವಾರದ ಸಿನಿಮಾ ಪುರವಣಿಯಲ್ಲಿ ಯಾರ‍್ಯಾರ ಫೋಟೋ ಹಾಕುತ್ತಿದ್ದಾರೆಂಬುದನ್ನು ನೋಡಿಕೊಂಡು ಬಂದು, "ಸಾರ್, ನಾಳೆ ಪೇಪರ್ ನೋಡಿ, ನಾನೇ ನಿಮ್ಮ ಸಿನಿಮಾದ ಫೋಟೋವನ್ನು ಈ ಪುಟದಲ್ಲಿ, ವರದಿಯನ್ನು ಆ ಪುಟದಲ್ಲಿ ಹಾಕಿಸಿ ಬಂದಿದ್ದೀನಿ" ಎಂದು ರೈಲು ಬಿಡುತ್ತಿದ್ದ. ಕೊನೆಗೆ ನಿರ್ಮಾಪಕ ಆನೇಕಲ್ ಬಾಲರಾಜ್ ಸ್ನೇಹ ಸಂಪಾದಿಸಿ ಅವರ ಮಗನನ್ನೇ ಹೀರೋ ಆಗಿಸಿ 'ಜನ್ಮ' ಎಂಬ ಸಿನಿಮಾ ಶುರು ಮಾಡಿದ. ಆ ಚಿತ್ರಕ್ಕಾಗಿ ಭ್ರೂಣವೊಂದರ ಕೈಗೆ ತ್ರಿಶೂಲವಿಟ್ಟು ಚಕ್ರವರ್ತಿ ನೀಡಿದ ಜಾಹೀರಾತು ಎಲ್ಲರನ್ನೂ ಬೆಚ್ಚಿಬೀಳಿಸಿತ್ತು. ಆ ಸಿನಿಮಾ ಇನ್ನೇನು ಪ್ರೇಕ್ಷಕರ ಮೇಲೆ ದಾಳಿ ಮಾಡಲಿದೆ. ಇದಲ್ಲದೇ 'ಜೈರಾಂ' ಎಂಬ ಹೊಸ ಸಿನಿಮಾ ನಿರ್ದೇಶಿಸುತ್ತಿದ್ದೇನೆ ಎಂತಲೂ ಚಕ್ರವರ್ತಿ ಹೇಳಿ ಕೊಳ್ಳುತ್ತಿದ್ದಾನೆ.

ಪತ್ರಕರ್ತನಾಗಿದ್ದಾಗ ಈತನಿಗೆ ನೆಟ್ಟಗೆ ಒಂದು ವಾಕ್ಯ ಬರೆಯಲು ಬರುತ್ತಿರಲಿಲ್ಲ, ಈಗ ಸಿನಿಮಾ ನಿರ್ದೇಶಕನಾಗಿ ಏನು ಕಡಿದುಕಟ್ಟೆ ಹಾಕುತ್ತಾನೋ ನೋಡಬೇಕು.

ಅಂದು ಮಹೇಂದರ್‌ರನ್ನು ಶ್ರುತಿ ಮದುವೆಯಾಗುವ ಸಮಯದಲ್ಲೇ ಸೂರ್ಯಾಚಾರಿ ಎಂಬ ಅನಾಮಿಕನೊಬ್ಬ ತನ್ನೊಂದಿಗೆ ಶ್ರುತಿಗೆ ಈಗಾಗಲೇ ಮದುವೆಯಾಗಿದೆ ಅಂತಾ ಕೋರ್ಟಿಗೆ ಹೋಗಿದ್ದ. ಅದಕ್ಕೆ ಸಾಕ್ಷಿ ಎಂಬಂತೆ 'ಮುದ್ದಿನ ಮಾವ' ಸಿನಿಮಾದಲ್ಲಿನ ಶ್ರುತಿ ಮತ್ತು ಶಶಿಕುಮಾರ್ ಮದುವೆಯ ಸ್ಟಿಲ್ ತೆಗೆದುಕೊಂಡು ಶಶಿಕುಮಾರ್ ಮುಖದ ಜಾಗದಲ್ಲಿ ತನ್ನ ಫೋಟೋ ಅಂಟಿಸಿದ್ದ. ಅದು ಹೇಗೋ ಕಷ್ಟಪಟ್ಟು ಅವನಿಂದ ಬಿಡಿಸಿಕೊಂಡಿದ್ದ ಶ್ರುತಿ ಈಗ ತಾನಾಗೇ ಈ ಚಂದ್ರಾಚಾರಿ ಅಲಿಯಾಸ್ ಚಕ್ರವರ್ತಿ ಉರುಫ್ ಚಂದ್ರಚೂಡನ ಬೋನಿಗೆ ಪ್ರವೇಶಿಸಲು ರೆಡಿಯಾಗುತ್ತಿರುವಂತಿದೆ.

ಹೀಗಾಗಿ ಶ್ರುತಿಗೆ ಒಳ್ಳೆದಾಗಲಿ ಅಂತ ಹಾರೈಸುವುದು ಕಷ್ಟ ಕಷ್ಟ. ಮಹೇಂದರ್‌ಗೆ ಮೊದಲು ಬಿಜೆಪಿಯ ನಾಯಕರೊಬ್ಬರ ಬಗ್ಗೆ ಅನುಮಾನಗಳಿತ್ತಂತೆ. ಕೊನೆಗೆ ನೋಡಿದರೆ ಇವರ ಬದುಕಿನಲ್ಲಿ ಫಿಟ್ಟಿಂಗ್ ಇಟ್ಟವನು ಈ ಬೋಡುಬುದ್ಧಿಯ ಚಕ್ರವರ್ತಿ ಎಂಬುದು ಈಗ ಗೊತ್ತಾಗಿದೆ.



ಗಿರಿ-ಮುನ್ನಾ ಈಗೆಲ್ಲಿ?

ಗಿರಿ ಅಂದರೆ ಶ್ರುತಿ.

ಮುನ್ನಾ ಅಂದರೆ ಮಹೇಂದರ್.

ಇದು ಮದುವೆಗೂ ಮೊದಲು ಲವ್ ಲೆಟರ್‌ಗಳಲ್ಲಿ ಮೊಬೈಲ್ ಫೋನ್‌ನಲ್ಲಿ ಮಾತನಾಡಲು ಪರಸ್ಪರರು ಇಟ್ಟುಕೊಂಡಿದ್ದ ಪ್ರೀತಿಯ ಅಡ್ಡ ಹೆಸರುಗಳು.

ಶ್ರುತಿ - ಮಹೇಂದರ್ ನಡುವೆ ಪ್ರೀತಿ ಅರಳಿಕೊಳ್ಳುವಷ್ಟರಲ್ಲೇ ಶ್ರುತಿ ಹೀರೋಯಿನ್ ಆಗಿ ಭಾರೀ ಪಾಪ್ಯುಲರ್ ಆಗಿದ್ದಳು. ಮಹೇಂದರ್‌ಗೆ ಹೆಸರಿತ್ತಾದರೂ ಹಣ-ಅಂತಸ್ತು ಇರಲಿಲ್ಲ. ಜೊತೆಗೆ ಜಾತಿಯಲ್ಲಿ ದಲಿತನೆಂಬ ಅಸಡ್ಡೆಯೂ ಶ್ರುತಿಯ ಅಪ್ಪ ಕೃಷ್ಣನಿಗಿತ್ತು. ಆದರೆ ಅಂತಹ ಸಂದರ್ಭ ಬಂದಾಗಲೆಲ್ಲಾ ಮಹೇಂದರ್ ಸ್ವಾಭಿಮಾನಕ್ಕೆ ಆತ್ಮಗೌರವಕ್ಕೆ ಧಕ್ಕೆ ಬರದಂತೆ ನೋಡಿಕೊಂಡಿದ್ದು ಇದೇ ಶ್ರುತಿ.

ಅವರ ಮದುವೆ ನಡೆಯಲು ಅಡೆತಡೆ ಎದುರಾದಾಗ ಕೊಲ್ಕತ್ತಾದ ಮದರ್ ತೆರೇಸಾ ಆಶ್ರಮ ಸೇರಲು ಹೊರಟಿದ್ದಳು ಶ್ರುತಿ. ಕೊನೆಗೆ ಜಿಗಣಿ ಹತ್ತಿರ ಒಂದು ಆಶ್ರಮದಲ್ಲಿ ಕೆಲದಿನ ಇದ್ದಳು ಕೂಡ. ಆಗ ಶ್ರುತಿಯನ್ನು ಆಶ್ರಮದಿಂದ ಬಿಡಿಸಿ ಕರೆತಂದು ಮಹೇಂದರ್ ಮದುವೆಯಾದರು.

ಆದರೆ ಈಗ ಏನಾಗಿ ಹೋಗಿದೆ ನೋಡಿ.

ಒಮ್ಮೆ ಬಿಜೆಪಿ ಸೇರಿ ನಾಲ್ಕಾರು ಕಡೆ ಪ್ರಚಾರ ಭಾಷಣ ಮಾಡಿ ಬಂದ ಮೇಲೆ ತನ್ನನ್ನು ನೋಡಲು ಸಾವಿರಾರು ಜನ ಸೇರಿದ್ದು ನೋಡಿ, ಹಲವು ಸಭೆಗಳಲ್ಲಿ ಮುಖ್ಯಮಂತ್ರಿಯ ಪಕ್ಕದಲ್ಲೇ ತನಗೆ ಕುರ್ಚಿ ಹಾಕಿದ್ದು ಗಮನಿಸಿ ಥ್ರಿಲ್ ಆದ ಶ್ರುತಿಗೆ ತನ್ನೆದುರು ಮಹೇಂದರ್ ಕಳಪೆ ಅನ್ನಿಸಿಬಿಟ್ಟಿತು. ಈತ ತನಗೆ ಸರಿಯಾದ ಜೋಡಿ ಅಲ್ಲವೆಂಬ ಅಸಹನೆ ಶುರುವಾಯಿತು. ಹಾಗಾಗಿ ಹಳೆಯ 'ಮುನ್ನಾ'ನನ್ನು ಈಗ ಮನ್ನಾ ಮಾಡಿ ಆಚೆಗಟ್ಟುತ್ತಿದ್ದಾಳೆ.

ಮಹೇಂದರ್ ಹಣಕಾಸಿನಲ್ಲಿ ಬಡವನಿರಬಹುದು. ಆದರೆ ಪ್ರತಿಭೆ-ವ್ಯಕ್ತಿತ್ವದಲ್ಲಿ ಆತ ಎಂದೂ ಬಡವನಾಗಿರಲಿಲ್ಲ. ಮುಗ್ಧತೆ ಆತನ ಇನ್ನೊಂದು ಗುಣವಾಗಿತ್ತು.

ಇಷ್ಟಕ್ಕೂ ಇವರಿಗೆ ಹಣದ ತೊಂದರೆ ಇದ್ದಿದ್ದರೆ ಪರಿಹರಿಸಿಕೊಳ್ಳಲು ಹತ್ತಾರು ದಾರಿಗಳಿದ್ದವು.

ಇಬ್ಬರೂ ಪ್ರಖ್ಯಾತರೇ ಆದ್ದರಿಂದ ಯಾವುದಾದರೂ ಟಿವಿ ಸೀರಿಯಲ್-ರಿಯಾಲಿಟಿ ಶೋಗಳಿಂದ ಹಣ ಮಾಡಬಹುದಿತ್ತು. ಶ್ರುತಿ ಈಗಿನ ತನ್ನ ಬಿಜೆಪಿ ಲಿಂಕ್ ಬಳಸಿಯೇ ಒಬ್ಬ ಸಿನಿಮಾ ನಿರ್ಮಾಪಕನನ್ನು ಹುಡುಕಿ ಮಹೇಂದರ್‌ಗೆ ಛಾನ್ಸ್ ಕೊಡಿಸಬಹುದಿತ್ತು.

ಶ್ರುತಿ ಏನೂ ಅಲ್ಲದಿದ್ದಾಗ ಆಕೆಯನ್ನು ಸ್ಟಾರ್ ಮಾಡಿದ್ದೇ ಮಹೇಂದರ್. ಅದೇ ಮಹೇಂದರ್ ಈಗ ಕಷ್ಟದಲ್ಲಿದ್ದಾಗ ಜೊತೆಗೆ ನಿಲ್ಲದೆ ಆಚೆ ತಳ್ಳುತ್ತಿರುವುದೂ ಅದೇ ಶ್ರುತಿಯೇ!

ಈ ವಿಪರ್ಯಾಸಕ್ಕೆ ಏನನ್ನೋಣ?

ಕಣ್ಣೀರ ಕೋಡಿ ಹರಿಸಿದ ಜೋಡಿ



1998ರಲ್ಲಿ ಶ್ರುತಿ-ಮಹೇಂದರ್ ತುಂಬಾ ಸೀಕ್ರೆಟಾಗಿ ಮದುವೆಯಾದಾಗ ಆ ಸುದ್ದಿಯನ್ನು ಮೊದಲು ಬಹಿರಂಗಗೊಳಿಸಿದ್ದು ನಮ್ಮ ಪತ್ರಿಕೆಯೇ. ಅಂದು ಮದುವೆಯಾದ ನಂತರ ಶ್ರುತಿ ತಮ್ಮ ಪ್ರೇಮವಿವಾಹದ ಬಗ್ಗೆ ಮಾತನಾಡುತ್ತಾ "ನನಗೆ ದೇವರು ಜೀವನದಲ್ಲಿ ಸುಖ, ಸಂಪತ್ತು, ಸೌಲಭ್ಯಗಳನ್ನೆಲ್ಲಾ ನೀಡಿದನು. ನನಗೆ ಕೊರತೆ ಇದ್ದದ್ದು ಇದೊಂದು ಮಾತ್ರ. ಇವರನ್ನು ಮದುವೆಯಾಗಲು ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಇಂತಹ ಕಷ್ಟ ಯಾರಿಗೂ ಬರಬಾರದು. ಅಷ್ಟು ಕಷ್ಟ ಪಟ್ಟಿದ್ದಕ್ಕೆ ನಾನಿಂದು ಸಂತೃಪ್ತಳಾಗಿದ್ದೇನೆ" ಎಂದು ಮಹೇಂದರ್ ಕೈ ಹಿಡಿದುಕೊಂಡು ಭಾವುಕಳಾಗಿ ನುಡಿದಿದ್ದರು.

1998ರಿಂದ ಇತ್ತೀಚಿನತನಕ ಶ್ರುತಿ ಮತ್ತು ಮಹೇಂದರ್ ಅದೆಂತಹ 'ಸುಖೀದಾಂಪತ್ಯ' ನಡೆಸಿದ್ದರೆಂದರೆ, ತಾರಾದಂಪತಿಗಳೆಂದರೆ ಹೀಗಿರಬೇಕು ಎಂದು ಎಲ್ಲರೂ ಅಸೂಯೆ ಪಡುವಷ್ಟು ಇವರಿಬ್ಬರೂ ಒಬ್ಬರಿಗೊಬ್ಬರು ಅಂಟಿಕೊಂಡೇ ಇದ್ದರು. ಮೊನ್ನೆ ಮೊನ್ನೆ ಅಮೃತ ಮಹೋತ್ಸವ ಸಮಾರಂಭಕ್ಕೆ ಮುನ್ನವೂ ರವಿಚಂದ್ರನ್ ನೇತೃತ್ವದಲ್ಲಿ ನಡೆದ ನೃತ್ಯದ ತಾಲೀಮು ಸಂದರ್ಭದಲ್ಲೂ ಶ್ರುತಿ-ಮಹೇಂದರ್ ಹೊಸತಾಗಿ ಮದುವೆಯಾದವರಂತೆ ಚಿಲ್ಲುಚೆಲ್ಲಾಗಿ ಆಡುತ್ತಿದ್ದರು. ಆದರೆ ಈಗ ಗೊತ್ತಾಗಿರುವಂತೆ ಇವರಿಬ್ಬರು ಅಂದು ಅದೆಷ್ಟು ಗುಟ್ಟಾಗಿ ಮದುವೆಯಾಗಿದ್ದರೋ ಅವರ ದಾಂಪತ್ಯ ಜೀವನವೂ ಇಂದು ಅಷ್ಟೇ ಗುಟ್ಟಾಗಿ ಮುರಿದು ಬಿದ್ದಿದೆ.

ಮೊನ್ನೆ ಫೋನಿಗೆ ಸಿಕ್ಕ ಶ್ರುತಿ ಹೇಳಿದ್ದು ಇಷ್ಟು: "ನಾನು ಒಂದು ಮಾತನ್ನು ಹೇಳಲು ಇಷ್ಟ ಪಡುತ್ತೇನೆ. ಇದು ನಾನು ದಿಢೀರನೆ ಕೈಗೊಂಡ ನಿರ್ಣಯವಲ್ಲ. ಕಳೆದ ಎಂಟು ವರ್ಷಗಳಿಂದ ಈ ಸಂಸಾರವನ್ನು ಸರಿದೂಗಿಸಲು ಪ್ರಯತ್ನಿಸುತ್ತಿದ್ದೆ. ನಿಜ ಹೇಳಬೇಕೆಂದರೆ ನಮ್ಮ ಮದುವೆಯ ಪ್ರತಿ ವಾರ್ಷಿಕೋತ್ಸವದ ಸಂದರ್ಭದಲ್ಲಿ ನಾವು ಬೇರೆ ಬೇರೆಯಾಗೋಣವೇ ಎಂದು ಎಂಟು ವರ್ಷಗಳಿಂದಲೂ ಅವರನ್ನು ಕೇಳುತ್ತಲೇ ಬಂದೆ. ಈಗ ಕೊನೆಗೆ ಅನಿವಾರ್ಯವಾಗಿ ನಾನು ಈ ನಿರ್ಣಯವನ್ನು ಕೈಗೊಂಡಿದ್ದೇನೆ. ಆದರೆ ಯಾವ ಕಾರಣಕ್ಕಾಗಿ ಎಂದು ಹೇಳಲು ಇಚ್ಛಿಪಡುವುದಿಲ್ಲ. ಆ ಕಾರಣಕ್ಕೆ ಪ್ರಚಾರ ಸಿಗುವುದು ನನಗೆ ಇಷ್ಟವಿಲ್ಲ. ಒಬ್ಬ ಹೆಣ್ಣುಮಗಳು ಇಂತಹ ಒಂದು ತೀರ್ಮಾನಕ್ಕೆ ಬರಬೇಕಾದರೆ ಆಕೆ ಜೀವನದಲ್ಲಿ ಅದೆಷ್ಟು ಕಷ್ಟ ಅನುಭವಿಸಿರಬಹುದು ಎಂದು ನೀವೇ ಊಹಿಸಿ. ಆದ್ದರಿಂದ ನನ್ನ ಬಗ್ಗೆ ಕನಿಕರವನ್ನು ತೋರಿಸಿ."



ಸಿನಿಮಾಗಳಲ್ಲಿ ಕಣ್ಣೀರ ಕೋಡಿಯನ್ನು ಹರಿಸುವ ಪಾತ್ರಗಳಲ್ಲಿ ಮಿಂಚಿ ಮೆರೆದ ಈ ಕಣ್ಣೀರ ರಾಣಿ ಹೀಗೆ ಹೇಳಿದಾಗ ಆಕೆಯ ದನಿಯಲ್ಲಿ ಯಾವ ಅಳುಕೂ ಇರಲಿಲ್ಲ. ಬದಲಾಗಿ ಒಂದು ರೀತಿಯ ದಿಟ್ಟ ನಿರ್ಣಯವಿತ್ತು.

ವಿವಾಹ ವಿಚ್ಛೇದನವೆಂಬುದು ಆಕೆಯ ವೈಯಕ್ತಿಕ ವಿಷಯವಾಗಿರುವುದರಿಂದ ಅದರ ಬಗ್ಗೆ ಹೆಚ್ಚು ವಿಶ್ಲೇಷಿಸುವುದು ಸೂಕ್ತವಲ್ಲ. ಆದರೆ 'ಆದರ್ಶ ದಂಪತಿ'ಗಳ ತರಹ ಇದ್ದ ಶ್ರುತಿ-ಮಹೇಂದರ್ ಸಂಬಂಧ ಹೀಗೆ ದಿಢೀರನೆ ಸಿನಿಮಾ ಮಾದರಿಯಲ್ಲಿ ಇಂತಹ ಕ್ಲೈಮ್ಯಾಕ್ಸ್ ತಲುಪುತ್ತದೆ ಎಂದು ಯಾರೂ ಊಹಿಸಿರಲಿಲ್ಲ.

ಅಂದಹಾಗೆ, ಈ ವಿಚ್ಛೇದನೆ ಬಗ್ಗೆ ಮಾಧ್ಯಮದವರೊಂದಿಗೆ ಶ್ರುತಿ ಮಾತನಾಡಿದರೂ ಮಹೇಂದರ್ ಮಾತ್ರ ತಮ್ಮ ಮೊಬೈಲ್ ಆಫ್ ಮಾಡಿ ಭೂಗತರಾಗಿದ್ದಾರೆ. ಇದೆಲ್ಲದರ ಬಗ್ಗೆ ಮಹೇಂದರ್ ಏನು ಹೇಳುತ್ತಾರೆ? ಅವರ ಅಭಿಪ್ರಾಯವೇನು? ಮಹೇಂದರ್ ಸದ್ಯ ಎಲ್ಲಿದ್ದಾರೆ? ಅವರು ಮುಂದೇನು ಮಾಡುತ್ತಾರೆ? ಎಂಬುದು ಯಾರಿಗೂ ಗೊತ್ತಿಲ್ಲ.

ಆದರೆ ಅಂದು ಶ್ರುತಿಯನ್ನು ಮದುವೆಯಾದಾಗ ಮಹೇಂದರ್ ಅತ್ಯಂತ ಸಂತೋಷದಿಂದಿದ್ದರು. "ಪರಸ್ಪರ ಮದುವೆಯಾಗಲು ನಾವು ಪಟ್ಟ ಪಾಡನ್ನು ವಿಸ್ತಾರವಾಗಿ ಬರೆದರೆ ಒಂದು ಸಾವಿರ ಪುಟಗಳಷ್ಟಾಗಬಹುದು. ಈ ಕಾನೂನಿನ ತೊಡಕು, ಹಿರಿಯರ ವಿರೋಧ, ಉದ್ಯಮದವರ ಕಿರುಕುಳ, ಸೆಟ್‌ನಲ್ಲಿ ಹುಡುಗರ ತರ್ಲೆಗಳು, ಪೇಪರ್‌ನವರ ವ್ಯಂಗ್ಯದ ಮಾತುಗಳು... ಒಂದೊಂದು ಘಟನೆಯೂ ನಮ್ಮ ಬದುಕನ್ನು ಘಾಸಿಗೊಳಿಸಿವೆ. ಇದನ್ನೇ ಆಧಾರವಾಗಿಟ್ಟುಕೊಂಡು ಚಿತ್ರ ಮಾಡುವ ಯೋಚನೆಯೂ ನನಗಿದೆ. ಇಮೇಜ್ ಇರುವ ಪ್ರೇಮಿಗಳಿಗೆ ಮದುವೆ ಆಗಲು ಎಷ್ಟು ಕಷ್ಟ ಎಂಬುದೇ ಆ ಸಿನಿಮಾದ ಕಥೆ" ಎಂದು ಮಹೇಂದರ್ ಜಗತ್ತನ್ನೇ ಗೆದ್ದ ಉತ್ಸಾಹದಲ್ಲಿ ಮಾತನಾಡಿದ್ದರು.

ಹಾಗೆ ನೋಡಿದರೆ, ಈ ತಾರಾ ದಂಪತಿ ಬೇರೆಯವರಿಗಿಂತ ವಿಭಿನ್ನವಾಗಿದ್ದು ನುಡಿದಂತೆ ನಡೆದಿದ್ದರು. ತಮ್ಮಿಬ್ಬರ ಪ್ರೇಮ ಕಥೆಗಿಷ್ಟು ಮಸಾಲೆ ಸೇರಿಸಿ 'ಗಟ್ಟಿಮೇಳ' ಎಂಬ ಚಿತ್ರವನ್ನು ನಿರ್ಮಿಸಿದ್ದರು. ಆ ಚಿತ್ರದಲ್ಲಿ ನಿರ್ದೇಶಕ ಮಹೇಂದರ್ ನಾಯಕನಾಗಿ ತನ್ನ ಪತ್ನಿ ಶ್ರುತಿಯ ಜೊತೆ ನಟಿಸಿದ್ದರು. ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ಮಕಾಡೆ ಮಲಗಿದ್ದರೂ ತಮ್ಮ ಅಮರ ಪ್ರೇಮವನ್ನು ಲೋಕಕ್ಕೆ ತಿಳಿಸಿದ ತೃಪ್ತಿ ಅವರಿಬ್ಬರಿಗಿತ್ತು. ಅಷ್ಟೇ ಅಲ್ಲ, ಮದುವೆಯ ನಂತರವೂ ತಮ್ಮ ನಿರ್ದೇಶನದ ಚಿತ್ರಗಳಲ್ಲಿ ಶ್ರುತಿಗೆ ಪ್ರಮುಖ ಪಾತ್ರವೊಂದು ಇರುವಂತೆ ಮಹೇಂದರ್ ನೋಡಿಕೊಳ್ಳುತ್ತಿದ್ದರು. ಮೊನ್ನೆ ಮೊನ್ನೆ ಬಂದ ಮಹೇಂದರ್ ನಿರ್ದೇಶನದ 'ಅಕ್ಕ-ತಂಗಿ' ಚಿತ್ರ ಇದಕ್ಕೊಂದು ಉದಾಹರಣೆ. ಈ ಚಿತ್ರದ ಕತೆಯನ್ನು ತನ್ನ ತಾರಾ ಪತ್ನಿ ಶ್ರುತಿಯ ಇಮೇಜನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಹೇಂದರ್ ಹೆಣೆದಿದ್ದಂತಿತ್ತು. ಹೀಗೆ ಶ್ರುತಿ-ಮಹೇಂದರ್ ರಿಯಲ್ ಮತ್ತು ರೀಲ್ ಲೈಫ್‌ನಲ್ಲಿ ಎಲ್ಲರೂ ಅಸೂಯೆ ಪಡುವಷ್ಟು ಅನ್ಯೋನ್ಯವಾಗಿದ್ದರು.

ಇವರಿಬ್ಬರ ಜೀವನದ ಒಂದು ಪುಟ್ಟ ಫ್ಲಾಷ್ ಬ್ಯಾಕ್ ಹೀಗಿದೆ.

ಶ್ರುತಿ ಮತ್ತು ಮಹೇಂದರ್ ಬಾಲ್ಯದಿಂದಲೂ ಸ್ನೇಹಿತರು. ಹೆಗ್ಗಡದೇವನ ಕೋಟೆಯಲ್ಲಿ ಶ್ರುತಿಯ ತಂದೆ ತಾಯಿ ನಾಟಕವಾಡುತ್ತಿದ್ದಾಗ ಮಹೇಂದರ್ ಆಕೆಯನ್ನು ಮೊದಲ ಬಾರಿ ಭೇಟಿಯಾಗಿದ್ದರು. ಅಂದು ಆಕೆ ಕ್ಯಾಶ್ ಕೌಂಟರ್‌ನಲ್ಲಿ ಕುಳಿತು ಟಿಕೆಟ್ ನೀಡುತ್ತಿದ್ದರು. ಅನಂತರ ಶ್ರುತಿ ಕ್ಯಾಶ್‌ಕೌಂಟರ್‌ನಿಂದ ರಂಗದಮೇಲೆ ನಾಟಕ ಮಾಡಲು ಬಡ್ತಿ ಪಡೆದಳು. ಶ್ರುತಿ ಸಿನಿಮಾ ರಂಗಕ್ಕೆ ಕಾಲಿಡುವ ಹೊತ್ತಿಗೆ ಮಹೇಂದರ್ ಕೂಡಾ ಗಾಂಧಿನಗರಕ್ಕೆ ಬಂದಿದ್ದರು. ಶ್ರುತಿ ನಾಯಕಿ-ಮಹೇಂದರ್ ನಿರ್ದೇಶಕ. ಈ ಜೋಡಿ ಗಾಂಧಿನಗರದಲ್ಲಿ ಸಿನಿಮಾ ಮಾಡಿ ಗೆದ್ದಿತು. ಮುಖ್ಯವಾಗಿ ಕಣ್ಣೀರ ಕೋಡಿಯನ್ನೇ ಹರಿಸುವ ಚಿತ್ರಗಳನ್ನೇ ಮಾಡುತ್ತಾ ಮಹೇಂದರ್‌ಗೆ ಸ್ಟಾರ್ ವ್ಯಾಲ್ಯೂ ಬಂತು. ಶ್ರುತಿಗಂತೂ ಅಳುಮುಂಜಿ ಎಂಬ ಬಿರುದು ಸಿಕ್ಕಿತ್ತು. ಕೊನೆಗೆ ಇವರಿಬ್ಬರೂ ಕದ್ದು ಮುಚ್ಚಿ ಓಡಿಹೋಗಿ ಒರಿಸ್ಸಾದ ಪುರಿ ಜಗನ್ನಾಥ ದೇವಾಲಯದಲ್ಲಿ ಸತಿ-ಪತಿಗಳಾಗಿದ್ದರು. ಆದರೆ ಬೇರೆ ಕಾರಣಗಳಿಗೆ ಆರು ತಿಂಗಳ ನಂತರ ತಮ್ಮ ಮದುವೆ ಸುದ್ದಿಯನ್ನು 'ವೀರಪ್ಪನಾಯ್ಕ' ಚಿತ್ರೀಕರಣದ ಸಂದರ್ಭದಲ್ಲಿ ಬಹಿರಂಗಗೊಳಿಸಿದ್ದರು. 2002ರಲ್ಲಿ ಇವರಿಬ್ಬರ ಪ್ರೇಮದ ಕುರುಹಾಗಿ ಗೌರಿ ಎಂಬ ಪುಟ್ಟ ಮಗುವಿನ ಎಂಟ್ರಿಯಾಯಿತು. ಈಗ ಗೌರಿ 7 ವರ್ಷದ ಪುಟ್ಟ ಬಾಲೆ.

ಕಳೆದ ಎಂಟು ವರ್ಷಗಳಿಂದ ಶ್ರುತಿ ಯಾವ ತರಹದ ಮಾನಸಿಕ ಕಿರುಕುಳ ಅನುಭವಿಸಿದ್ದಾರೆ? ಅವರು ಮಾನಸಿಕವಾಗಿ ಅಷ್ಟು ಘಾಸಿಗೊಂಡಿದ್ದರೆ ಕೊಳ್ಳೇಗಾಲ ಚುನಾವಣೆಯ ಸಂದರ್ಭದಲ್ಲಿ ತನ್ನ ಪತಿ ಪರ ಅಷ್ಟೊಂದು ಸಕ್ರಿಯವಾಗಿ ಪ್ರಚಾರ ಮಾಡಲು ಆಕೆಗೆ ಹೇಗೆ ಸಾಧ್ಯವಾಯಿತು? ನಿಜವಾಗಿಯೂ ಇವರಿಬ್ಬರನ್ನು ಆರ್ಥಿಕ ಸಮಸ್ಯೆ ಕಾಡುತ್ತಿದೆಯೇ? ಸಿನಿಮಾದಲ್ಲಿ ಇವರಿಬ್ಬರಿಗೂ ಈಗ ಮಾರುಕಟ್ಟೆ ಇಲ್ಲದಿರುವುದರಿಂದ ಭ್ರಮನಿರಸನವಾಗಿದೆಯೇ? ಅಥವಾ ಎಲ್ಲಾ ಕಾರಣಗಳನ್ನು ಹೊರತುಪಡಿಸಿ ಇನ್ನೇನಾದರೂ ಅಗೋಚರವಾದ ಕಾರಣವಿದೆಯೇ? ಎಂಬ ಪ್ರಶ್ನೆಗಳಿಗೆಲ್ಲಾ ಕಾಲವೇ ಉತ್ತರಿಸಬೇಕಾಗಿದೆ.

ಅಂತೂ ಕಣ್ಣೀರನ್ನು ಹರಿಸುವ ಚಿತ್ರಗಳ ಮುಖಾಂತರ ಪಾಪ್ಯುಲರ್ ಆದ ಈ ಜೋಡಿಯ ನಿಜಜೀವನ ಈಗ ಅದೇ ಕಣ್ಣೀರಿನಲ್ಲಿ ಮುಳುಗಿರುವುದು ಕುತೂಹಲಕರವಾಗಿದೆ.

● ಸದಾಶಿವ ಶೆಣೈ



▸▸▸10

ಅಪ್ಪಮಗಳ ವಿಕೃತಿಯ 'ಮುಸ್ಸಂಜೆಯ ಗೆಳತಿ'

ಎನ್ನುತ್ತಾನೆ ಹೀರೋ ಕಂ ಡೈರೆಕ್ಟರ್ ಶ್ರೀನಿವಾಸ್.

"ಅಲ್ರೀ ನಿಮಗೆ ಇದಕ್ಕಿಂತ ಒಳ್ಳೇ ಕತೆ ಹೊಳೆಯಲೇ ಇಲ್ವಾ?" ಎಂದರೆ "ಇದೊಂಥರಾ ಡಿಫರೆಂಟ್ ಸ್ಟೋರಿ ಸಾರ್. ಮೊದಲು ಪ್ರೊಫೆಸರ್ ಪಾತ್ರಕ್ಕೆ ಅನಂತ್‌ನಾಗೇ ಲಾಯಕ್ಕು ಅಂತ ಡಿಸೈಡ್ ಮಾಡಿದ್ವಿ. ಆದರೆ ಫೋಟೋಗ್ರಾಫರ್ ಬಳಿ ಮಗಳ ಫೋಟೋಸೇಷನ್ ನಡೀತಿತ್ತಲ್ಲ; ಅಲ್ಲಿ ನಾನು ಸೂಟುಬೂಟು ಹಾಕಿಕೊಂಡಿದ್ದೆ. ಆ ಡ್ರೆಸ್ಸಲ್ಲಿ ನನ್ನನ್ನ ನೋಡಿದವರೆಲ್ಲ ಹೀರೋ ಪಾತ್ರಕ್ಕೆ ನೀವೇ ಸೆಟ್ಟಾಗ್ತೀರಿ ಸಾರ್. ಸುಮ್ನೆ ಯಾಕೆ ಅನಂತ್‌ನಾಗ್? ಎಂದುಬಿಟ್ಟರು. ಯಾರ್‍ಯಾರೋ ಏಕೆ ನನ್ನ ಮಗಳ ಮುಂದೆ ನಾನೇ ಹೀರೋ ಆಗಿ ನಟಿಸಿಬಿಡೋಣಾ ಅಂತ ಡಿಸೈಡ್ ಮಾಡೇಬಿಟ್ಟೆ. ನಿಜಾ ಹೇಳ್ಬೇಕು ಅಂದ್ರೆ ಸಿನಿಮಾದ ಪೋಸ್ಟರ್‌ಗಳಿಗೂ ಸಿನಿಮಾಕ್ಕೂ ಸಂಬಂಧವಿಲ್ಲ. ಜಯಮಾಲಾ ಕರೆಸಿ ಕೇಳಿದ್ದಕ್ಕೆ ಅವರಿಗೂ ಇದೇ ವಿಷಯ ತಿಳಿಸಿದ್ದೀನಿ. ಏನ್ ಸಾರ್ ಎಲ್ಲಾದ್ರೂ ಉಂಟಾ? ನನ್ನ ಮಗಳ ಜೊತೆ ನಾನು ಕೆಟ್ಟದಾಗಿ ನಡಕೊಳ್ತೀನಾ? ಇದೆಲ್ಲ ಕೇವಲ ಗಿಮಿಕ್ಕು, ಏಕಂದ್ರೆ ಈ ಚಿತ್ರಕ್ಕೆ ದೊಡ್ಡ ಹೀರೋ ಇಲ್ಲ. **Establish** ಆಗಿರೋ ಹೀರೋಯಿನ್ನೂ ಇಲ್ಲ, ಇದ್ಯಾವುದೂ ಇಲ್ದೆ ಜನರನ್ನ ಥೇಟರಿಗೆ ಕರೆತರಬೇಕು ಅಂದ್ರೆ ಏನಾದ್ರೂ ಇಂಥ 'ಚಮಕ್' ಮಾಡಲೇಬೇಕು.



ತಪ್ಪು ತಿಳಕೊಳ್ಳುವಂಥಾದ್ದೇನೂ ಈ ಸಿನಿಮಾದಲ್ಲಿಲ್ಲ. ಮನೆಮಂದಿಯೆಲ್ಲಾ ಸೇರಿ ನೋಡೋ ಅಂತ ಚಿತ್ರ ಮುಸ್ಸಂಜೆಯ ಗೆಳತಿ. ಸಂಬಂಧಪಟ್ಟ ಎಲ್ಲರನ್ನೂ ಕರೆಸಿ ತೋರಿಸಿದ ನಂತರವೇ ಬಿಡುಗಡೆ ಮಾಡ್ತೀನಿ. ಈಗ್ಯಾಕೆ ಮಾತು? ಮೊದಲು ಸಿನಿಮಾ ಮುಗೀಲಿ. ಆನಂತ್ರಾನೇ ನಾನು ಮಾತಾಡ್ತೀನಿ.....!" ಎನ್ನುತ್ತಾನೆ ಶ್ರೀನಿವಾಸ್.

ನೇಪಾಳದಲ್ಲಿ ಬ್ಯಾಂಕ್!

ಈತನ ಮಾತಿಗೂ ವರ್ತನೆಗೂ ಹಿನ್ನೆಲೆಗೂ ಹೊಂದಾಣಿಕೆಯೇ ಇದ್ದಂತಿಲ್ಲ. ಒಮ್ಮೆ ಹೀರೋಯಿನ್ ಸೆಟ್ ಆಗ್ಲಿಲ್ಲ ಅದಕ್ಕೇ ಮಗಳನ್ನೇ ಹಾಕಿಕೊಂಡೆ ಎನ್ನುತ್ತಾನೆ. ಮತ್ತೊಮ್ಮೆ ಮಗಳಿಗೋಸ್ಕರವೇ ಸಿನಿಮಾ ಮಾಡಿದೆ ಎನ್ನುತ್ತಾನೆ. ಅನಂತ್‌ನಾಗ್ ಮಾಡಬೇಕಿದ್ದ ಪಾತ್ರಕ್ಕೆ ತಾನೇ ಗಂಟುಬಿದ್ದು ಈತನ ವಾದಕ್ಕೂ ತಾಳೆಯಿಲ್ಲ.

ಈತನ ಬದುಕೇ ವಿಚಿತ್ರ. ಒಂದಲ್ಲ ಮೂವರು ಪತ್ನಿಯರು. ಮೊದಲ ಪತ್ನಿ ಸುಜಾತಾಗೆ ಕುಮಾರಸ್ವಾಮಿ ಲೇಔಟಿನಲ್ಲೊಂದು ಬಂಗಲೆ ಕಟ್ಟಿಸಿಕೊಟ್ಟಿದ್ದಾನೆ. ಎರಡನೇ ಪತ್ನಿ ವಸಂತಾಗೆ ನಾಗರಬಾವಿಯಲ್ಲಿ ಮನೆ ಮಾಡಿಟ್ಟಿದ್ದಾನೆ. ಮೂರನೇ ಪತ್ನಿಯೇ ಚಿತ್ರನಟಿ ನವನೀತಾ. ಆಕೆಗೆ ಡಾಲರ್ಸ್ ಕಾಲನಿಯಲ್ಲಿ ಬಂಗಲೆಯಿದೆ. ಬೆಂಗಳೂರಿನ ಮೂರು ದಿಕ್ಕಿಗೂ ಒಬ್ಬೊಬ್ಬಳು ಪತ್ನಿಗೆ ನೆಲೆ ಕಲ್ಪಿಸಿರುವ ಈತನ ಕಸುಬೇನು? ಆದಾಯವೇನು? ವ್ಯವಹಾರವೇನು? ಯಾರಿಗೂ ಗೊತ್ತಿಲ್ಲ.

ಕೇಳಿದವರಿಗೆ ತಾನು ನೇಪಾಳದ ಕಠ್ಮಂಡುವಿನಲ್ಲಿ ಬ್ಯಾಂಕ್ ಇಟ್ಟಿದ್ದೀನಿ ಎನ್ನುತ್ತಾನೆ. **Ind Hongkong Banking services Corporation** ಅಂದರೆ ತನ್ನದು **IHBC** ಬ್ಯಾಂಕು ಎನ್ನುತ್ತಾನೆ. ಕಠ್ಮಂಡು ಮಾತ್ರವಲ್ಲದೇ ಭೂತಾನ್, ಶ್ರೀಲಂಕಾ, ಮಾರಿಷಸ್, ಅಂಡಮಾನ್, ಹಾಂಕಾಂಗ್ ಮತ್ತು ಬೆಂಗಳೂರುಗಳಲ್ಲಿ ಇದರ ಶಾಖೆಗಳಿವೆಯಂತೆ. ಜೊತೆಗೆ **fineworld group of companys** ಕೂಡ ಈತನದೇ ಅಂತೆ. ಫೈನ್‌ವರ್ಲ್ಡ್ ಕನ್ಸಲ್ಟನ್ಸಿ ಸರ್ವೀಸಸ್, ನೇಪಾಳದ ಫೈನ್ ವರ್ಲ್ಡ್ ಮಲ್ಟಿ ಪರ್ಪೋಸ್ ಕೋ-ಆಪರೇಟಿವ್ ಬ್ಯಾಂಕ್; ಹೀಗೆ ಏನೇನೋ ಕಂಪೆನಿಗಳೆಲ್ಲ ತನ್ನ ಒಡೆತನದಲ್ಲಿವೆ ಎನ್ನುತ್ತಾನೆ ಶ್ರೀನಿವಾಸ್. ಆದರೆ ಈತನ ಬ್ಯಾಂಕಿನ ಹೆಸರಾಗಲಿ ಕಂಪೆನಿಗಳ ಹೆಸರಾಗಲಿ ಯಾರೂ ಈತನಕ ಕೇಳಿಲ್ಲ ಕಂಡಿಲ್ಲ.

ಯಾರೇ ಒಬ್ಬ ವ್ಯಕ್ತಿ ಬ್ಯಾಂಕೊಂದಕ್ಕೆ ಮಾಲೀಕನಾಗಲು ಸಾಧ್ಯವಿಲ್ಲ ಎಂಬ ಕನಿಷ್ಠ ತಿಳಿವಳಿಕೆಯೂ ಈತನಿಗಿಲ್ಲ. ಇಷ್ಟೆಲ್ಲಾ ಬ್ಯಾಂಕು, ಗ್ರೂಪ್ ಆಫ್ ಕಂಪೆನಿಗಳಿಗೆ ಒಡೆಯನಾದವನು ಹಾಲಿವುಡ್ಡೋ, ಬಾಲಿವುಡ್ಡೋ ಸಿನಿಮಾ ಮಾಡುವುದನ್ನು ಬಿಟ್ಟು ಹೀರೋಯಿನ್‌ಗೆ ಕೊಡಲು ಕಾಸಿಲ್ಲದೇ ಕನ್ನಡದ ಸಿನಿಮಾ ಮಾಡುತ್ತಾನೆಂದರೆ ಏನರ್ಥ?

ನಿಜಕ್ಕೂ ತಂದೆಯೆ?

ಈಪಾಟಿ ಹಣಕಾಸಿನ ಸಾಮ್ರಾಜ್ಯ ಹೊಂದಿರುವಾತನಿಗೆ ಎಲ್ಲಾ ಬಿಟ್ಟು ಸಿನಿಮಾ ಮಾಡುವಷ್ಟು ಟೈಮೆಲ್ಲಿದೆ? ತಾನು ನೇಪಾಳದ ರಾಜರಿಗೆ ತುಂಬಾ ಕ್ಲೋಸು ಎನ್ನುತ್ತಾನೆ. ರಿಯಲ್ ಎಸ್ಟೇಟು, ಬಿಲ್ಡರು ಎಲ್ಲವೂ ಹೌದು ಎನ್ನುತ್ತಾನೆ. ಇಷ್ಟೆಲ್ಲಾ ಇರುವವನಿಗೆ ನೆಟ್ಟಗೊಂದಿಷ್ಟು ಸಿನಿಮಾ ನಟನಟಿಯರನ್ನು ಕಲೆ ಹಾಕಿ ಸಿನಿಮಾ ಮಾಡುವುದು ಕಷ್ಟವೆ? ತಾನೇ ತನ್ನ ಮಗಳ ಜೊತೆ ಡುಯೆಟ್ ಕುಣಿಯುವ ಬದಲು ಬೇರೆ ಕಲಾವಿದರಿಗಾದರೂ ಅವಕಾಶ ಕೊಡಬಹುದಿತ್ತಲ್ಲ?

ಕೇವಲ ನಟನೆಗೋಸ್ಕರವೇ ಮಗಳ ಜೊತೆ ತಂದೆಯಾದವನು ಡುಯೆಟ್ ಹಾಡಬಹುದು. ಸಿನಿಮಾದಲ್ಲಿ ಕತೆಗೋಸ್ಕರ ಅಂಥ ಪಾತ್ರಗಳನ್ನೂ ಸೃಷ್ಟಿಸಬಹುದು. ಹಾಗೆ ನಟಿಸಿದ ಮಾತ್ರಕ್ಕೆ ಅದು ನಿಜವಾಗುತ್ತಾ ಎಂದು ತಿಪ್ಪೆ ಸಾರಿಸಲೂಬಹುದು. ಆದರೆ ಪ್ರೇಕ್ಷಕರ್‍ಯಾರೂ ಮೃಗಗಳಲ್ಲ, ತೆರೆ ಮೇಲೆ ಹೀರೋ ಮತ್ತು ಹೀರೋಯಿನ್ ಪಾತ್ರಧಾರಿಗಳೇ ಆದರೂ ನೋಡುವವರ ಕಣ್ಣಿಗವರು ತಂದೆ ಮಗಳೆ. ನಟಿಸುವುದೇ ಖಯಾಲಿಯಾಗಿದ್ದರೆ ಅಪ್ಪ ಮಗಳಾಗೇ ನಟಿಸಬಹುದಲ್ಲ? ನಿಜಕ್ಕೂ ಶ್ರೀನಿವಾಸ್ ಹೀರೋಯಿನ್ ಶಾಲಿನಿಗೆ ತಂದೆಯೇ ಆಗಿದ್ದರೆ ಆ ರೀತಿ ನಟಿಸುವುದಕ್ಕಾದರೂ ಹೇಗೆ ಮನಸ್ಸು ಬರುತ್ತದೆ?

ಮನುಷ್ಯತ್ವಕ್ಕೂ ಮೃಗೀಯತೆಗೂ ಭೂಮಿ ಆಕಾಶದ ಅಂತರವಿದೆ. ಮಗಳ ಪ್ರಿಯಕರನಾಗಿ ಅಪ್ಪನೇ ನಟಿಸುವುದಾದರೆ ಕಾಡುಪ್ರಾಣಿಗಳಿಗೂ ಮನುಷ್ಯನಿಗೂ ಏನು ವ್ಯತ್ಯಾಸ ಬಂತು?

ತಂದೆ ಮಗಳ ಸಂಬಂಧದ ಪಾವಿತ್ರ್ಯದ ಅರ್ಥವನ್ನು ಇವರಿಗೆ ಕಲಿಸುವವರ್‍ಯಾರು? ●



ಮಂಜುಳಾ ಕರಿಬಸಮ್ಮನವರ್

ಹಾವೇರಿ: ಪಿಕಲ್ ಮಂಜುಳಾಳ ಗೂಂಡಾಗಿರಿ!

ಒಂದು ಕಾಲಕ್ಕೆ ಹೊತ್ತಿನ ತುತ್ತಿಗೂ ಪರದಾಡುತ್ತಿದ್ದ ಮಂಜುಳಾ ಪರದೇಶಿಯಂತಿದ್ದಳು. ಗಲ್ಲಿಗಲ್ಲಿಗಳಲ್ಲಿ, ಸಂದಿ ಗೊಂದಿಗಳಲ್ಲಿ ಉಪ್ಪಿನಕಾಯಿ ಮಾರಾಟ ಮಾಡಿಕೊಂಡೇ ಖೂಳು ಸಂಪಾದಿಸುತ್ತಿದ್ದಳು. ನೋಡುನೋಡುತ್ತಿದ್ದಂತೆಯೇ ಈಕೆಯ ಉಪ್ಪಿನಕಾಯಿ ಇಡೀ ಹಾವೇರಿಯಾದ್ಯಂತ ಜನಪ್ರಿಯವಾಗಿ ಈಕೆ 'ಉಪ್ಪಿನಕಾಯಿ ಮಂಜುಳಾ' ಎಂದೇ ಹೆಸರುವಾಸಿಯಾದಳು. ಇಂಥ ಮಂಜುಳಾ ಬಿಜೆಪಿ ಸೇರಿ ಮುನ್ಸಿಪಾಲಿಟಿ ಅಧ್ಯಕ್ಷಳಾಗಿದ್ದೇ ತಡ, ಪಕ್ಕಾ ಮಾರಿಮುತ್ತುಳ ಅವತಾರವೆತ್ತಿಬಿಟ್ಟಿದ್ದಾಳೆ.

"ತಾಜಾ ಉಪ್ಪಿನಕಾಯಿ, ಮಾವಿನಕಾಯಿ ಉಪ್ಪಿನ ಾಯಿ, ನಿಂಬೇ ಉಪ್ಪಿನಕಾಯಿ" ಎಂತೆಲ್ಲಾ ಮೊನ್ನೆ ಮೊನ್ನೆ ನಕ ಹಾವೇರಿಯ ಸಂದಿಗೊಂದಿಗಳಲ್ಲಿ ಉಪ್ಪಿನಕಾಯಿ ಾರಿಕೊಂಡಿದ್ದ ಮಂಜುಳಾ ಕರಿಬಸಮ್ಮನವರ್ ಬಿಜೆಪಿ ೇರಿ ಮುನ್ಸಿಪಾಲಿಟ ಅಧ್ಯಕ್ಷಳಾಗಿದ್ದೇ ತಡ, ಪಕ್ಕಾ ಮಾರಿ ಮುತ್ತುಳ ಅವತಾರವೆತ್ತಿಬಿಟ್ಟಿದ್ದಾಳೆ. ಈಗಾಗಲೇ ಶಿವರಾಜ್ ಜ್ಜನ, ನೆಹರೂ ಓಲೇಕಾರಗಳೆಂಬ ಉದಾಸಿ ಬಾಡಿಗಾರ್ಡ್ ಳ ರೌಡಿಸಂನಿಂದ ತತ್ತರಿಸಿರುವ ಹಾವೇರಿ ಜನ ಈಗ ಾರಿಮುತ್ತು ವೇಷದ ಈ ಮಂಜುಳಾ ಕರಿಬಸಮ್ಮಳ ೌರ್ಜನ್ಯಗಳನ್ನೂ ಅನುಭವಿಸಬೇಕಾದ ದುಸ್ಥಿತಿಗೆ ಒಳಗಾಗಿ ದ್ದಾರೆ.

ಯಾವಾಗ ಶಿವರಾಜ ಸಜ್ಜನ ಮತ್ತು ನೆಹರೂ ಲೇಕಾರಗಳೆಂಬ ಅಡ್ನಾಡಿಗಳು ಸಿ.ಎಂ.ಉದಾಸಿ ಎಂಬ ುದಿ ರಾಜಕಾರಣಿಯ ಬಾಡಿಗಾರ್ಡುಗಳಾದರೋ ಆವತ್ತೇ ಾವೇರಿಯ ಜನ ನೆಮ್ಮದಿ ಕಳೆದುಕೊಂಡಾಗಿತ್ತು. ದಿನ ಳಗಾದರೆ ಒಂದಿಲ್ಲೊಂದು ಕಿತಾಪತಿ ತೆಗೆದು ಗಲಾಟೆ ಾಡುವುದು, ಹೊಡೆದಾಡುವುದು, ಅಮಾಯಕರನ್ನು ಲಿಯುವುದು ಮಾಮೂಲು ಎಂಬಂತಾಗಿಬಿಟ್ಟಿತ್ತು. ಗ್ಯಾಂಗಿಗೆ ಈಗ ಮಂಜುಳಾದ್ದು ಲೇಟೆಸ್ಟ್ ಸೇರ್ಪಡೆ. ಕೆ ಉದಾಸಿ-ಸಜ್ಜನ-ಓಲೇಕಾರಗಳೆಂಬ ತ್ರಿಮೂರ್ತಿಗಳ ರಮ ಭಕ್ತೆ'ಯೆಂಬುದು ಹಾವೇರಿಯಲ್ಲೀಗ ಗುಟ್ಟಾಗಿರುವ ಹಸ್ಯವೇನಲ್ಲ.

ಈ ಮಂಜುಳಾ ಕರಿಬಸಮ್ಮಳ ಚರಿತ್ರೆಯನ್ನೊಂದಿಷ್ಟು ಕಿ ನೋಡಿ. ಒಂದು ಕಾಲಕ್ಕೆ ಒಂದು ಹೊತ್ತಿನ ತುತ್ತಿಗೂ ರದಾಡುತ್ತಿದ್ದ ಪರದೇಶಿಯಂತಿದ್ದಳು. ಗಲ್ಲಿಗಲ್ಲಿಗಳಲ್ಲಿ ಂದಿ ಗೊಂದಿಗಳಲ್ಲಿ ಉಪ್ಪಿನಕಾಯಿ ಮಾರಾಟ ಮಾಡಿ ೊಂಡೇ ಖೂಳು ಸಂಪಾದಿಸುತ್ತಿದ್ದಳು. ನೋಡುನೋಡು ದ್ದಂತೆಯೇ ಈಕೆಯ ಉಪ್ಪಿನಕಾಯಿ ಇಡೀ ಹಾವೇರಿ ಾದ್ಯಂತ ಜನಪ್ರಿಯವಾಗಿ ಈಕೆ 'ಉಪ್ಪಿನಕಾಯಿ ಂಜುಳಾ' ಎಂದೇ ಹೆಸರುವಾಸಿಯಾದಳು.

ಈ ಮಧ್ಯೆ ಈಕೆ ಅದೇನು ಕರಾಮತ್ತು ಮಾಡಿದಳೋ ೊತ್ತಿಲ್ಲ, ನಿಧಾನಕ್ಕೆ ಬಿಜೆಪಿಯೊಳಗೆ ನುಸುಳಿ ಉದಾಸಿಯ ಕ್ಷದಲ್ಲಿ ಕಂಗೊಳಿಸಲಾರಂಭಿಸಿಬಿಟ್ಟಳು. ಯಾವಾಗ ಉದಾ ಯ ಆಶೀರ್ವಾದ ಸಿಕ್ಕಿತೋ, ಅಲ್ಲಿಂದಾಚೆಗೆ ಆಕೆ ನಡೆದದ್ದೇ ಾರಿ ಎಂಬಂತಾಗಿಹೋಯಿತು. ಶಿವರಾಜ ಸಜ್ಜನ ಮತ್ತು ನೆಹರೂ ಓಲೇಕಾರಗಳೆಂಬ ಅಡ್ನಾಡಿಗಳ ಜೊತೆ ಸೇರಿ ಕೊಂಡು ಅಕ್ಷರಶಃ ರೌಡಿಜಂಗಿಳಿದುಬಿಟ್ಟಳು. ಅದಕ್ಕೆ ತೀರಾ ಇತ್ತೀಚಿನ ಉದಾಹರಣೆಯೆಂದರೆ ಮೊನ್ನೆ ಲೋಕಸಭಾ ಚುನಾವಣೆಯ ಸಮಯದಲ್ಲಿ ಮತದಾನದ ದಿನವೇ ಈಕೆ ಮಾಡಿದ, ಮಾಡಿಸಿದ ಹಲ್ಲೆಗಳು.

ಆವತ್ತು ಏಪ್ರಿಲ್ 30. ರಾಜ್ಯದಲ್ಲಿ ಎರಡನೇ ಹಂತದ ಚುನಾವಣೆಗಾಗಿ ಮತದಾನ ನಡೆಯುತ್ತಿತ್ತು. ಮುದಿ ಉದಾಸಿಯ ಮರಿ ಶಿವಕುಮಾರ್ ಉದಾಸಿಯ ಪರವಾಗಿ ಮಂಜುಳಾ ಭರ್ಜರಿಯಾಗಿ ಪ್ರಚಾರ ಮಾಡುತ್ತಿದ್ದಳು. ಅದರ ಭಾಗವಾಗಿಯೇ ಬೂತ್ ನಂಬರ್ 162ರಲ್ಲಿ ತನ್ನ ಹಿಂಡು ಗೂಂಡಾಗಳನ್ನು ಕಟ್ಟಿಕೊಂಡು ರಾಜಾರೋಷವಾಗಿ ದುಡ್ಡು ಹಂಚುತ್ತಾ ಮತದಾರರನ್ನು ಬುಟ್ಟಿಗೆ ಹಾಕಿಕೊಳ್ಳು ತ್ತಿದ್ದಳು. ಅದೂ ಪೊಲೀಸರು, ಚುನಾವಣಾ ವೀಕ್ಷಕರ ಕಣ್ಣೆದುರಿಗೇ. ಮಂಜುಳಾ ಮತ್ತು ಉದಾಸಿ ಸಂಬಂಧ ಎಂತಹದ್ದು ಎಂದು ತಿಳಿದಿದ್ದ ಪೊಲೀಸರು ಮತ್ತು ಚುನಾವಣಾ ವೀಕ್ಷಕರು ತಮಗ್ಯಾಕೆ ದೊಡ್ಡವರ ಉಸಾಬರಿ ಎಂದು ಬೆದರುಬೊಂಬೆಗಳಂತೆ ನೋಡುತ್ತಿದ್ದರೇ ಹೊರತು ಆಕೆಯನ್ನು ಮಾತನಾಡಿಸುವ ಧೈರ್ಯ ಮಾಡಲಿಲ್ಲ. ಸಹಜ ವಾಗಿಯೇ ಇದು ಎದುರಾಳಿ ಕಾಂಗ್ರೆಸ್ಸಿಗ ರನ್ನು ಕೆರಳಿಸಿತು. ಬಾಬು ಕುಳೇನೂರ್ ಎಂಬ ಕಾಂಗ್ರೆಸ್ಸಿನ ಸ್ಥಳೀಯ ನಾಯಕ ಪ್ರತಿಭಟಿಸಿದ. ಅದನ್ನೇ ಕಾಯುತ್ತಿದ್ದವಳಂತೆ ಈ ಮಾರಿ ಮಂಜುಳಾ ತನ್ನ ಗೂಂಡಾಪಡೆ ಯನ್ನು ಕಟ್ಟಿಕೊಂಡು ದಾಳಿಗಿಳಿದುಬಿಟ್ಟಳು.



ಸಿ.ಎಂ.ಉದಾಸಿ



ಪರಶುರಾಮ್



ಶಿವರಾಜ್ ಸಜ್ಜನ್

ಅದೇ ಹೊತ್ತಿಗೆ ಪರಶುರಾಮ ಅಗಡಿ ಎಂಬ ಪ್ರಗತಿಪರ ಪತ್ರಕರ್ತನೂ ಅಲ್ಲಿಗೆ ಧಾವಿಸಿದ. ಮಾರಿ ಮಂಜುಳಾಗೆ ಅದೆ ಲ್ಲಿತ್ತೋ ಸಿಟ್ಟು, ನೇರವಾಗಿ ತನ್ನ ಹಿಂಬಾಲಕರಿಗೆ ಆದೇಶ ಕೊಟ್ಟು ಆತನ ಮೇಲೂ ಎರಗಿದಳು. ಆಕೆಯ ಅಬ್ಬೆಪಾರಿ ಗಂಡ ಶೇಖರಪ್ಪ ಕೂಡ ಸೊಂಟದಿಂದ ಚಾಕು ತೆಗೆದು ಬಹಿರಂಗವಾಗಿ ಝಳಪಿಸುತ್ತಾ ಅಗಡಿಯವರನ್ನು ಬೆದರಿಸಿದ. ಒಬ್ಬ ಪತ್ರಕರ್ತನ ಪರಿಸ್ಥಿತಿಯೇ ಹೀಗಿರಬೇಕಾದರೆ ಇನ್ನು ಸಾಮಾನ್ಯ ಜನರ ಮೇಲೆ ಈಕೆ ಅದೆಂಥ ಕ್ರೌರ್ಯವೆಸಗುತ್ತಿರಬಹುದು.

ಪರಶುರಾಮನನ್ನು ಟಾರ್ಗೆಟ್ ಮಾಡಿದ್ದೇಕೆ?

ಈ ವಿಚಾರದ ಸುತ್ತ ಕೆದಕುತ್ತಾ ಹೋದರೆ ಮಾರಿ ಮಂಜುಳಾಳ ಹಿಂದೆ ಸಿ.ಎಂ.ಉದಾಸಿ, ಶಿವರಾಜ್ ಸಜ್ಜನ ಮತ್ತು ನೆಹರೂ ಓಲೇಕಾರಗಳೆಂಬ ಪೈಶಾಚಿಕ ಮುಖಗಳು ಕಾಣುತ್ತವೆ. ಮುನಿಸಿಪಾಲಿಟಿ ಚುನಾವಣೆಯಲ್ಲಿ ಮಂಜುಳಾ ಬಿಜೆಪಿ ಅಭ್ಯರ್ಥಿಯಾದಾಗಿನಿಂದ ಪರಶುರಾಮ ಅಗಡಿ ಆಕೆಯ ಅಸಲಿ ಮುಖವನ್ನು ಬಯಲಿಗೆಳೆದು ತಮ್ಮ ಪತ್ರಿಕೆಯಲ್ಲಿ ಬರೆಯುತ್ತಾ ಬಂದಿದ್ದರು; ಸದಾ ರೌಡಿಸಂನಲ್ಲೇ ತೊಡಗಿರುವ ಇಂತಹ ಮಹಿಳೆಯೊಬ್ಬಳು ಮುನಿಸಿಪಾಲಿಟಿಗೆ ಆಯ್ಕೆಯಾಗಿ ಬಂದರೆ ಹಾವೇರಿಯನ್ನು ಅದೆಷ್ಟರಮಟ್ಟಿಗೆ ಉದ್ಧಾರಮಾಡಬಲ್ಲಳು ಎಂದು ಪ್ರಶ್ನಿಸುತ್ತಲೇ ಬಂದಿದ್ದರು. ಮಂಜುಳಾ ಚುನಾವಣಾ ಆಯೋಗದ ಕಣ್ಣಿಗೆ ಮಣ್ಣೆರಚಿ ತನ್ನ ಮೇಲಿದ್ದ ಕ್ರಿಮಿನಲ್ ಕೇಸುಗಳನ್ನು ಮುಚ್ಚಿಡಲು ಪ್ರಯತ್ನಿಸಿದ್ದಳು. ಆಗ ಈಕೆಯ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್ಸಿನ ರತ್ನಕ್ಕ ಭೀಮಕ್ಕನವರ ಪರವಾಗಿ ಇದೇ ಪರಶುರಾಮ ಅಗಡಿ ಅಫಿಡವಿಟ್ಟು ಸಲ್ಲಿಸಿದ್ದರು. ಇದರಿಂದಾಗಿ ಇನ್ನೇನು ಮಂಜುಳಾಳ ನಾಮಿನೇಶನ್ ರಿಜೆಕ್ಟ್ ಆಗಬೇಕಾದ ಪರಿಸ್ಥಿತಿ ನಿರ್ಮಾಣ ವಾಗಿತ್ತು. ಆದರೆ ಉದಾಸಿ, ಸಜ್ಜನ, ಓಲೇಕಾರರೆಂಬ ರಾಜ ಕಾರಣಿಗಳು ರಾತ್ರೋರಾತ್ರಿ ಎ.ಸಿ. ಲೀಲಾವತಿ ಮತ್ತು ತಹಶೀಲ್ದಾರ ಪ್ರಶಾಂತ್‌ರ ಮೇಲೆ ಒತ್ತಡ ತಂದು ಹಾಗಾಗದಂತೆ ನೋಡಿಕೊಂಡರು. ಸಾಕಷ್ಟು ದುಡ್ಡು ಸುರಿದು ಆಕೆಯನ್ನು ಗೆಲ್ಲಿಸಿದ್ದೂ ಅಲ್ಲದೇ ಮುನ್ಸಿಪಾಲಿಟಿ ಅಧ್ಯಕ್ಷ ಗಾದಿಯ ಮೇಲೂ ಕೂರಿಸಿದರು. ತಮಗೆ ಇಷ್ಟೊಂದು ಅಡ್ಡಗಾಲು ಹಾಕಿದ ಪರಶುರಾಮ ಅಗಡಿಯನ್ನು ಒಂದು ಕೈ ನೋಡಿಕೊಳ್ಳಬೇಕೆಂದು ಆವತ್ತೇ ಆ ಧೂರ್ತ ಗ್ಯಾಂಗು ನಿರ್ಧರಿಸಿಬಿಟ್ಟಿತ್ತು. ಅಧ್ಯಕ್ಷಗಾದಿಗೇರಿದ ಮೇಲೆ ಮಂಜುಳಾ ಹಾವೇರಿಯ ಉದ್ಧಾರಕ್ಕೆ ಕಡಿದು ಗುಡ್ಡೆಹಾಕಿದ್ದೇನಿರಲಿಲ್ಲ. ಹಾವೇರಿಯ ಅಭಿವೃದ್ಧಿಯ ಹೆಸರಿನಲ್ಲಿ, ಜನರ ಉದ್ಧಾರದ ಹೆಸರಿನಲ್ಲಿ ತಾನು ಕಂಠಮಟ ತಿಂದು ಊದಿಕೊಂಡಿದ್ದಾಳೆ. ಇದರ ವಿರುದ್ಧವೂ ಪರಶುರಾಮ್ ಅಗಡಿ ತಮ್ಮ ಪತ್ರಿಕೆಯಲ್ಲಿ ಬರೆಯುತ್ತಲೇ ಹೋಗಿದ್ದರು. ಇವನನ್ನು ಹೀಗೆ ಬಿಟ್ಟರೆ ಇಂದಲ್ಲಾ ನಾಳೆ ತನ್ನ ಮುಳುವಿಗೆ ಕಾರಣವಾಗುತ್ತಾನೆಂಬುದು ಆಕೆಗೂ ಗೊತ್ತಿತ್ತು. ಆದ್ದರಿಂದಲೇ ಅವನನ್ನು ತುಳಿಯಲು ಸ್ಕೆಚ್ ಹಾಕಿದಳು. ಮೊನ್ನೆ ಆತನ ಮೇಲೆ ತನ್ನ ಗೂಂಡಾ ಪಡೆಯನ್ನು ಛೂ ಬಿಟ್ಟು ಹಲ್ಲೆ ಮಾಡಿದ್ದಲ್ಲದೇ ಆತನ ಮೇಲೆಯೇ ದಲಿತ ಅಟ್ರಾಸಿಟಿ ಕೇಸು ದಾಖಲಿಸಿದ್ದಾಳೆ!

ಹಾಗೆ ನೋಡಿದರೆ ಪರಶುರಾಮ ಅಗಡಿ ಮತ್ತು ಮಂಜುಳಾ ಕರಿಬಸಮ್ಮನವರ್ ಇಬ್ಬರೂ ನಾಯಕ ಜನಾಂಗಕ್ಕೆ ಸೇರಿದವರು. ಹಾಗಿದ್ದರೂ ಮಂಜುಳಾ ಪರಶುರಾಮನ ಮೇಲೆ ಅದ್ಹೇಗೆ ಅಟ್ರಾಸಿಟಿ ಕಂಪ್ಲೇಂಟ್ ಕೊಟ್ಟಳೋ? ಪೊಲೀಸರು ಅದ್ಹೇಗೆ ಅವನ ಮೇಲೆ ಅಟ್ರಾಸಿಟಿ ಕೇಸು ಜಡಿದರೋ? ಇದಕ್ಕೆ ಪ್ರಾಯಶಃ ಟೌನ್ ಸಿಪಿಐ ಮುರುಗೇಂದ್ರರ ಹತ್ತಿರವೂ ಉತ್ತರವಿರಲಿಕ್ಕಿಲ್ಲ. ಮಂಜುಳಾ ಕೊಟ್ಟ ಕಂಪ್ಲೇಂಟ್‌ನಲ್ಲಿ "ಪರಶುರಾಮ ಅಗಡಿ ತನ್ನ 'ಶ್ರೀಮಂತ' ಶೀಲಾಪಹರಣಕ್ಕೂ ಪ್ರಯತ್ನಿಸಿದ" ಎಂದು ಬರೆದಿದ್ದಾಳೆ. ರಾಜಕೀಯ ದ್ವೇಷಕ್ಕಾಗಿ, ವೈಯಕ್ತಿಕ ಹಠ ಸಾಧನೆಗಾಗಿ ಯಾವ ಆಧಾರವೂ ಇಲ್ಲದೇ ತನ್ನ ಎದುರಾಳಿಯ ಮೇಲೆ ಇಂಥ ಗಂಭೀರ ಆರೋಪ ಮಾಡುತ್ತಾಳೆಂದರೆ ಅವಳಿನ್ನೆಂಥಾ ಹೆಂಗಸಿರಬಹುದು?

ಈ ಪ್ರಕರಣದಿಂದ ಒಂದು ವಿಚಾರವಂತೂ ಸ್ಪಷ್ಟವಾಗಿದೆ. ಎಲ್ಲಿಯತನಕ ಸಿ.ಎಂ.ಉದಾಸಿ, ಆತನ ಮರಿ ಶಿವಕುಮಾರ್ ಉದಾಸಿ, ಶಿವರಾಜ ಸಜ್ಜನ, ನೆಹರೂ ಓಲೇಕಾರ ಮತ್ತೀಗ ಮಂಜುಳಾ ಎಂಬ ಮಾರಿ – ಈ ಧೂರ್ತ ಗ್ಯಾಂಗು ಹಾವೇರಿಗೆ ಅಮರಿಕೊಂಡಿರುತ್ತೋ ಅಲ್ಲಿಯತನಕ ಜನಕ್ಕೆ ನೆಮ್ಮದಿಯಿಲ್ಲ.


● ವಿನಯ್ ಕುರುಳಿಕುಪ್ಪೆ

ಮುರುಗೇಂದ್ರಯ್ಯ ಮೃಗವಾಗದಿರಲಿ...

ಪತ್ರಕರ್ತ ಪರಶುರಾಮ ಅಗಡಿಯ ಮೇಲೆ ಮಂಜುಳಾ ಕರಿಬಸಮ್ಮನೇ ಖುದ್ದಾಗಿ ದಾಳಿ ಮಾಡಿದ್ದೂ ಅಲ್ಲದೇ ಆತನ ಮೇಲೆಯೇ ಅಟ್ರಾಸಿಟಿ ಕೇಸು ದಾಖಲಿಸಿದ್ದು ಇಡೀ ಹಾವೇರಿಗೇ ಗೊತ್ತಿರುವ ವಿಚಾರ. ಬಿಜೆಪಿ ಅಧಿಕಾರದಲ್ಲಿದೆ, ಸಿ.ಎಂ.ಉದಾಸಿ ಎಂಬ ಮುದಿ ರಾಜಕಾರಣಿ, ನೆಹರೂ ಓಲೇಕಾರ, ಶಿವರಾಜ ಸಜ್ಜನ ಎಂಬ ಮರಿ ರಾಜಕಾರಣಿಗಳು ಆಕೆಯ [illegible]ಗಿದ್ದಾರೆ ಎಂಬ ಒಂದೇ ಕಾರಣಕ್ಕೆ ಟೌನ್ ಠಾಣೆಯ ಸಿ.ಪಿ.ಐ. ಮುರುಗೇಂದ್ರಯ್ಯ ಕಾನೂನಿನ ಕಣ್ಣಿಗೆ ಮಣ್ಣೆರಚಲು ಹೊರಟಿದ್ದಾರೆ. ಪತ್ರಕರ್ತ ಪರಶುರಾಮ್ ಅಗಡಿಯ ಮೇಲೆ ಮುರುಗೇಂದ್ರಯ್ಯನಿಗೂ ಹಳೆಯ ಸಿಟ್ಟಿರುವುದರಿಂದ ಈ ಮೂಲಕ ಅದರ ರಿವೇಂಜ್ ತೀರಿಸಿಕೊಳ್ಳಲು ಹೊರಟಿದ್ದಾರೆ. ಪರಶುರಾಮ್ ಅಗಡಿಯನ್ನು ಶಾಶ್ವತವಾಗಿ ಕಂಬಿಗಳ ಹಿಂದೆ ದಬ್ಬಲು ಆತನಿಗಾಗಿ ಹುಡುಕಾಡುತ್ತಿದ್ದಾರೆ.

ತನ್ನ ಮೇಲೆ ಮಂಜುಳಾ ಗ್ಯಾಂಗ್ ಹಲ್ಲೆ ನಡೆಸುತ್ತಿದ್ದಂತೆಯೇ ಪರಶುರಾಮ್ ಅಗಡಿ ಪೊಲೀಸರಿಗೆ ಕಂಪ್ಲೇಂಟ್ ಕೊಟ್ಟಿದ್ದಾರೆ. ಅದನ್ನು ದಾಖಲಿಸಿಕೊಳ್ಳದೇ ಮಂಜುಳಾಳ ಉಪ್ಪಿನಕಾಯಿಗಾಗಿ ನಾಲಿಗೆ ಚಾಚಿಕೊಂಡು [illegible] ಮುರುಗೇಂದ್ರಯ್ಯ, ದಾಳಿ ಮಾಡಿಸಿದ ಮಿಟುಕಲಾಡಿ ಮಂಜುಳಾಳನ್ನು, ಆಕೆಯ ಅಬ್ಬೇಪಾರಿ ಗಂಡ ಶೇಖರಪ್ಪನನ್ನು ತೋರಿಕೆಗಾದರೂ ಕರೆದು ವಿಚಾರಿಸದೇ ಏಕಾಏಕಿಯಾಗಿ ಕಂಪ್ಲೇಂಟ್ ಬರೆಸಿಕೊಂಡು ಪರಶುರಾಮನ ಮೇಲೆ ಅಟ್ರಾಸಿಟಿ ಕೇಸು ಜಡಿದಿದ್ದಾರೆ.

ಸತ್ಯ ಇಡೀ ಹಾವೇರಿಗೆ ಗೊತ್ತಿರುವುದರಿಂದ ಈಗಲೇ ಮುರುಗೇಂದ್ರಯ್ಯ ಎಚ್ಚೆತ್ತುಕೊಂಡರೆ ಒಳ್ಳೆಯದು.



ನೆಹರೂ ಓಲೇಕಾರ್

ಓಲೇಕಾರ್ ಒರಿಜಿನಲ್ ದಲಿತನಾ?

ಇಂಥ ಒಂದು ಅನುಮಾನ ಬರುವುದಕ್ಕೂ ಕಾರಣಗಳಿವೆ. ನೆಹರೂ ಓಲೇಕಾರ್ ಮೂಲತಃ ಒಬ್ಬ ಮೇಷ್ಟ್ರು. ಆಮೇಲೆ ರಾಜಕಾರಣಕ್ಕೆ ಎಂಟ್ರಿ ಕೊಟ್ಟು ದಲಿತನೆಂಬ ಸರ್ಟಿಫಿಕೇಟು ತೋರಿಸಿ ದಲಿತ ಮೀಸಲು ಕ್ಷೇತ್ರದಲ್ಲಿ ಎಲೆಕ್ಷನ್ನಿಗೆ ನಿಂತು ಶಾಸಕನಾದವನು. ಆದರೂ ಆ ಭಾಗದ ದಲಿತರು ಮಾತ್ರ ಈತನನ್ನು 'ನಮ್ಮವನು' ಎಂದು ಎಂದೂ ಒಪ್ಪಿಕೊಳ್ಳಲಿಲ್ಲ. ದಲಿತರ ಹೆಸರಿನಲ್ಲಿ ದಲಿತರನ್ನೇ ಸುಲಿಯುತ್ತಿರುವ ಪಿಶಾಚಿ ಎಂದು ಹಿಡಿಶಾಪ ಹಾಕುತ್ತಾರೆ.

ಅದಕ್ಕೂ ಒಂದು ಕಾರಣವಿದೆ. ಸಿ.ಎಂ.ಉದಾಸಿ ಎಂಬ ಪಕ್ಕಾ ಬಣಜಿಗ ಇವತ್ತಿಗೂ ದಲಿತರನ್ನು ಪಶುಗಳಂತೆ ಕಾಣುವ ಜಾಯಮಾನದವನು. ಸಂವಿಧಾನದ ಜಾತ್ಯತೀತ ಆಶಯಕ್ಕೆ ವಿರುದ್ಧವಾಗಿ ಜಾತಿಯತೆಯನ್ನು, ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಮಹಾ ಜಾತಿವಾದಿ. ಆದರೂ ನೆಹರೂ ಓಲೇಕಾರ ಮಾತ್ರ ಉದಾಸಿಗೆ ತನ್ನದೆಲ್ಲವನ್ನೂ ಅಡವಿಟ್ಟು, ತನ್ನ ಸ್ವಂತಿಕೆಯನ್ನೂ, ಸ್ವಾತಂತ್ರ್ಯವನ್ನೂ ಆತ ಪಾದಗಳಲ್ಲಿಟ್ಟು ಗುಲಾಮನಂತಾಗಿರುವುದು ಸಹಜವಾಗಿ ದಲಿತರನ್ನು ಕೆರಳಿಸಿದೆ. ಈ ದೇಶದಲ್ಲಿ ದಲಿತರು ಶತಶತಮಾನಗಳಿಂದ ಮೇಲ್ಜಾತಿಗಳ ಜೀತ ಮಾಡಿಕೊಂಡು ಬಂದಿದ್ದಾರೆ. ಈಗ ಅವರೆಲ್ಲ ಸಂಘಟಿತರಾಗಿ ಎಚ್ಚೆತ್ತುಕೊಂಡ ಮೇಲಾದರೂ ಈ ಗುಲಾಮಗಿರಿಯನ್ನು ಬಿಡಬೇಕಿತ್ತು. ಆದರೆ ನೆಹರೂ ಓಲೇಕಾರ ಇಂದಿಗೂ ಮೇಲ್ಜಾತಿ ಬಣಜಿಗನ ಗುಲಾಮನಾಗಿಯೇ ವರ್ತಿಸುತ್ತಿದ್ದಾನೆ. ಉದಾಸಿ ಕಾಲಲ್ಲಿ ಎಸೆದಿದ್ದನ್ನು ಓಲೇಕಾರ ತಲೆಮೇಲೆ ಹೊತ್ತು ಪಾಲಿಸುತ್ತಾನೆ. ಯಾವ ಸ್ವಾಭಿಮಾನಿ ದಲಿತ ಇದನ್ನು ಸಹಿಸುತ್ತಾನೆ ಹೇಳಿ?

ದಲಿತರ ಮತಗಳಿಂದಲೇ ಗೆದ್ದುಬಂದಿರುವ ಓಲೇಕಾರನಿಗೆ ತನ್ನದೇ ದಲಿತ ಸಮುದಾಯ ಅನುಭವಿಸುತ್ತಿರುವ ಕಷ್ಟಕಾರ್ಪಣ್ಯಗಳನ್ನು ದೂರ ಮಾಡಬೇಕೆಂಬ ಆಶೆ ಇದ್ದಿದ್ದರೆ, ಹಗಲು-ರಾತ್ರಿ ದುಡಿದರೂ ಎರಡು ಹೊತ್ತಿನ ಖೂಳು ಸಿಗದೇ ಪರದಾಡುವ ದಲಿತರ ಬಗ್ಗೆ ಒಂದಿಷ್ಟಾದರೂ ಕನಿಕರವಿದ್ದಿದ್ದರೆ ತನಗಿರುವ ಅಧಿಕಾರ ಬಳಸಿಕೊಂಡು ಇಷ್ಟು ಹೊತ್ತಿಗೆ ಏನೆಲ್ಲಾ ಮಾಡಿಬಿಡಬಹುದಿತ್ತು. ಸರ್ಕಾರ ದಲಿತರಿಗಾಗಿ ನೀಡುವ ಯೋಜನೆಗಳೆಲ್ಲವೂ ಪರಿಣಾಮಕಾರಿಯಾಗಿ ಜಾರಿಯಾಗುವಂತೆ ನೋಡಿಕೊಂಡು ಅವರನ್ನು ಉದ್ಧಾರ ಮಾಡಬಹುದಿತ್ತು. ಕೆಲಸವಿಲ್ಲದ ಕೈಗಳಿಗೆ ಕೆಲಸ ಕೊಟ್ಟು ಅನ್ನ ಸಂಪಾದಿಸಿಕೊಳ್ಳುವ ದಾರಿ ತೋರಿಸಬಹುದಿತ್ತು.

ಆದರೆ, ಓಲೇಕಾರನಿಗೆ ಅದಕ್ಕೆಲ್ಲಾ ಸಮಯವಿಲ್ಲ. ಉದಾಸಿಯ ಸೇವೆ ಮಾಡುವುದರಲ್ಲೇ ಅವನ ಸಮಯವೆಲ್ಲಾ ಖರ್ಚಾಗಿ ಹೋಗುತ್ತದೆ. ಉದಾಸಿಯ ಪರವಾಗಿ ಗಲಾಟೆ ಮಾಡುವುದರಲ್ಲಿ, ವಾದಿಸುವುದರಲ್ಲಿ, ಚುನಾವಣೆಯಲ್ಲಿ ದುಡ್ಡು ಹಂಚುವುದರಲ್ಲಿ ಬ್ಯುಸಿಯಾಗಿರುತ್ತಾನೆ.

[illegible] ಯಾವ ದಲಿತ ತಾನೇ [illegible] ಹೇಳಿ? ●

ಪ್ರಸಕ್ತ ಶಿಕ್ಷಣ ನೀತಿಯ ಹುಳುಕುಗಳು ಮತ್ತು ಭಾರತದ ಯುವ ಪೀಳಿಗೆ

ಇಂದು ಹೆಚ್ಚುಕಮ್ಮಿ ಪ್ರತಿಯೊಂದು ರಾಜ್ಯದಲ್ಲೂ ಪಠ್ಯಕ್ರಮ, ಪಠ್ಯಪುಸ್ತಕ ತಯಾರಿಗಾಗಿ ಪ್ರತ್ಯೇಕ ಅಧಿಕೃತ ಸಂಸ್ಥೆಗಳಿವೆ. ಹೀಗಿದ್ದರೂ ಪಠ್ಯವಸ್ತುಗಳನ್ನು ಆಯ್ದುಕೊಳ್ಳುವಾಗ ಕೇವಲ ಸ್ವರೂಪವನ್ನಷ್ಟೆ ನೋಡಲಾಗುತ್ತದೆ ಹೊರತು ಹೂರಣ ಅಥವಾ ವಸ್ತು ತಾತ್ಪರ್ಯಕ್ಕೆ ನೀಡಲಾಗುತ್ತಿರುವ ಗಮನ ತೀರಾ ಅತ್ಯಲ್ಪ. ಹೀಗಾಗಿ ಕೆಲವು ಪಠ್ಯಪುಸ್ತಕಗಳಲ್ಲಿ ಪೂರ್ವಗ್ರಹಗಳನ್ನೂ ಸಾಂವಿಧಾನಿಕ ಚೌಕಟ್ಟಿನ ಹೊರಗಿರುವ ವಿಷಯಗಳನ್ನೂ ಕಾಣಬಹುದಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಿಂದ ನಡೆಸಲ್ಪಡುವ ದೊಡ್ಡ ಸಂಖ್ಯೆಯ ಶಾಲೆಗಳಲ್ಲಿ ಮಕ್ಕಳನ್ನು ದೇಶದ ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ದಿಕ್ಕಿನತ್ತ ಒಯ್ಯುವ ಬದಲಾಗಿ ಕೋಮುವಾದಿ ಯೋಚನೆಗಳ ದಿಕ್ಕಿನಲ್ಲಿ ಸಮಾಜೀಕರಿಸಲಾಗುತ್ತಿದೆ.

1999ನೆ ಇಸವಿಯಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಎನ್‌ಡಿಎ ಸರಕಾರ ತತ್‌ಕ್ಷಣದಿಂದಲೆ ದೇಶದ ಶಿಕ್ಷಣ ನೀತಿಯನ್ನು ಬದಲಾಯಿಸಲು ಮುಂದಾಯಿತು. ಸಂಸತ್ತು ಹಾಗೂ ಕೇಂದ್ರ ಶಿಕ್ಷಣ ಸಲಹಾ ಮಂಡಳಿ (ಸಿಎಬಿಇ)ಗಳನ್ನು ಅಲಕ್ಷಿಸಿ ನಡೆಸಿದ ಈ ಪ್ರಯತ್ನಗಳಿಗೆ ಸ್ವಲ್ಪಮಟ್ಟಿನ ಯಶಸ್ಸು ದೊರೆತಿದೆ ಕೂಡ. ಉದಾಹರಣೆಗೆ ಗುಜರಾತ್ ರಾಜ್ಯದ ಸಮಾಜ ಅಧ್ಯಯನ ಪಠ್ಯಪುಸ್ತಕಗಳಲ್ಲಿ ಅಲ್ಪಸಂಖ್ಯಾತರ ಬಗೆಗಿನ ಹೀನಾಯಕರ ಅಂಶಗಳು ಇಂದಿಗೂ ಉಳಿದುಕೊಂಡಿವೆ. ಮಾಜಿ ಕೇಂದ್ರ ಗೃಹ ಸಚಿವ ಎಸ್.ಬಿ.ಚವಾಣ್ ನೇತೃತ್ವದ ಸಂಸತ್ತಿನ ವಿಶೇಷ ತನಿಖಾ ಸಮಿತಿಯೊಂದು ಈ ಆಕ್ಷೇಪಣೀಯ ಅಂಶಗಳನ್ನು ಕಿತ್ತುಹಾಕಬೇಕೆಂದು ಆದೇಶಿಸಿದ್ದರೂ ಅದು ಗೋರ್ಕಲ್ಲ ಮೇಲೆ ಸುರಿದ ನೀರಿನಂತಾಗಿದೆ.

ಇಂದು ಹೆಚ್ಚುಕಮ್ಮಿ ಪ್ರತಿಯೊಂದು ರಾಜ್ಯದಲ್ಲೂ ಪಠ್ಯಕ್ರಮ, ಪಠ್ಯಪುಸ್ತಕ ತಯಾರಿಗಾಗಿ ಪ್ರತ್ಯೇಕ ಅಧಿಕೃತ ಸಂಸ್ಥೆಗಳಿವೆ. ಹೀಗಿದ್ದರೂ ಪಠ್ಯವಸ್ತುಗಳನ್ನು ಆಯ್ದುಕೊಳ್ಳುವಾಗ ಕೇವಲ ಸ್ವರೂಪವನ್ನಷ್ಟೆ ನೋಡಲಾಗುತ್ತದೆ ಹೊರತು ಹೂರಣ ಅಥವಾ ವಸ್ತು ತಾತ್ಪರ್ಯಕ್ಕೆ ನೀಡಲಾಗುತ್ತಿರುವ ಗಮನ ತೀರಾ ಅತ್ಯಲ್ಪ. ಹೀಗಾಗಿ ಕೆಲವು ಪಠ್ಯಪುಸ್ತಕಗಳಲ್ಲಿ ಪೂರ್ವಗ್ರಹಗಳನ್ನೂ ಸಾಂವಿಧಾನಿಕ ಚೌಕಟ್ಟಿನ ಹೊರಗಿರುವ ವಿಷಯಗಳನ್ನೂ ಕಾಣಬಹುದಾಗಿದೆ. ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಿಂದ ನಡೆಸಲ್ಪಡುವ ದೊಡ್ಡ ಸಂಖ್ಯೆಯ ಶಾಲೆಗಳಲ್ಲಿ ಮಕ್ಕಳನ್ನು ದೇಶದ ಸಾಂವಿಧಾನಿಕ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳ ದಿಕ್ಕಿನತ್ತ ಒಯ್ಯುವ ಬದಲಾಗಿ ಕೋಮುವಾದಿ ಯೋಚನೆಗಳ ದಿಕ್ಕಿನಲ್ಲಿ ಸಮಾಜೀಕರಿಸಲಾಗುತ್ತಿದೆ. ಸ್ವಾತಂತ್ರ್ಯದ ಆರಂಭದ ದಿನಗಳಲ್ಲಿ ಕ್ರಿಶ್ಚಿಯನ್ ವಿದ್ಯಾಸಂಸ್ಥೆಗಳು ಖಾಸಗಿ ಶಿಕ್ಷಣ ಕ್ಷೇತ್ರದ ಮುಂಚೂಣಿಯಲ್ಲಿದ್ದವಾದರೂ ಇಂದು ಅತ್ಯಂತ ಬಲಶಾಲಿ ಹಾಗೂ ಅತ್ಯಂತ ಹೆಚ್ಚು ಅನುದಾನ (ವಿದೇಶೀ ಹಣ) ಪಡೆಯುತ್ತಿರುವ ಖಾಸಗಿ ವಿದ್ಯಾಸಂಸ್ಥೆಗಳೆಂದರೆ ಸಂಘಪರಿವಾರದ ಅಂಗಸಂಸ್ಥೆಗಳು ನಡೆಸುತ್ತಿರುವ ಶಾಲೆಗಳು. ಸಂಘಪರಿವಾರದ ಈ ಶಾಲೆಗಳು ಸರಕಾರದ ನಿಯಂತ್ರಣದಲ್ಲಿ ಇಲ್ಲದಿರುವುದು ಒಂದೆಡೆಯಾದರೆ ಇನ್ನೊಂದೆಡೆ ಅಧಿಕೃತ ಸರಕಾರಿ ಪಠ್ಯಪುಸ್ತಕಗಳ ಬದಲಿಗೆ ಸಂವಿಧಾನವಿರೋಧಿ ವಿಷಯಗಳಿಂದ ಕೂಡಿದ ಪಠ್ಯಪುಸ್ತಕಗಳನ್ನು ಬಳಸುತ್ತಿರುವುದು ಅತ್ಯಂತ ಅಪಾಯಕಾರಿ ಹಾಗೂ ಗಂಭೀರ ಬೆಳವಣಿಗೆಯಾಗಿದೆ.

ಪಠ್ಯ ವಸ್ತುಗಳ ಆಯ್ಕೆ ಮತ್ತು ನಿರ್ದೇಶನಗಳಿಗಾಗಿ ಸ್ವತಂತ್ರ, ಸ್ವಾಯತ್ತ ನಿಯಂತ್ರಣ ವ್ಯವಸ್ಥೆಯೊಂದರ ತುರ್ತು ಅವಶ್ಯಕತೆಯಿದೆ. ಇತ್ತೀಚಿನ ಎರಡು ವಿದ್ಯಮಾನಗಳು ಇದಕ್ಕೆ ಇನ್ನಷ್ಟು ಪುಷ್ಟಿ ನೀಡುತ್ತವೆ. ಮೊದಲನೆಯದಾಗಿ, 'ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿಯ ರಾಷ್ಟ್ರೀಯ ಮಂಡಳಿ' (ಎನ್‌ಸಿಇಆರ್‌ಟಿ) 2000ನೆ ಇಸವಿಯಲ್ಲಿ ಮಾಡಿದ 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು' (ಎನ್‌ಸಿಎಫ್-2000) ಹಾಗೂ ತತ್ಪರಿಣಾಮವಾಗಿ ಶಿಕ್ಷಣನೀತಿಯಲ್ಲಾದ ವಿಸ್ತೃತ ಬದಲಾವಣೆ ಮತ್ತು ರಾಷ್ಟ್ರೀಯ ಶಿಕ್ಷಣ ಕಾರ್ಯವೊಂದನ್ನು ಸಿದ್ಧಪಡಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ ಎದ್ದ ವಿವಾದ. ಎರಡನೆಯದಾಗಿ, ಎನ್‌ಸಿಎಫ್-2000ನ್ನು ಅಳವಡಿಸುವ ಸಂದರ್ಭದಲ್ಲಿ ದೇಶದ ಶಿಕ್ಷಣ ನೀತಿಯ ಅತ್ಯುಚ್ಚ ಸಲಹಾ ಸಂಸ್ಥೆಯಾದ ಸಿಎಬಿಇಯ ಅನುಮತಿಯನ್ನು ಪಡೆದುಕೊಂಡಿರಲಿಲ್ಲ.

ಎನ್‌ಸಿಎಫ್-2000ನ್ನು ಮರುಪರಿಶೀಲನೆಗೊಳಪಡಿಸುವಂತೆ ಎನ್‌ಸಿಇಆರ್‌ಟಿಗೆ ಆದೇಶಿಸಲಾಗಿದೆ. ಆದರೆ ಕೇಂದ್ರ ಮಾಧ್ಯಮಿಕ ಶಿಕ್ಷಣ ಮಂಡಳಿ(ಸಿಬಿಎಸ್‌ಇ)ಯ ವ್ಯಾಪ್ತಿಯ ಹೊರಗಿರುವ, ರಾಜ್ಯ ಸರಕಾರಗಳಿಂದ ನಡೆಸಲ್ಪಡುವ ಮತ್ತು ಸರಕಾರೇತರ ಶಾಲೆಗಳ ಪಠ್ಯಪುಸ್ತಕ ಹಾಗೂ ಪೂರಕ ವಸ್ತುಗಳ ಬೃಹತ್ ಸಮಸ್ಯೆಗೆ ಇದರಿಂದ ಉತ್ತರ ಸಿಗಲಾರದು. ಏಕೆಂದರೆ ದೇಶಾದ್ಯಂತ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಕೇವಲ ಸಿಬಿಎಸ್‌ಇ ಶಾಲೆಗಳಲ್ಲಿ ಬಳಸಲಾಗುತ್ತಿದೆ. ಆದರೆ ಭಾರತದಲ್ಲಿರುವ ಸುಮಾರು 1,25,000 ಮಾಧ್ಯಮಿಕ ಮತ್ತು ಮೇಲ್‌ಮಾಧ್ಯಮಿಕ ಶಾಲೆಗಳ ಪೈಕಿ ಸಿಬಿಎಸ್‌ಇ ಶಾಲೆಗಳ ಸಂಖ್ಯೆ ಬರೀ 6200. ಹೀಗಾಗಿ ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳನ್ನು ಬದಲಾಯಿಸುವ ಅವಶ್ಯಕತೆ ಇರಬಹುದಾದರೂ ಕೇವಲ ಅಷ್ಟು ಮಾಡುವುದರಿಂದ ಸಮಸ್ಯೆ ಅಂತ್ಯವಾಗದು.

ಶಿಕ್ಷಣದ ಮುಖಾಂತರ ಸಮಾನತೆಯನ್ನು ತರಬೇಕೆಂದು ಸ್ವತಂತ್ರ ಭಾರತದ ಎಲ್ಲಾ ಕಾರ್ಯನೀತಿಗಳಲ್ಲೂ ಸ್ಪಷ್ಟವಾಗಿ ಹೇಳಲಾಗಿದೆ. ಪ್ರಜಾಸತ್ತಾತ್ಮಕ ಸಮಾಜದಲ್ಲಿ ಸಮಾನತೆಯನ್ನು ಬೆಳೆಸುವ ಅತ್ಯಂತ ಪ್ರಮುಖ ವಿಧಾನವೆಂದರೆ ಸರ್ವರಿಗೂ ಉತ್ತಮ, ವಿಮರ್ಶಾತ್ಮಕ ಶಿಕ್ಷಣವನ್ನು ಒದಗಿಸುವುದು. ವಿಮರ್ಶಾತ್ಮಕ ದೃಷ್ಟಿಕೋನ ಮತ್ತು ವಿವೇಚನಾ ಶಕ್ತಿಗಳನ್ನು ಬೆಳೆಸುವುದಕ್ಕೆ ಒತ್ತು ನೀಡುವ ಶಿಕ್ಷಣ ಸ್ವಾಭಾವಿಕವಾಗಿ ಸೆಕ್ಯೂಲರ್ ಆಗಿರುತ್ತದೆ. ಆದರೆ ಇದುವರೆಗೂ ಇದನ್ನು ಸರಿಯಾಗಿ ಕಾರ್ಯರೂಪಕ್ಕೆ ಇಳಿಸಲಾಗಿಲ್ಲ. 1986/92ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹೇಳಲಾಗಿರುವ ಸಾಂಸ್ಕೃತಿಕ ಮತ್ತು ಮೌಲ್ಯಾಧಾರಿತ ಶಿಕ್ಷಣವನ್ನು ಸಾರ್ವತ್ರಿಕವಾಗಿ ಜಾರಿಗೆ ತರಬೇಕಿದೆ. ಸಮಾನತೆ, ಸೋದರತೆ, ನ್ಯಾಯ ಮತ್ತು ಸ್ವಾತಂತ್ರ್ಯದ ಸಾಂವಿಧಾನಿಕ ಮೌಲ್ಯಗಳನ್ನು ಎಲ್ಲಾ ಪಠ್ಯಪುಸ್ತಕಗಳಲ್ಲಿ ಅಳವಡಿಸುವಂತೆ ನೋಡಿಕೊಳ್ಳಬೇಕಿದೆ. ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿ ಭಾರತದ ಸಾಮಾನ್ಯ ಸಾಂಸ್ಕೃತಿಕ ಪರಂಪರೆ, ಸಮಾನತಾವಾದ, ಪ್ರಜಾತಂತ್ರ, ಜಾತ್ಯತೀತತೆ, ಲಿಂಗ ಸಮಾನತೆ, ಪರಿಸರ ಸಂರಕ್ಷಣೆ, ಸಾಮಾಜಿಕ ಅಡೆತಡೆಗಳ ನಿರ್ಮೂಲನ, ಸಣ್ಣ ಕುಟುಂಬ ನಿಯಮ ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸುವ ಮೌಲ್ಯಗಳನ್ನು ಅಳವಡಿಸಬೇಕಾಗಿದೆ.

ಎಲ್ಲಾ ಶಿಕ್ಷಣಸಂಸ್ಥೆಗಳು ನೀಡುವ ವಿದ್ಯಾಭ್ಯಾಸ ಮುಕ್ತ ವಿಚಾರ ಮತ್ತು ಚಿಂತನೆಗಳನ್ನು ಪ್ರೋತ್ಸಾಹಿಸುವುದಕ್ಕೆ ಬದ್ಧತೆಯುಳ್ಳದ್ದಾಗಿರಬೇಕು. ಇದಕ್ಕೋಸ್ಕರ ಪಠ್ಯಪುಸ್ತಕಗಳು ಮುಕ್ತವಾಗಿರಬೇಕು ಮತ್ತು ಮಕ್ಕಳಲ್ಲಿ ವಿಚಾರ, ಭಿನ್ನಮತ ಮತ್ತು ಚರ್ಚೆಗಳ ಸೃಜನಾತ್ಮಕ ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸುವಂತಿರಬೇಕು. ಪಠ್ಯಪುಸ್ತಕಗಳ ಮೂಲಕ ಮಕ್ಕಳು ಸಮಾನ ನಾಗರಿಕತೆ ಹಾಗೂ ವೈವಿಧ್ಯತೆಗೆ ಗೌರವ ನೀಡುವ ಆದರ್ಶ ಮತ್ತು ಮೌಲ್ಯಗಳನ್ನು ಗ್ರಹಿಸಿಕೊಳ್ಳಬಹುದಲ್ಲದೆ ರಾಷ್ಟ್ರೀಯ ಅಸ್ಮಿತೆಯನ್ನು, ಸಂಸ್ಕೃತಿಯನ್ನು ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಬಹುದಾಗಿದೆ. ಇಂತಹ ಒಂದು ಪ್ರಕ್ರಿಯೆ ಕೆಲವು ವರ್ಷಗಳಿಂದ ನಡೆಯುತ್ತಿತ್ತು. ಆದರೆ ಎನ್‌ಸಿಎಫ್-2000 ಮೂಲಕ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಬದಲಾಯಿಸುವ ಯತ್ನಗಳು ಈ ಪ್ರಕ್ರಿಯೆಗೆ ದೊಡ್ಡ ಹಿನ್ನಡೆ ಉಂಟುಮಾಡಿವೆ. ಇವು ಅಲ್ಪಸಂಖ್ಯಾತರು, ಆದಿವಾಸಿಗಳು, ದಲಿತರು ಮತ್ತು ಮಹಿಳೆಯರ ವಿಷಯಗಳಲ್ಲಿ ಈಗಿರುವ ಅಸಮಾನತೆಗಳನ್ನು ಇನ್ನಷ್ಟು ಗಟ್ಟಿಗೊಳಿಸಿ ಅವನ್ನು ಮುಂದುವರಿಸಿಕೊಂಡು ಹೋಗುತ್ತಿವೆ. ಕೆಲವು ರಾಜಕೀಯ ಪಕ್ಷಗಳ ಮತ್ತು ನಿರ್ದಿಷ್ಟ ಸಂಸ್ಥೆಗಳ ಸಿದ್ಧಾಂತಗಳಿಗನುಗುಣವಾದ ಸಂಕುಚಿತ ರಾಜಕೀಯ ಉದ್ದೇಶಗಳಿಗಾಗಿ ಶಿಕ್ಷಣವನ್ನು ಬಳಸಿಕೊಳ್ಳುವ ಇಂತಹ ಪ್ರಯತ್ನಗಳಿಗೆ ಪೋಷಕರು ಸಮ್ಮತಿಸಿಲ್ಲ. ಮಾತ್ರವಲ್ಲ ಇದು ಶಿಕ್ಷಣತಜ್ಞರು ಹಾಗೂ ವಿದ್ವಾಂಸರ ನಡುವಿನಲ್ಲೂ ದಿಗಿಲು, ದಿಗ್ಭ್ರಾಂತಿ ಮೂಡಿಸಿದೆ. ಮತ್ತೊಂದು ಮುಖ್ಯ ವಿಷಯವೆಂದರೆ ಕೆಲವು ರಾಜ್ಯಗಳು ಈ ಪ್ರವೃತ್ತಿಯನ್ನು ಬಹಳ ಹಿಂದಿನಿಂದಲೂ ಆರಂಭಿಸಿದ್ದವು. ಎನ್‌ಸಿಎಫ್-2000ದ ನಂತರ ಚರಿತ್ರೆಯ ಕೋಮುವಾದೀಕರಣವಷ್ಟೆ ಅಲ್ಲ, ಮಹಿಳೆಯರ ಸ್ಥಾನಮಾನ, ವರ್ಗ, ಜಾತಿ, ಪರಿಸರ ಇತ್ಯಾದಿ ವಿಷಯಗಳಲ್ಲಿ ಕೂಡ ಪ್ರತಿಗಾಮಿ ಅಂಶಗಳನ್ನೊಳಗೊಂಡ ಈ ಪ್ರವೃತ್ತಿಗೆ ಮತ್ತಷ್ಟು ಬಲ ಬಂದಿದೆ ಮಾತ್ರವಲ್ಲ ಒಂದು ರೀತಿಯ ನ್ಯಾಯಸಮ್ಮತೆಯೂ ಸಿಕ್ಕಿದೆ.

2004ರಲ್ಲಿ ಪರಿಷ್ಕೃತಗೊಂಡ 'ಕೇಂದ್ರ ಶಿಕ್ಷಣ ಸಲಹಾ ಮಂಡಳಿ' ಪಠ್ಯಪುಸ್ತಕಗಳ ತನಿಖೆ ಹಾಗೂ ವಿಶ್ಲೇಷಣೆ ನಡೆಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿತು. ಸಮಿತಿ 2005ರಲ್ಲಿ ತಯಾರಿಸಿದ ಅಂತಿಮ ವರದಿಯಲ್ಲಿ ಹಲವಾರು ಉತ್ತಮ ಶಿಫಾರಸುಗಳಿವೆ. ಖಾಸಗಿ ವಿದ್ಯಾಸಂಸ್ಥೆಗಳೂ ಸೇರಿದಂತೆ ದೇಶಾದ್ಯಂತ ಎಲ್ಲಾ ವಿದ್ಯಾಸಂಸ್ಥೆಗಳಲ್ಲಿ ಬಳಸಲಾಗುವ ಪಠ್ಯಪುಸ್ತಕಗಳಲ್ಲಿ ತೂರಿಕೊಳ್ಳುವ ಅಪಾಯಕಾರಿ ಅಂಶಗಳನ್ನು ತಡೆಗಟ್ಟಿ ಪುಸ್ತಕಗಳ ಶಿಸ್ತು, ಗುಣಮಟ್ಟವನ್ನು ಕಾಪಾಡಿಕೊಳ್ಳುವ ಸಲುವಾಗಿ 'ರಾಷ್ಟ್ರೀಯ ಪಠ್ಯಪುಸ್ತಕ ಮಂಡಳಿ' ಎಂಬ ಸ್ಥಾಯಿ, ಸ್ವತಂತ್ರ ಹಾಗೂ ಸ್ವಾಯತ್ತ ಮಂಡಳಿಯೊಂದನ್ನು ರಚಿಸಬೇಕೆನ್ನುವುದು ಇವುಗಳಲ್ಲೊಂದು ಬಹುಮುಖ್ಯ ಶಿಫಾರಸು.

ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಕಂಡುಕೊಂಡ ವಾಸ್ತವಾಂಶಗಳು

ಭಾರತದ ಸರಕಾರೇತರ ಶಾಲೆಗಳು

ಭಾರತದಲ್ಲಿ ವಿವಿಧ ರೀತಿಯ ರಾಜ್ಯ ಮಟ್ಟದ, ರಾಷ್ಟ್ರ ಮಟ್ಟದ ಖಾಸಗಿ, ಧಾರ್ಮಿಕ, ಸಾಮಾಜಿಕ ಸಂಸ್ಥೆಗಳು ಶಿಕ್ಷಣಸಂಸ್ಥೆಗಳನ್ನು ನಡೆಸುತ್ತಿವೆ. ಅನುದಾನರಹಿತ ಶಿಕ್ಷಣಸಂಸ್ಥೆಗಳನ್ನೂ ಕಾಣಬಹುದು. ಕ್ರೈಸ್ತ ಧರ್ಮದ ವಿವಿಧ ಪಂಥಗಳು ತಮ್ಮದೇ ಪ್ರತ್ಯೇಕ ಶಾಲೆಗಳನ್ನು ಹೊಂದಿವೆ. ವಿವಿಧ ಮುಸ್ಲಿಂ ಮಂಡಳಿಗಳು/ ಗುಂಪುಗಳು ವಿವಿಧ ಮದ್ರಸಾಗಳನ್ನು ನಡೆಸುತ್ತಿವೆ. ಆರೆಸ್ಸೆಸ್‌ನ ವಿದ್ಯಾಭಾರತಿ



ಸಂಸ್ಥೆ ನಡೆಸುವ ಸರಸ್ವತಿ ಶಿಶುಮಂದಿರಗಳಿವೆ. ಪಠ್ಯಪುಸ್ತಕಗಳ ಆಯ್ಕೆಯ ವಿಷಯದಲ್ಲಿ ಇವುಗಳಿಗೆಲ್ಲಾ ಒಂದೇ ಸಮಾನ ನೀತಿಯೆಂಬುದೇ ಇಲ್ಲ. ಕೆಲವು ಶಾಲೆಗಳು ಸರಕಾರದಿಂದ ಅನುಮೋದಿತ ಪುಸ್ತಕಗಳನ್ನು ಆರಿಸುತ್ತವಾದರೆ, ಕೆಲವು ಶಾಲೆಗಳಲ್ಲಿ ಇತರ ಖಾಸಗಿ ಸಂಸ್ಥೆಗಳು ಪ್ರಕಟಿಸಿದ, ಸರಕಾರದ ಅನುಮೋದನೆ ಇಲ್ಲದ ಪಠ್ಯಪುಸ್ತಕ, ಗೈಡ್ ಮತ್ತು ವರ್ಕ್‌ಬುಕ್‌ಗಳನ್ನು ಬಳಸಲಾಗುತ್ತಿದೆ. ಸರಸ್ವತಿ ಶಿಶು ಮಂದಿರ, ದಾರುಲ್ ಉಲೂಮ್ ದಿಯೊಬಂದ್, ನದವತುಲ್ ಉಲಾಮ ಮುಂತಾದವುಗಳು ತಮ್ಮದೇ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತವೆ. ಆಂಗ್ಲೊ-ಇಂಡಿಯನ್ ಶಾಲೆಗಳ ಮಂಡಳಿ ಪಠ್ಯಕ್ರಮವನ್ನು ಮಾತ್ರ ವಿಧಿಸಿ ಪಠ್ಯಪುಸ್ತಕಗಳ ಆಯ್ಕೆಯನ್ನು ಆಯಾ ಶಾಲೆಗಳಿಗೆ ಬಿಟ್ಟುಕೊಟ್ಟಿದೆ. ಒಟ್ಟಾರೆಯಾಗಿ ಸರಕಾರೇತರ ಶಾಲೆಗಳಲ್ಲಿ ಉಪಯೋಗಿಸಲಾಗುವ ಪಠ್ಯಪುಸ್ತಕ ಮತ್ತಿತರ ಓದಿನ ಸಾಮಗ್ರಿಗಳಿಗೆ ಹೆಚ್ಚುಕಮ್ಮಿ ಯಾವುದೇ ನಿಯಂತ್ರಣ ಅಥವಾ ನಿಯಂತ್ರಣ ವ್ಯವಸ್ಥೆ ಇಲ್ಲವೆಂದೇ ಹೇಳಬಹುದು.

ಸಿಬಿಎಸ್‌ಇ ಪಠ್ಯಕ್ರಮ ಬಳಸದ ಸರಕಾರಿ ಶಾಲೆಗಳು

ಪಠ್ಯಪುಸ್ತಕ ನಿಯಂತ್ರಣಕ್ಕಾಗಿ ಹೆಚ್ಚುಕಮ್ಮಿ ಪ್ರತಿಯೊಂದು ರಾಜ್ಯದಲ್ಲೂ ಸರಕಾರಿ ಶಿಕ್ಷಣ ಮಂಡಳಿಯನ್ನು ಸ್ಥಾಪಿಸಲಾಗಿದೆ. ಕರ್ನಾಟಕದ ಶಾಲೆಗಳ ಕುರಿತಂತೆ ಸಮಿತಿಯ ವರದಿ ಏನು ಹೇಳುತ್ತದೆಂದು ನೋಡೋಣ. ಕರ್ನಾಟಕದಲ್ಲಿ 1ರಿಂದ 10ನೆ ತರಗತಿಯ ಎಲ್ಲಾ ಪಠ್ಯಪುಸ್ತಕಗಳನ್ನು 'ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ'

ಎನ್‌ಸಿಇಆರ್‌ಟಿ) ತಯಾರಿಸುತ್ತವೆ. ಪ್ರತಿ ವಿಷಯ/ತರಗತಿಗೆ ದರಂತೆ ತಜ್ಞರು ಮತ್ತು ಶಿಕ್ಷಕರಿಂದ ಕೂಡಿದ ಪ್ರತ್ಯೇಕ ಸ್ತಕ ಸಮಿತಿಗಳನ್ನು ರಚಿಸಲಾಗಿದೆ. ಹೀಗೆ ತಯಾರಿಸಿದ ಕರಡುಪ್ರತಿಗಳನ್ನು ಇನ್ನೊಂದು ಸಮಿತಿಯ ಮೂಲಕ ಶೀಲಿಸಿದ ನಂತರ ರಾಜ್ಯದ ಕೆಲವು ಆಯ್ದ ಸ್ಥಳಗಳಲ್ಲಿ ದು ವರ್ಷದ ಅವಧಿಗೆ ಬಿಡುಗಡೆಗೊಳಿಸಲಾಗುತ್ತದೆ. ಕ್ಕೆ ಬರುವ ಪ್ರತಿಕ್ರಿಯೆಗಳನ್ನು ಆಧರಿಸಿ ಪಠ್ಯಪುಸ್ತಕವನ್ನು ಷ್ಕರಿಸಿದ ತರುವಾಯ ಇಡೀ ರಾಜ್ಯದಲ್ಲಿ ಡುಗಡೆಗೊಳಿಸಲಾಗುತ್ತದೆ. ಎನ್‌ಸಿಎಫ್-2000ವನ್ನು ನುಸರಿಸಿ ರಾಜ್ಯದ ಪಠ್ಯಪುಸ್ತಕಗಳನ್ನು 2002ರಲ್ಲಿ ದಲಾಯಿಸಲಾಗಿತ್ತು. ಇದರ ನಂತರ ಸಮಾಜ ವಿಜ್ಞಾನ ಮತ್ತು ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಹಲವಾರು ಅನಪೇಕ್ಷ ಮ ಕೋಮುವಾದಿ ನಿಲುವುಗಳು ಕಂಡುಬಂದಾಗ ರ್ವಜನಿಕರು ರೊಚ್ಚಿಗೆದ್ದಿದ್ದರು. 2002ರಲ್ಲಿ ಡಿಎಸ್‌ಇ ಆರ್‌ಟಿ ಪಠ್ಯಪುಸ್ತಕಗಳ ಬಗ್ಗೆ ಜೇನ್ ಸಾಹಿ ಮತ್ತು ಬಿದಾ ವಿಜಯಸಿಂಹ ಜಂಟಿಯಾಗಿ ತಯಾರಿಸಿದ ರ್ನಾಟಕದ ಶಾಲಾ ಪಠ್ಯಪುಸ್ತಕಗಳಲ್ಲಿ ಕೋಮುವಾದಿ ಪಾತಗಳು" ಎಂಬ ವರದಿ ಹಿಂದಿನ ಪಠ್ಯಪುಸ್ತಕಗಳಲ್ಲಿದ್ದ ಕ್ರಮ ಅಂಶಗಳನ್ನು ಸಂಪೂರ್ಣವಾಗಿ ಕೈಬಿಟ್ಟ ಕುರಿತು ಹುತ್ತದೆ. ಬಿ.ಕೆ.ಚಂದ್ರಶೇಖರ್ ಶಿಕ್ಷಣ ಸಚಿವರಾದಾಗ ನ್ನೆಲ್ಲ ಬದಲಾಯಿಸಲಾಯಿತು.

ಕರ್ನಾಟಕದ ಒಂದು ಸರಕಾರಿ ಉರ್ದು ಮಾಧ್ಯಮ ಶಾಲೆಯಲ್ಲಿ 'ಇಸ್ಲಾಮೀ ಸಂಕೇತಗಳನ್ನು ಪ್ರದರ್ಶಿಸುತ್ತಿರು ದು' ಸಮಿತಿಯ ಗಮನಕ್ಕೆ ಬಂದಿದೆ. ಮತ್ತೊಂದು ಸರಕಾರಿ ಶಾಲೆಯಲ್ಲಿ ಮಕ್ಕಳು ದಿನಾಲೂ ಪೂಜೆ ಮಾಡಬೇಕೆಂದು ಹೇಳಲಾಗುತ್ತಿತ್ತು. ಅನೇಕ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯ/ಶುಪಾಲರ ಕಚೇರಿಯಲ್ಲಿ ಹಿಂದೂ ದೇವತೆಗಳ ಫೋಟೋಗಳನ್ನು ತೂಗುಹಾಕಿರುವುದೂ ಕಂಡುಬಂದಿದೆ.....

ಧಾರ್ಮಿಕ, ಸಾಮಾಜಿಕ ಸಂಸ್ಥೆಗಳ ಶಾಲೆಗಳು ವಿದ್ಯಾಭಾರತಿ ಶಾಲೆಗಳು

ದೇಶದ ಬಹುತೇಕ ವಿದ್ಯಾಭಾರತಿ ಶಾಲೆಗಳು ಎಸ್‌ಇ ಪಠ್ಯಕ್ರಮವನ್ನು ಅನುಸರಿಸುತ್ತಿವೆಯಾದರೂ ತಮ್ಮದೇ ಕೆಲವು ಪಠ್ಯಪುಸ್ತಕಗಳ ಮೂಲಕ ತ್ವದಲ್ಲಿರುವ ಪೂರ್ವಗ್ರಹಗಳನ್ನೂ ಪಕ್ಷಪಾತಗಳನ್ನೂ ಮುದ್ವೇಷವನ್ನೂ ಮುಂದುವರಿಸುತ್ತಿವೆ. 'ವಿದ್ಯಾಭಾರತಿ ಲ ಭಾರತೀಯ ಶಿಕ್ಷಾ ಸಂಸ್ಥಾನ' ಶಿಕ್ಷಕರಿಗೋಸ್ಕರ ಲ್ಲಿ ಕೆಲವನ್ನು ಹತ್ತವರಿಗೂ ಕೊಡಲಾಗುತ್ತದೆ) ಪ್ರಕಟಿಸುವ ದ್ರ ಸಂಹಿತೆಗಳಲ್ಲಿ ರವೀಂದ್ರನಾಥ ಠಾಕೂರ್ ಮಾತುಗಳ ಜತೆಗೆ ಕಾಕಾ ಕಾಲೆಲ್‌ಕರ್‌ರಂತಹವರ ಹೇಳಿಕೆಗಳನ್ನೂ ಸಲಾಗುತ್ತದೆ. ಆರೆಸ್ಸೆಸ್‌ನ ಅಂಗವಾದ 'ಬುಡಕಟ್ಟುಗಳ ತರ ಸಂಘ' (ಎಫ್‌ಟಿಎಸ್) ನಡೆಸುತ್ತಿರುವ ಏಕ ಶಾಲೆ (ಏಕಲ್ ವಿದ್ಯಾಲಯ)ಗಳಂತೂ ಸರಕಾರದಿಂದ ದಾನ ಮತ್ತು ವಿದೇಶಗಳಿಂದ ಸಹಾಯಧನ ಪಡೆಯುತ್ತ ದ ಗುಣವನ್ನೇ ಕಲಿಸುತ್ತವೆ. ಹಿಂದೂ ಧಾರ್ಮಿಕ ತಗಳಿಂದ ತುಂಬಿಹೋಗಿರುವ ಈ ಶಾಲೆಗಳ ರಿಗೆಲ್ಲ ಸಮುದಾಯಗಳಲ್ಲಿ ಕೋಮು ಸೌಹಾರ್ದ ದ, ಧರ್ಮದ ಆಧಾರದಲ್ಲಿ ಕೋಮುಗಳ ನಡುವಿನಲ್ಲಿ ತ್ವವನ್ನು ಸೃಷ್ಟಿಸುವ ಮತ್ತು ಮಕ್ಕಳಲ್ಲಿ ಮೂಲಭೂತ ರಾಜಕೀಯ ಸಿದ್ಧಾಂತವನ್ನು ಬೆಳೆಸುವ ತರಬೇತಿ ಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಆರೆಸ್ಸೆಸ್ ಪರವಾಗಿರುವ ಕೆಲವು ಗಳು ಕೊಳಚೆ ನಿವಾಸಿಗಳ ಸಾಕ್ಷರತಾ ಗಳಲ್ಲಿ ಪಠ್ಯಪುಸ್ತಕಗಳನ್ನು ವಿತರಿಸು ಉದಾಹರಣೆಗೆ, ಇನ್‌ಫೋಸಿಸ್ ಸರಕಾರಿ ಮತ್ತು ಸರಕಾರೇತರ ಗಳಲ್ಲಿ ಹೆಚ್ಚಾಗಿ ವಿತರಿಸುವ ಹಾನ್ ಭಾರತೀಯರು" ಪುಸ್ತಕ ಮುಖ್ಯವಾಗಿ ಪ್ರಕಟಿಸುತ್ತಿರುವುದೇ ಸ್ ಅಂಗಸಂಸ್ಥೆಯಾದ ರಾಷ್ಟ್ರೋತ್ಥಾನ ತು. ಈ ಪುಸ್ತಕಗಳಲ್ಲಿ ರಾಷ್ಟ್ರೀಯ ನಾಯಕರ ಸಾಲಿನಲ್ಲಿ ಗಾಂಧಿ, ರೂ ಚಿತ್ರಗಳ ಬದಲಿಗೆ ಆರೆಸ್ಸೆಸ್ ರ ಚಿತ್ರಗಳು ಕಂಡುಬರುತ್ತವೆ; ಒಬ್ಬ ಮುಸ್ಲಿಮನ ಚಿತ್ರವಿದೆ; ಸ ಅಥವಾ ಸಮಕಾಲೀನ ಯ ಒಂದು ಚಿತ್ರವೂ ಇಲ್ಲ. ಶಾಲೆಗಳಲ್ಲಿ ನಡೆಸಲಾಗುತ್ತಿರುವ ಇಂತಹ ಖಾಸಗಿ ಫೋಸಿಸ್ ಲೈಬ್ರರಿ ಮತ್ತು ರಾಮಕೃಷ್ಣ ಆಶ್ರಮದ ಕ್ರಮಗಳು) ಉಪಕ್ರಮಗಳಿಗೆ ರಾಜ್ಯಸರಕಾರ ನ್ನೊಂದು ಪರಿವೀಕ್ಷಣೆ ಅಥವಾ ಅನುಮೋದನೆಯ ಸನ್ನೂ ಇಟ್ಟುಕೊಂಡಿಲ್ಲ.....



ಮದ್ರಸಾಗಳು


ಕೆಲವು ಮದ್ರಸಾಗಳಲ್ಲಿ ಸರಕಾರಿ ಪಠ್ಯಕ್ರಮವನ್ನು ಅನುಸರಿಸಲಾಗುತ್ತಿದೆ. ದಾರುಲ್ ಉಲೂಮ್ ದಿಯೊಬಂದ್, ನದವತುಲ್ ಉಲಮಾಗಳು ಖಾಸಗಿಯಾಗಿ ಪಠ್ಯಪುಸ್ತಕಗಳನ್ನು ಪ್ರಕಟಿಸುತ್ತವೆ. ಈ ಪುಸ್ತಕಗಳು ಇತರ ಧರ್ಮಗಳ ಬಗೆಗೆ ಋಣಾತ್ಮಕ ವಿಷಯಗಳನ್ನು ಹೇಳುವುದಿಲ್ಲ, ಆದರೆ ಇಸ್ಲಾಮಿಗೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನೂ ಎಷ್ಟೊಂದು ವೈಭವೀಕರಿಸಲಾಗುತ್ತಿದೆಯೆಂದರೆ ವಿದ್ಯಾರ್ಥಿಗಳಲ್ಲಿ ಧಾರ್ಮಿಕ ಅಸ್ಮಿತೆಯನ್ನು ಇನ್ನಷ್ಟು ಹರಿತಗೊಳಿಸುವಂತಿವೆ. ಇವುಗಳಲ್ಲಿ ಕುರುಡು ನಂಬಿಕೆಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ ಹೊರತು ವೈಜ್ಞಾನಿಕ ಮತ್ತು ವಿಮರ್ಶಾತ್ಮಕ ಚಿಂತನೆಗಳಿಗೆ ಇಂಬಿಲ್ಲ, ಆದುದರಿಂದ ಇವುಗಳಿಂದ ಪ್ರತ್ಯೇಕತೆಯ ಭಾವನೆಗಳು ಹೆಚ್ಚುತ್ತವೆ. ಅದೇ ವೇಳೆ ಕೆಲವು ಪುಸ್ತಕಗಳು ಧನಾತ್ಮಕವಾಗಿದ್ದು ಪಕ್ಷಪಾತರಹಿತವೂ ಮುಕ್ತವೂ ಆಗಿವೆ. ಕೇವಲ ಸ್ತ್ರೀಯರಿಗಿರುವ ಪ್ರತ್ಯೇಕ ಪಠ್ಯಪುಸ್ತಕಗಳಾದ ಹುಸ್ನ್-ಎ-ಮುಆಶರತ್, ಉಮ್ಮತ್-ಎ-ಮುಸಲ್ಲಿಮಾ ಕಿ ಮೇಂ ಮುಂತಾದವುಗಳಲ್ಲಿ ಕೇವಲ ಮುಸ್ಲಿಂ ಮಹಿಳೆಯರನ್ನು ಉಲ್ಲೇಖಿಸಲಾಗಿದ್ದು ಇವು ಮಕ್ಕಳ ಸಂಸ್ಕೃತಿ ಮತ್ತು ದೃಷ್ಟಿ ವೈಶಾಲ್ಯವನ್ನು ತಗ್ಗಿಸಿ ಮುಖ್ಯವಾಹಿನಿಯ ಭಾಗವಾಗುವ ಭಾವನೆಗೆ ಅಡ್ಡಿಯಾಗುತ್ತವೆ. ಮಕ್ಕಳ ಉತ್ತಮ ಭವಿಷ್ಯದ ಹಿತದೃಷ್ಟಿಯಿರುವ ಸುಮಾರು ಶೇಕಡಾ 96ರಷ್ಟು ಮದ್ರಸಾಗಳು ತಮ್ಮ ಶಿಕ್ಷಣದಲ್ಲಿ ಆಧುನಿಕ ವಿಷಯಗಳನ್ನು ಆರಂಭಿಸಲಿಚ್ಛಿಸುತ್ತಿವೆ. ಕೆಲವು ರಾಜ್ಯಗಳಲ್ಲಿ ಸ್ಥಾಪಿಸಲಾಗಿರುವ ಮದ್ರಸಾ ಮಂಡಳಿಗಳಿಂದಾಗಿ ಇದು ಸ್ವಲ್ಪಮಟ್ಟಿಗೆ ಸಾಧ್ಯವಾಗಿದೆ. ಆದರೆ ಈ ರೀತಿಯಲ್ಲಿ ಗಣನೀಯ ಸಂಖ್ಯೆಯ ಮುಸ್ಲಿಂ ಮಕ್ಕಳಿಗೆ ಪ್ರತ್ಯೇಕ ಶಿಕ್ಷಣ ನೀಡುವುದರ ಒಂದು ಅಪಾಯವೆಂದರೆ ಈ ಮಕ್ಕಳಿಗೆ ಸಮಾಜದ ಇತರ ಮಕ್ಕಳೊಂದಿಗೆ ಸಂವಹನ, ಮಾತುಕತೆ ಮತ್ತು ಸಾಮಾಜಿಕ ಸಂಪರ್ಕಗಳ ಅವಕಾಶಗಳು ಕಡಿಮೆಯಾಗುತ್ತವೆ; ಪೂರ್ವಗ್ರಹಗಳನ್ನು, ಪಡಿಯಚ್ಚುಗಳನ್ನು ಹೆಚ್ಚಿಸುವ ಅವಕಾಶವನ್ನು ಕಲ್ಪಿಸುತ್ತದೆ; ಹಿಂದೂ, ಮುಸ್ಲಿಂ ಎಂಬ ಪ್ರತ್ಯೇಕ ಅಂಕಣಗಳ ಬೆಳೆಯುವಿಕೆಗೆ ಸಹಕರಿಸುತ್ತದೆ.....

ಖಾಸಗಿ ಪ್ರಕಾಶಕರ ಪಠ್ಯಪುಸ್ತಕಗಳು

ಖಾಸಗಿ ಪಠ್ಯಪುಸ್ತಕಗಳಿಗೆ ಹೆಚ್ಚುಕಮ್ಮಿ ಎಲ್ಲಾ ರಾಜ್ಯಗಳಲ್ಲಿ ಯಾವ ರೀತಿಯ ನಿಯಂತ್ರಣವೂ ಇಲ್ಲದಾಗಿದೆ. ಇವೆಲ್ಲವೂ ಕೇವಲ ಹಿಂದೂ ಸಂಸ್ಕೃತಿಯನ್ನೇ ಎತ್ತಿಹಿಡಿಯುವ ರೀತಿಯಲ್ಲಿವೆ. ಕರ್ನಾಟಕ ರಾಜ್ಯದ ವರದಿಯನ್ನಷ್ಟೆ ಎತ್ತಿಕೊಳ್ಳೋಣ. ಅಲ್ಲಿ ಸುಭಾಷ್ ಬುಕ್ ಏಜೆನ್ಸಿ ಪ್ರಕಟಿಸುವ 1ರಿಂದ 4ನೆ ತರಗತಿಯ 'ಬಾಲನೀತಿ' ಪಠ್ಯಪುಸ್ತಕಗಳು ಆರ್ಥಿಕ ಅಸಮಾನತೆಗಳನ್ನು ಗಟ್ಟಿಗೊಳಿಸುವಂತಿವೆ. ಇವುಗಳಲ್ಲಿ ಮುಖ್ಯವಾಗಿ ಹಿಂದೂ ಧರ್ಮದ ನೀತಿಗಳನ್ನು ಹೇಳಲಾಗಿದೆಯಲ್ಲದೆ ಉದಾಹರಣೆಗಳನ್ನು ಹಿಂದೂ ಪೌರಾಣಿಕ ಗ್ರಂಥಗಳಿಂದ ನೀಡಲಾಗಿದೆ, ಪರಿಸರ ಸಂರಕ್ಷಣೆಯ ವಿಷಯದಲ್ಲಿ ಒಂದು ಶಬ್ದವೂ ಕಾಣಸಿಗುವುದಿಲ್ಲ, ಮಂಗಳೂರಿನ ಗದಗ ಪ್ರಕಟಣೆಯ ಕನ್ನಡ ಮತ್ತು ಸಮಾಜ ಶಾಸ್ತ್ರದ 'ಮೋಹನ' ಮತ್ತು 'ಆನಂದ' ಗೈಡ್‌ಗಳಲ್ಲಿ ಗಣನೀಯ ಮಟ್ಟದ ಲಿಂಗ ತಾರತಮ್ಯ ಮತ್ತು ಅತ್ಯಧಿಕ ಪ್ರಮಾಣದ ಹಿಂದೂ ಉಲ್ಲೇಖಗಳಿವೆ. ಅಲ್ಲದೆ ಮುಸ್ಲಿಮರು ಹಿಂದೂಗಳನ್ನು ಗುಲಾಮರನ್ನಾಗಿ ಮಾಡಿದ್ದರೆಂದು ಕೀಳಾಗಿ ಚಿತ್ರಿಸಲಾಗಿದೆ. ಬೆಂಗಳೂರಿನ 'ಕನ್ನಡ ಪರಿಮಳ'ದಲ್ಲಿ 2ರಿಂದ 5ನೆ ತರಗತಿಗಾಗಿರುವ ನೀತಿಶಾಸ್ತ್ರ/ಸಂಸ್ಕೃತಿ ವಿಷಯದ ಪಾಠಗಳಿವೆ. ಇವುಗಳಲ್ಲಿರುವ ಮೌಲ್ಯಗಳೆಲ್ಲವುಗಳ ಮೂಲ ಹಿಂದೂ ಪುರಾಣಗಳು ಮತ್ತು ಹಿಂದೂ ಧರ್ಮ. ಇವುಗಳಲ್ಲಿ ಕೇವಲ ಹಿಂದೂ ಹಬ್ಬಗಳನ್ನೂ ಹಿಂದೂ ದೇವರುಗಳನ್ನೂ ಉಲ್ಲೇಖಿಸಲಾಗಿದೆ. ಈ ಪುಸ್ತಕಗಳಲ್ಲಿ ವಾಕ್ಯರಚನೆ ಹೇಗಿದೆಯೆಂದರೆ ಭಾರತೀಯರನ್ನು ಹಿಂದೂಗಳು ಮತ್ತು 'ಇತರ'ರೆಂದು ಪ್ರತ್ಯೇಕಿಸಲಾಗಿದೆ.....

ಸಮಿತಿಯ ವರದಿ ಎತ್ತಿ ತೋರಿಸುವ ಕೆಲವು ವಿಷಯಗಳು

ಸಮಿತಿಯಿಂದ ನಡೆಸಲಾದ ಈ ವಿಶ್ಲೇಷಣೆ ಎರಡು ವಿಭಿನ್ನ ರೀತಿಯ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುತ್ತದೆ. ಮೊದಲನೆಯದಾಗಿ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳ ಶಾಲೆಗಳಲ್ಲಿ, ಅದರಲ್ಲೂ ವಿಶೇಷವಾಗಿ ಆರೆಸ್ಸೆಸ್ ಅಂಗಸಂಸ್ಥೆಗಳ ಶಾಲೆಗಳಲ್ಲಿ ಬಳಸಲಾಗುವ ಪಠ್ಯಪುಸ್ತಕಗಳಲ್ಲಿ ತುಂಬಿರುವ ಕೊಳಕು ಕೋಮುವಾದಿ ಪ್ರಚಾರ. ಎರಡನೆಯದಾಗಿ ಕೆಲವು ಮಾರ್ಮಿಕ, ಸೂಕ್ಷ್ಮ ವಿಷಯಗಳು.



ಉದಾ: ಮಧ್ಯಮವರ್ಗದ ಬದುಕನ್ನೆ ಒಂದು ಸಮರೂಪದ ಆದರ್ಶವನ್ನಾಗಿಸುವ ಕರ್ನಾಟಕ, ಕೇರಳದ ಪಠ್ಯಪುಸ್ತಕಗಳು.

ಮೊದಲನೆಯ ಸಮಸ್ಯೆ

ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳು ಪಠ್ಯಪುಸ್ತಕಗಳನ್ನು ತಯಾರಿಸುತ್ತಿರುವಾಗ ಸರಕಾರಿ ಪಠ್ಯಪುಸ್ತಕಗಳಲ್ಲಿರುವ ಚರಿತ್ರೆಗೆ 'ಪೂರಕ' ಅಂಶಗಳನ್ನು ಸೇರಿಸುವ ಮತ್ತು 'ತಿದ್ದುವ' ಕೆಲಸ ನಡೆಯುತ್ತದೆ. ಉದಾ: ಗಾಂಧಿ ಮತ್ತು ನೆಹರೂ ರಾಷ್ಟ್ರೀಯ ನಾಯಕರೆಂದು ಹೇಳುವ ಜೊತೆಜೊತೆಗೆ ಹಿಂದೂತ್ವದ ಮುಖಂಡರಿಗೂ ಅಷ್ಟೇ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಸ್ವಾತಂತ್ರ್ಯ ಹೋರಾಟದ ಮುಖ್ಯವಾಹಿನಿಯಿಂದ ಹೇಗೆ ಮುಸ್ಲಿಂ ಕೋಮುವಾದಿ ಮುಖಂಡರು ಪ್ರತ್ಯೇಕಿಸಲ್ಪಟ್ಟಿದ್ದರೋ ಅದೇರೀತಿ ಹಿಂದೂತ್ವ ಮುಖಂಡರೂ ಸ್ವಾತಂತ್ರ್ಯ ಹೋರಾಟದಿಂದ ಹೊರಗುಳಿದಿದ್ದರೆಂಬುದು ಸರ್ವವಿದಿತ. ಆದುದರಿಂದ ಅಂತಹ ಮುಖಂಡರಿಗೆ ನೆಹರೂ, ಗಾಂಧಿಯವರಷ್ಟೆ ಸ್ಥಾನಮಾನ ನೀಡುವುದು ಚಾರಿತ್ರಿಕ ಸತ್ಯಗಳನ್ನು ತಿರುಚಿದಂತೆ. ಹಿಂದೂತ್ವ ಮುಖಂಡರ ಉದ್ದೇಶ ಜನರನ್ನು ವಿಭಜಿಸುವುದಾಗಿತ್ತಲ್ಲದೆ ಒಂದುಗೂಡಿಸುವುದಾಗಿರಲಿಲ್ಲ. ಹೀಗಾಗಿ ಇಂತಹ ವ್ಯಕ್ತಿಗಳು ಜಾತ್ಯತೀತ ಗಣತಂತ್ರವೊಂದರ ಪಠ್ಯಪುಸ್ತಕಗಳಲ್ಲಿ ಹೀರೊಗಳಾಗಿ ಬಿಂಬಿಸಲ್ಪಡಕೂಡದು.

ಈ ಚರಿತ್ರೆಯ ಪಠ್ಯಪುಸ್ತಕಗಳಲ್ಲಿ ಸತ್ಯ, ಕಲ್ಪನೆ ಮತ್ತು ಪುರಾಣಗಳ ನಡುವೆ ವ್ಯತ್ಯಾಸಗಳೇ ಇಲ್ಲ. ಈ ಪಠ್ಯಪುಸ್ತಕಗಳ ಪ್ರಧಾನ ಗುರಿ ಭಾರತ ಹಿಂದಿನಿಂದಲೂ ಒಂದು ಹಿಂದೂ ರಾಷ್ಟ್ರವಾಗಿತ್ತೆನ್ನುವ ಮತ್ತು ಹಿಂದೂ ಕೋಮುವಾದಿ ಕಲ್ಪನೆಯನ್ನು ಮಕ್ಕಳಲ್ಲಿ ತುಂಬಿಸಿ ಅದನ್ನು ಹರಡಿಸುವುದಾಗಿದೆ. ಹಿಂದೂ ರಾಜರ ಆಳ್ವಿಕೆಯಲ್ಲಿ ಭಾರತ ಅತ್ಯಂತ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತಲ್ಲದೆ ಆ ಕಾಲಾವಧಿಯಲ್ಲಿ, ಅರ್ಥಾತ್ ಮುಸ್ಲಿಂ ಆಡಳಿತಕ್ಕೆ ಹಿಂದಿನ ಕಾಲಾವಧಿಯಲ್ಲಿ ಅತ್ಯಂತ ಮಹತ್ತರ ಸಾಧನೆಗಳನ್ನೂ ಮಾಡಲಾಯಿತೆಂದು ಬಿಂಬಿಸಲಾಗಿದೆ. ಭಾರತವು ವಿದೇಶೀಯರ ಆಕ್ರಮಣ ಮತ್ತು ದಾಳಿಗಳಿಗೆ ತುತ್ತಾದ ಒಂದು ಬಲಿಪಶು ಎನ್ನುವ ಸಂಕುಚಿತ ದೃಷ್ಟಿಕೋನದ ಚಿತ್ರಣಗಳನ್ನು ನೀಡಲಾಗಿದೆ. ಬಹಳ ಪ್ರಾಚೀನ ಕಾಲದಿಂದಲೂ ಭಾರತ ಒಂದು ಬಹುಸಂಸ್ಕೃತಿ, ಬಹುಧರ್ಮಗಳ ಸಮ್ಮಿಳಿತ ಸಮಾಜವಾಗಿತ್ತೆಂಬ ವಿಷಯಕ್ಕೆ ಹೆಚ್ಚಿನ ಒತ್ತು ನೀಡಲಾಗಿಲ್ಲ, ತನ್ಮೂಲಕ ಈ ಪುಸ್ತಕಗಳು ಭವಿಷ್ಯದ ಪೀಳಿಗೆಗಳ ಮನಸ್ಸನ್ನು ಸಂಕುಚಿತಗೊಳಿಸಿ ಅವರನ್ನು ಪರಮತ ಅಸಹಿಷ್ಣುತೆಯ ಚಿಂತನೆಗಳತ್ತ ದೂಡುತ್ತವೆ.

ಖಾಸಗಿ ಪ್ರಕಾಶಕರ ಪುಸ್ತಕಗಳು ಕೂಡ ಸಾಂವಿಧಾನಿಕ ಮೌಲ್ಯಗಳಿಗೆ ತಿಲಾಂಜಲಿಯಿತ್ತಿವೆ. ಚರಿತ್ರೆ, ಭೂಗೋಳದ ಪಾಠಗಳಲ್ಲಿ ಸತ್ಯಾಂಶಗಳು, ಕಲ್ಪನೆಗಳು, ದಂತಕತೆಗಳು ಒಟ್ಟೊಟ್ಟಿಗೆ ಸೇರಿಕೊಂಡಿವೆ. ಅವು ಹಿಂದೂ ಮತ್ತು ಮುಸ್ಲಿಂ ಎಂಬ ಪ್ರತ್ಯೇಕತೆಯ ಗೋಡೆಗಳನ್ನು ಬೆಳೆಸುವ ರೀತಿಯಲ್ಲಿವೆ. ಮುಸ್ಲಿಂ ಲೀಗ್ ಒಂದು ಕೋಮುವಾದಿ ಸಂಘಟನೆಯೆಂದು ಸರಿಯಾಗಿ ಹೇಳುವ ಈ ಪಠ್ಯಪುಸ್ತಕಗಳು ಅದೇ ರೀತಿಯಲ್ಲಿ ಆರೆಸ್ಸೆಸ್ ಕೂಡ ಒಂದು ಕೋಮುವಾದಿ ಸಂಘಟನೆಯೆಂದು ಹೇಳುವುದೇ ಇಲ್ಲ, ಇತಿಹಾಸದ, ಪೌರಾಣಿಕ ವಿಷಯಗಳಲ್ಲಿ ಮತ್ತು ಹಿಂದಿ ಸಾಹಿತ್ಯದಲ್ಲಿ ಮುಸ್ಲಿಮರನ್ನು ಮತ್ತು ಕ್ರೈಸ್ತರನ್ನು ಋಣಾತ್ಮಕವಾಗಿ ಚಿತ್ರಿಸಲಾಗಿದೆ. ಬ್ರಾಹ್ಮಣ ಸಮುದಾಯಕ್ಕೆ ಅನಗತ್ಯ ಪ್ರಾಮುಖ್ಯತೆಯನ್ನು ಕೊಡಲಾಗಿದೆ.

ಎರಡನೆಯ ಸಮಸ್ಯೆ

ಜಾತಿ ತಾರತಮ್ಯ, ವರ್ಗ ಭೇದಗಳ ವಿಷಯಕ್ಕೆ ಬಂದರೆ ರಾಜ್ಯ ಸರಕಾರಗಳ ಪುಸ್ತಕಗಳೂ ಸೇರಿದಂತೆ ಯಾವೊಂದು ಪಠ್ಯಪುಸ್ತಕವೂ ಸರಿಯಾಗಿಲ್ಲ, ಇವುಗಳಲ್ಲಿ ಅನುಚಿತ, ಅಸಭ್ಯ ಹಾಗೂ ಕೆಲವೊಮ್ಮೆ ಅವಮಾನಕರ ಅಂಶಗಳೂ ಕಂಡುಬಂದಿವೆ. ಶ್ರೇಷ್ಠ ವರ್ಗಗಳ ಮತ್ತು ಪುರುಷ ಪ್ರಧಾನ ದೃಷ್ಟಿಕೋನ ದಿಂದ ಬರೆದಂತಹ ಈ ಪುಸ್ತಕಗಳಲ್ಲಿ ಭಾರತದ ಗ್ರಾಮಗಳು, ದಲಿತರು, ಆದಿವಾಸಿಗಳು, ಕಾರ್ಮಿಕರು, ಮಹಿಳೆಯರು ಮುಂತಾದ ವಿಷಯಗಳಿಗೆ ಸಾಕಷ್ಟು ಪ್ರಾಮುಖ್ಯತೆಯನ್ನು ನೀಡಲಾಗಿಲ್ಲ, ಸರಕಾರಿ ಪಠ್ಯಪುಸ್ತಕಗಳು ಕೂಡ ಧಾರ್ಮಿಕ, ಪ್ರಾದೇಶಿಕ ಮತ್ತು ಲಿಂಗ ಪಕ್ಷಪಾತಗಳನ್ನು ಒಂದು ಸೂಕ್ಷ್ಮವಾದ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುತ್ತಿವೆ.

ಉಪಸಂಹಾರ

ಇಂತಹ ಕೊಳಕು ಪಠ್ಯಪುಸ್ತಕಗಳು ಅಸಂಬದ್ಧ ಮತ್ತು ನಿರಾಧಾರ ವಿಷಯಗಳನ್ನು ಸತ್ಯಾಂಶಗಳೊಂದಿಗೆ ಸೇರಿಸಿ ವೈಜ್ಞಾನಿಕ ಗುಣಮಟ್ಟವನ್ನೂ ಶಿಕ್ಷಣದ ಪಾಂಡಿತ್ಯದ ಮಟ್ಟವನ್ನೂ ತಗ್ಗಿಸುವುದರಿಂದ ಅಂತಿಮವಾಗಿ ದೇಶದ ಭವಿಷ್ಯಕ್ಕೆ ಅಪಾರ ಹಾನಿ ಸಂಭವಿಸುತ್ತಿದೆ. ಸಂವಿಧಾನದ ಆಶಯವಾಗಿರುವ ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಗಣತಾಂತ್ರಿಕ ಭಾರತವನ್ನು ನಾಶಪಡಿಸುವಂತಹ

ವಿಶೇಷ ಲೇಖನ

● ಸುರೇಶ್ ಭಟ್

ಈ ಅತ್ಯಂತ ಅಪಾಯಕಾರಿ ಬೆಳವಣಿಗೆಗಳನ್ನು ಸಾಧ್ಯವಾದಷ್ಟು ಶೀಘ್ರದಲ್ಲಿ ಹತ್ತಿಕ್ಕಬೇಕಾಗಿದೆ.

ನಮ್ಮ ಮಕ್ಕಳಿಗಾಗಿ ಉತ್ತಮ ಪಠ್ಯಪುಸ್ತಕಗಳನ್ನು ತಯಾರಿಸುವ ಚಾರಿತ್ರಿಕ ಜವಾಬ್ದಾರಿ ನಮ್ಮದಾಗಿದೆ. ನಮ್ಮ ಮಕ್ಕಳ ಭವಿಷ್ಯ ನಿಂತಿರುವುದು ಸಾಂಸ್ಕೃತಿಕ ವೈವಿಧ್ಯತೆಗೆ ಗೌರವ ತೋರಿಸುವಲ್ಲಿ, ಈ ದೇಶದಲ್ಲಿರುವ ವಿವಿಧ ಸಾಮಾಜಿಕ, ಆರ್ಥಿಕ ಮತ್ತು ಭಾಷಿಕ ಗುಂಪುಗಳು ರಾಷ್ಟ್ರದ ಬಳುವಳಿಯನ್ನು ಸಮಾನವಾಗಿ ಹಂಚಿಕೊಳ್ಳುವವರೆಂಬುದನ್ನು ಗುರುತಿಸಿ ಅದಕ್ಕೆ ಬದ್ಧರಾಗುವಲ್ಲಿ, ನಮ್ಮ ಪಠ್ಯಪುಸ್ತಕಗಳು ಈ ಬಹುಮುಖ್ಯ ಅಂಶವನ್ನು ಮತ್ತೊಮ್ಮೆ ಖಡಾಖಂಡಿತವಾಗಿ ದೃಢೀಕರಿಸಬೇಕು. ಭಾರತೀಯ ಸಮಾಜದ ಸಮ್ಮಿಳಿತ ಮತ್ತು ಬಹುತ್ವ ಸಂಸ್ಕೃತಿಯ ಸ್ವಭಾವವನ್ನು ಬಹಳ ದೃಢವಾಗಿ, ಶಕ್ತಿಯುತವಾಗಿ ಒತ್ತಿ ಹೇಳಬೇಕು ಮತ್ತು ಭಾರತದ ವಿವಿಧ ಸಂಸ್ಕೃತಿಗಳ, ಸಂಪ್ರದಾಯಗಳ ನಡುವಿನ ಕೊಡುಕೊಳ್ಳುವಿಕೆಗಳು, ಅದರ ಬಹು ಜನಾಂಗ, ಬಹು ಧರ್ಮಗಳ ಗುಣ, ಅದರಲ್ಲಿರುವಂತಹ ಧಾರ್ಮಿಕ ಮತ್ತಿತರ ಬರುಕುಗಳು ಮತ್ತು ಅದರ ವೈಜ್ಞಾನಿಕ, ವೈಚಾರಿಕ, ಆಧ್ಯಾತ್ಮಿಕ ಹಾಗೂ ಧಾರ್ಮಿಕ ಸಂಪ್ರದಾಯಗಳ ಕುರಿತು ತಿಳಿಸಬೇಕು.

ಭಾರತೀಯ ಸಮಾಜದಲ್ಲಿ, ವಿಶೇಷವಾಗಿ ಕರಾವಳಿ ಜಿಲ್ಲೆಗಳಲ್ಲಿ, ಕಂಡುಬರುತ್ತಿರುವ ಇತ್ತೀಚಿನ ಸಮಸ್ಯೆಗಳ ಒಂದು ಪ್ರಧಾನ ಮೂಲ ಇಂತಹ ದೋಷಯುಕ್ತ ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳಲ್ಲಿದೆಯೆಂದು ದೃಢವಾಗಿ, ನಿಸ್ಸಂದೇಹವಾಗಿ ಹೇಳಬಹುದು. ನಮ್ಮ ಸಂಸದರು ಭವಿಷ್ಯದ ಪೀಳಿಗೆಗಳ ಕುರಿತು ಆಳವಾಗಿ ಚಿಂತಿಸಬೇಕಾಗಿದೆ. ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ಸಮಿತಿ 2005ರಲ್ಲಿ ನೀಡಿರುವ ಶಿಫಾರಸುಗಳನ್ನು ಅತ್ಯಂತ ತುರ್ತಾಗಿ ಅನುಷ್ಠಾನಕ್ಕೆ ತರಬೇಕಾಗಿದೆ. ಪ್ರಪ್ರಥಮವಾಗಿ ಕೇಂದ್ರದಲ್ಲಿ 'ರಾಷ್ಟ್ರೀಯ ಪಠ್ಯಪುಸ್ತಕ ಮಂಡಳಿ' ಮತ್ತು ರಾಜ್ಯಗಳಲ್ಲಿ 'ರಾಜ್ಯ ಪಠ್ಯಪುಸ್ತಕ ಮಂಡಳಿ' ಎನ್ನುವ ನಿಯಂತ್ರಣ ಪ್ರಾಧಿಕಾರಗಳನ್ನು ರಚಿಸಿ ಅವಕ್ಕೆ ಸೂಕ್ತ ಅಧಿಕಾರಗಳನ್ನು ನೀಡಬೇಕಾಗಿದೆ. 2009ರ ಮಹಾಚುನಾವಣೆಗಳ ಸಂದರ್ಭದಲ್ಲಿ ದೇಶದ ಜ್ವಲಂತ ಸಮಸ್ಯೆಗಳಲ್ಲೊಂದಾದ ದೋಷಯುಕ್ತ ಶಿಕ್ಷಣನೀತಿಯ ಬಗ್ಗೆ ಕನಿಷ್ಠ ಒಬ್ಬ ರಾಜಕಾರಣಿಯ ಕ್ಷೀಣ ಧ್ವನಿಯಾದರೂ ಕೇಳಿಸಿದೆಯೇ?

ಆಧಾರ: ಕೇಂದ್ರ ಶಿಕ್ಷಣ ಸಲಹಾ ಮಂಡಳಿಯ ವರದಿ-2005. 'ಕಮ್ಯೂನಲಿಸಂ ಕಾಂಬ್ಯಾಟ್' ಏಪ್ರಿಲ್. 2009

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 20



ಅಕ್ಷರ ರೂಪ: **ಅಕ್ಷತಾ ಕೆ.**

ಚಂದ್ರಗುತ್ತಿ ಬೆತ್ತಲು ಸೇವೆ ವಿರೋಧಿಸಿ...

ಜಾತಿ ಮತ್ತು ವರ್ಗದ ಹೆಸರಿನಲ್ಲಿ ನಡೆಯುವ ತಾರತಮ್ಯವನ್ನು ಚಿಕ್ಕವನಿದ್ದಾಗಲಿಂದಲೂ ನನ್ನದೇ ಮಾರ್ಗದಲ್ಲಿ ವಿರೋಧಿಸುತ್ತಲೇ ಬಂದವನು ನಾನು. ಜಾತಿ ತಾರತಮ್ಯಗಳನ್ನು ನಾನು ಸ್ವತಃ ಅನುಭವಿಸದಿದ್ದರೂ ನಮ್ಮ ಮನೆಯಲ್ಲಿ ನಮ್ಮೂರಲ್ಲಿ ಮತ್ತು ಎಲ್ಲ ಕಡೆಯು ಆ ರೀತಿಯ ತಾರತಮ್ಯ ನಡೆಯುತ್ತಲೇ ಇರುವುದನ್ನು ಕಂಡು ನೊಂದಿದ್ದೇನೆ. ನಾನು ಚಿಕ್ಕವನಿದ್ದಾಗ ನಮ್ಮ ಮನೆಯಲ್ಲಿ ಸಿದ್ದಮ್ಮ ಎಂಬುವವರ ಕುಟುಂಬ ಒಕ್ಕಲಿಗಿತ್ತು. ಸಿದ್ದಮ್ಮನನ್ನು ನಾವು ಮಕ್ಕಳೆಲ್ಲಾ ಅವ್ವ ಎಂದೆ ಕರೆಯುತ್ತಿದ್ದೆವು. ಆದರೆ ಅವರ ಮನೆಗ್ಹೋಗಿ ಏನಾದರೂ ತಿಂದು ಬಂದದ್ದು ಗೊತ್ತಾದರೆ ನಮ್ಮ ಅಮ್ಮ ಬಯ್ಯುತ್ತಿದ್ದರು. ಅವರ ಮನೆಯ ಒಳಗೆ ಹೋಗಬಾರದು, ಅಲ್ಲಿ ಏನೂ ತಿನ್ನಬಾರದು ಎಂದೆಲ್ಲ ತಾಕೀತು ಮಾಡುತಿದ್ದರು. ಅವರು ನಮಗಿಂತ ಕೆಳಜಾತಿಯಾಗಿದ್ದೇ ಇದಕ್ಕೆ ಕಾರಣ. ಆದರೆ ಅವ್ವನನ್ನು ಕಂಡರೆ ತುಂಬಾ ಪ್ರೀತಿಯಿದ್ದ ನನಗೆ ಇದರಿಂದ ತುಂಬಾ ನೋವಾಗುತ್ತಿತ್ತು. ಆ ಹಂತದಲ್ಲೆ ಕೆಳಜಾತಿ ಅಂತ ಕೀಳಾಗಿ ಕಾಣೋದು ತಪ್ಪು ಎನ್ನುವ ಭಾವನೆ ನನ್ನೊಳಗೆ ಗಟ್ಟಿಯಾಗಿದ್ದು.

ಒಮ್ಮೆ ನಮ್ಮೂರ ಈಶ್ವರ ದೇವಸ್ಥಾನದಲ್ಲಿ ಸಾಮೂಹಿಕ ಸತ್ಯನಾರಾಯಣಪೂಜೆ ಇಟ್ಟುಕೊಂಡಿದ್ರು. ಆಗತಾನೆ ಎಂಎ ಮುಗಿಸಿ ಊರಿಗೆ ಬಂದು ಮೇಷ್ಟ್ರಾಗಿದ್ದೆ. ಈ ಪೂಜೆಯ ನೇತೃತ್ವ ವಹಿಸಿದ್ದ ಊರಿನ ಹಿರಿಯರಲ್ಲಿ ನಮ್ಮ ಅಪ್ಪಯ್ಯನೂ ಒಬ್ಬರು. ಪೂಜೆಯ ನಂತರ ಎಲ್ಲರಿಗೂ ಪ್ರಸಾದದ ಹೆಸರಲ್ಲಿ ಊಟದ ವ್ಯವಸ್ಥೆ ಮಾಡಿದ್ರು. ಆದರೆ ಅಲ್ಲೆಲ್ಲೂ ದೇವಸ್ಥಾನದ ಹತ್ತಿರ ದಲಿತರಿಗೆ ಪ್ರವೇಶವಿಲ್ಲ. ನಾನು ಹೋಗಿ



ಸಾಮೂಹಿಕ ಪೂಜೆ ಅಂತಾದ್ಮೇಲೆ ಸಾಮೂಹಿಕ ಭೋಜನ ಆಗಬೇಕು. ದಲಿತರನ್ನು ಒಟ್ಟಿಗೆ ಕೂರಿಸ್ಕೊಂಡು ಊಟ ಹಾಕಬೇಕು ಎಂದು ಹೇಳಿದೆ. ನಮ್ಮ ಅಪ್ಪನಾದಿಯಾಗಿ ಯಾರೂ ಒಪ್ಪಲಿಲ್ಲ. ಕೊನೆ ಪಂಕ್ತಿಗೂ ಹಾಕಿ ಮಿಕ್ಕಿದರೆ ಅಷ್ಟನ್ನೂ ಅವರಿಗೆ ಕೊಡೋಣ ಅಂದ್ರು. ಎಷ್ಟು ವಾದಿಸಿದರೂ ಪ್ರಯೋಜನವಾಗಲಿಲ್ಲ. ನನಗೆ ಸಿಟ್ಟು ಬಂತು. ಅಲ್ಲೆ ನನ್ನ ಗೆಳೆಯರಾದ ಕಡಿದಾಳು ಮೋಹನ ಇದ್ದರು. ಅವರು ಕೂಡಾ ಇಂಥ ತಾರತಮ್ಯವನ್ನು ವಿರೋಧಿಸ್ತಿದ್ದವರೇ. ಅವರಿಗೆ "ನೀವು ನನ್ನ ಜೊತೆ ಇರ್ತೀರಾ? ಇವರ್‍ಯಾರು ಇವತ್ತು ಊಟ ಮಾಡಬಾರದು, ಹಾಗೆ ಮಾಡೋಣ" ಅಂದೆ. ಅವರು ಒಪ್ಪಿದರು. ಊಟಕ್ಕಾಗಿ ಸಿದ್ಧ ಪಡಿಸಿದ್ದ ಪಾಯಸದ ಕಡಾಯಿ ಮತ್ತು ಸಾರಿನ ಕಡಾಯಿ ಎರಡನ್ನೂ ಮಗುಚಿ ಹಾಕಿ "ಅಯ್ಯೋ ಸಾರು, ಪಾಯಸ ಚೆಲ್ತಾ ಇದ್ದಾರೆ" ಅಂತ ಅಲ್ಲಿದ್ದವರು ಕೂಗಿಕೊಳ್ಳುತ್ತಾ ಇದ್ದ ಹಾಗೆ ದೇವಸ್ಥಾನದ ಹಿಂದಿನ ಗದ್ದೆ ಏರಿ ಹಾರಿ ಓಡಿ ಹೋದ್ವಿ. ಊರಿನ ಎಲ್ರ ಬಾಯಲ್ಲೂ "ರಾಮಣ್ಣನವ್ರ ಮಗ ಹಿಂಗೆ ಮಾಡಿಬಿಟ್ಟ. ಅವನಂತೂ ಅದೇ ನಮೂನೆ. ಹೋಗ್ಲಿ ಮೋಹನಂಗೆ ಏನಾಗಿರಬಹುದು, ಇವನು ಅವನ ಜೊತೆಸೇರ್ಕೊಂಡು ದೇವರ ಪ್ರಸಾದನೇ ತಿನ್ನದಿದ್ದ ಹಾಗೆ ಮಾಡಿದ್ನಲ್ಲ" ಅಂತ ನಮಗೆ ಬಯ್ಯುವವರೇ.

ಕೃಷ್ಣಪ್ಪನವರು ದಲಿತ ಸಂಘರ್ಷ ಸಮಿತಿಯನ್ನು ಜಿಲ್ಲೆಯಲ್ಲಿ ಬೆಳೆಸುತ್ತಿದ್ದ ಸಂದರ್ಭದಲ್ಲಿ ನಾನು ಅದರಲ್ಲಿ ತೊಡಗಿಸಿಕೊಂಡೆ. ಕೃಷ್ಣಪ್ಪನವರು ಸಂಘಟನೆಯನ್ನು ವಿಶಾಲ ತಳಹದಿ ಮೇಲೆ ಕಟ್ಟಿದ್ದರು. ಈಗಿನಂತೆ ಆಗ ಡಿಎಸ್‌ಎಸ್ ಎಂದರೆ ದಲಿತರಿಗೆ ಮಾತ್ರ ಸೇರಿದ್ದು ಎಂದಾಗಿರಲಿಲ್ಲ. ಅಲ್ಲಿ ಎಲ್ಲ ಜಾತಿಯವರು ಇದ್ದರು. ಆಗ ಡಿಎಸ್‌ಎಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡ ಬಹುತೇಕರು 'ಮಹಿಳೆಯರಾದಿಯಾಗಿ ಎಲ್ಲ ಶೋಷಿತರು ದಲಿತರೇ' ಎಂಬ ಲೋಹಿಯಾ ಸಿದ್ಧಾಂತದಲ್ಲಿ ನಂಬಿಕೆಯಿಟ್ಟಿದ್ವಿ. ತೀರ್ಥಹಳ್ಳಿಯಲ್ಲಿ ಮೊದಲಿಗೆ ದಲಿತ ಸಂಘರ್ಷ ಸಮಿತಿಯನ್ನು ಕಟ್ಟಿದವರೇ ನಾವು. ಪೋಸ್ಟ್ ಇನ್ಸಪೆಕ್ಟರ್ ರಾಮಣ್ಣ ಅಂತಿದ್ರು. ಬಹುಶಃ ಅವರು ತೀರ್ಥಹಳ್ಳಿಯಲ್ಲಿ ದಲಿತರ ವರ್ಗದ ಮೊತ್ತ ಮೊದಲಿಗ ಸರ್ಕಾರಿ ನೌಕರರು. ಅವರ ತಮ್ಮ ನಾರಾಯಣ ಅಂತ ಭದ್ರಾವತಿಯ ವಿಎಸ್‌ಐಎಲ್‌ನಲ್ಲಿ ಕೆಲಸದಲ್ಲಿದ್ದರು. ಅವರಿಬ್ಬರ ನೇತೃತ್ವದಲ್ಲಿ ಸಂಘಟನೆ ಕಟ್ಟಿದ್ವಿ.

ದಲಿತ ಸಂಘರ್ಷ ಸಮಿತಿಯ ಪ್ರಮುಖ ಹೋರಾಟದಲ್ಲಿ ಚಂದ್ರಗುತ್ತಿ ಬೆತ್ತಲು ಸೇವೆ ವಿರೋಧಿ ಹೋರಾಟ ಪ್ರಮುಖವಾದದು. ಅದರಲ್ಲಿ ನಾನು ಪಾಲ್ಗೊಂಡಿದ್ದೆ. ಆ ದಿನದ ಹೋರಾಟದಲ್ಲಿ ತ್ರಿಶೂಲಧಾರಿಗಳಿಂದ ಬಚಾವಾಗಿ ಬಂದಿದ್ದೆ ಒಂದು ಘೋರ ಅನುಭವ. ನನಗೆ ಚಂದ್ರಗುತ್ತಿಗೆ ಹೋಗುವ ತನಕವೂ ಪರಿಸ್ಥಿತಿ ಇಷ್ಟು ಘೋರವಾಗಿರಬಹುದು ಎಂಬ ಕಲ್ಪನೆಯೇ ಇರಲಿಲ್ಲ. ದಿವಾಕರ ಹೆಗ್ಡೆಯ ಅಂಗಡಿಯಲ್ಲಿ ಎಲ್ಲರೂ ಸಭೆ ಸೇರಿದ್ದ ಸಂದರ್ಭದಲ್ಲಿ ಚಂದ್ರಗುತ್ತಿಯಲ್ಲಿ ನಡೆಯುವ ಬೆತ್ತಲೆ ಸೇವೆಯನ್ನು ವಿರೋಧಿಸಿ ಅದು ನಡೆಯದ ಹಾಗೆ ಮಾಡಬೇಕು ಎನ್ನುವ ವಿಷಯ ಚರ್ಚೆಗೆ ಬಂದು ಅಲ್ಲಿ ಸೇರಿದ್ದವರೆಲ್ಲ ಒಕ್ಕೊರಲಿನಿಂದ ಇದಕ್ಕೆ ಒಪ್ಪಿಗೆ ಕೊಟ್ವಿ. ಆಗ ಶಿವಮೊಗ್ಗದ ಬೃಂದಾವನ ಹೊಟೇಲ್ ಬಳಿ ಹೆಗ್ಡೆಯ ಅಂಗಡಿಯಿದ್ದು ಅವನು ಲಂಕೇಶ್ ಪತ್ರಿಕೆಯ ಡಿಸ್ಟ್ರಿಬ್ಯೂಟರ್ ಆಗಿದ್ದ. ಅವನ ಅಂಗಡಿ ಒಂಥರದಲ್ಲಿ ಪ್ರಗತಿಪರವಾಗಿ ಯೋಚಿಸುವ ಎಲ್ಲರು ಸೇರುವ ಜಾಗವಾಗಿತ್ತು. ಶಿವಮೊಗ್ಗದಲ್ಲಿ ಆ ಸಂದರ್ಭದಲ್ಲಿ ನಡೆದ ಹಲವು ಪ್ರಗತಿಪರ ಚಳವಳಿ, ಸಂವಾದ, ಚರ್ಚೆಗಳ ಹುಟ್ಟಿಗೆ ಈ ಅಂಗಡಿಯಲ್ಲಿ ಸೇರುತಿದ್ದವರು ಕಾರಣಕರ್ತರಾಗಿದ್ದರು. ಬೆತ್ತಲೆ ಸೇವೆ ಮಾಡೋರೆಲ್ಲ ಕೆಳಜಾತಿಯ ಹೆಣ್ಣು ಮಕ್ಕಳೇ, ಸೇವೆ ಹೆಸರಿನಲ್ಲಿ ಅವರ ಶೋಷಣೆ ನಡಿತಿರುವುದರ ಬಗ್ಗೆ ಚರ್ಚೆಯಾಗಿ, ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಚಂದ್ರಗುತ್ತಿ ಜಾತ್ರೆ ದಿನ ಬೆತ್ತಲೆಸೇವೆ ನಡೆಯೋದನ್ನು ವಿರೋಧಿಸಿ ಚಳವಳಿ ಮಾಡೋದು ಎಂದು ನಿರ್ಧಾರ ಆಯಿತು. ಆರ್‌ಎಸ್‌ಎಸ್‌ನವರು ಬೆತ್ತಲೆಸೇವೆಯ ಪರ ಇರುವುದರಿಂದ ಅವರು ನಮ್ಮ ಹೋರಾಟಕ್ಕೆ ತಡೆಯೊಡ್ಡುವ ಬಗ್ಗೆಯೂ ಚರ್ಚೆ ನಡೆಯಿತು. ಕೃಷ್ಣಪ್ಪನವರ ನೇತೃತ್ವದಲ್ಲಿ ಬೆತ್ತಲೆ ಸೇವೆ ವಿರೋಧಿ ಹೋರಾಟದ ಕರಪತ್ರಗಳು ಎಲ್ಲ ಕಡೆಯು ಹಂಚಿಕೆಯಾದವು. ಜಾತ್ರೆಯ ಕೊನೆ ದಿನ ಬೆತ್ತಲೆ ಸೇವೆ ನಡೆಯೋದು; ಆವತ್ತೇ ಅಲ್ಲಿ ಎಲ್ಲರೂ ಸೇರುವ ನಿರ್ಧಾರ ಆಯಿತು. ನಾನು ನಮ್ಮ ಪಕ್ಕದ ಮನೆಯ ಕೇಶವನನ್ನು ಕರೆದುಕೊಂಡು ಆವತ್ತು ಚಂದ್ರಗುತ್ತಿಗೆ ಹೋದೆ. ಎಂದಿನಂತೆ ಕ್ಯಾಮರಾ ಲೆನ್ಸ್ ಎಲ್ಲ ಸಿದ್ಧಪಡಿಸಿ ಇಟ್ಟುಕೊಂಡಿದ್ದೆ. ಅಲ್ಲಿಗೆ ಹೋದ ಮೇಲೆ ಪರಿಸ್ಥಿತಿ ನಾನು ತಿಳಿದಷ್ಟು ಸುಲಭದ್ದಲ್ಲ ಎಂದು ತಿಳಿಯಿತು. ಎಲ್ಲೆಲ್ಲೂ ಪೊಲೀಸ್ ಕಾವಲಿತ್ತು, ಗುಡ್ಡದ ಮೇಲೆ ರೇಣುಕಮ್ಮನ ದೇವಸ್ಥಾನ. ಬೆತ್ತಲು ಸೇವೆ ಮಾಡುವವರು ಕೆಳಗಿನ ಸ್ನಾನ ಘಟ್ಟದಲ್ಲಿ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ಅಲ್ಲಿ ಬೇವಿನ ಎಲೆಯ ಉಡುಗೆ ತೊಟ್ಟು ಪೂಜೆ ಸಲ್ಲಿಸಿ ಮತ್ತೆ ಕೆಳಗೆ ಬಂದು ಸ್ನಾನ ಘಟ್ಟದಲ್ಲಿ ಸ್ನಾನ ಮಾಡಿ ಬೇವಿನ ಉಡುಗೆ ಬಿಚ್ಚುವುದು ಸಂಪ್ರದಾಯ. ಒಂದಿಷ್ಟು ದಲಿತ ಸಂಘರ್ಷ ಸಮಿತಿಯ ಹುಡುಗರು ಬೇವುಡುಗೆ ತೊಟ್ಟು ಹೊರಟ ಹೆಂಗಸರನ್ನು ತಡೆದು ಅವರಿಗೆ "ಬೆತ್ತಲು ಸೇವೆ ಹೆಸರಿನಲ್ಲಿ ನಿಮ್ಮ ಮೇಳೆ ಶೋಷಣೆ ನಡೆಯುತ್ತಿದೆ. ಬೆತ್ತಲೆ ಸೇವೆ ಮಾಡಬೇಡಿ" ಎಂದು ಬುದ್ದಿ ಮಾತು ಹೇಳುತಿದ್ದರು. ಆ ಹೆಂಗಸರು "ಯಾಕೆ ಸೇವೆ ಮಾಡಬಾರದು? ಇದು ನಾವೇ ದೇವರ ಹತ್ತಿರ ಹರಸಿಕೊಂಡಿರುವುದು" ಎಂದು ಆ ಹುಡುಗರ ಮೇಲೆ ಜಗಳಕ್ಕೆ ಹೋಗುತ್ತಿದ್ದರು.

ಅಷ್ಟೊತ್ತಿಗೆ ಒಂದಷ್ಟು ಜನ ಬೆತ್ತಲಾಗಿದ್ದ ಗಂಡಸರು ಒಂದು ಕಡೆ ಸೇರಿ ಜೋರು ಜೋರು ಸ್ವರದಲ್ಲಿ ಕೂಗಿಕೊಳ್ತಾ ಚರ್ಚೆ ನಡೆಸುತ್ತಿರುವುದು ಕಂಡಿತು. ಅವರ ಕೈಯಲ್ಲಿ ತ್ರಿಶೂಲವಿತ್ತು. ಅಷ್ಟೊತ್ತಿಗೆ ಒಂದು ಲಾರಿ ಬಂತು. ಅದರಿಂದ ಒಂದಿಷ್ಟು ಹೆಂಗಸರು ಇಳಿದರು: ಅವರಾಗಲೇ ಬೇವುಡುಗೆ ತೊಟ್ಟು ಸಿದ್ದವಾಗೇ ಬಂದಿದ್ದರು. ಕೆಲವರ ಮೈಮೇಲಂತೂ ನಾಲ್ಕು ಬೇವಿನೆಸಳು ಬಿಟ್ಟರೆ ಮತ್ತೇನಿಲ್ಲ. ಉಧೋ ಉಧೋ ಎಂದು ಕೂಗಿಕೊಳ್ಳುತ್ತಿದ್ದರು. ಅವರನ್ನು ಆ ಸ್ಥಿತಿಯಲ್ಲಿ ಮುಂದೆ ಹೋಗದಂತೆ ತಡೆದದ್ದೆ ಭುಗಿಲ್ಲೆಂದು ಗೊಂದಲ ಗಲಭೆ ಶುರುವಾಗಿಬಿಟ್ಟಿತು. ಇಷ್ಟೊತ್ತು ಕ್ಯಾಮರಾ ಮುಚ್ಚಿಟ್ಟುಕೊಂಡಿದ್ದ ನಾನು ಕ್ಯಾಮರಾ ಹೊರ ತೆಗೆದು ಲೆನ್ಸ್ ಹಾಕಿ ಸ್ವಲ್ಪ ದೂರದಲ್ಲಿ ನಿಂತು ಅವರ ಫೋಟೋ ತೆಗೆಯಲು ಪ್ರಾರಂಭಿಸಿದೆ. ಇದನ್ನು ನೋಡಿದ ತ್ರಿಶೂಲಧಾರಿ ಗಂಡಸರು ನನ್ನನ್ನು ಮತ್ತು ಕೇಶವನನ್ನು ತ್ರಿಶೂಲ ಹಿಡಿದು ಬೆರೆಸಿಕೊಂಡು ಬಂದರು. ನನಗಂತೂ ಅವರು ಏನು ಮಾಡುತಿದ್ದಾರೆ ಎಂಬ ಸೂಚನೆಯೇ ಸಿಗಲಿಲ್ಲ. ಕೇಶವ ಇದ್ದವನು "ಅಣ್ಣಾ ಓಡಿ, ಬಿಡಲ್ಲ ನಮ್ಮನ್ನು ಕೊಲ್ತಾರೆ" ಎಂದು ಕೂಗಿಕೊಂಡ. ಇಬ್ಬರು ಓಡತೊಡಗಿದೆವು. ಒಬ್ಬನಂತೂ ತ್ರಿಶೂಲ ಹಿಡಿದು ಕೆಟ್ಟ ಶಬ್ದಗಳಿಂದ ಬಯ್ಯುತ್ತಾ ನಮ್ಮನ್ನು ಅಟ್ಟಿಸಿಕೊಂಡು ಬರುತ್ತಲೇ ಇದ್ದ. ನಾವು ಓಡಿದೆವು. ಎಲ್ಲೂ ಕಾಲು ಹಾಕುವ ಹಾಗೆ ಇಲ್ಲ. ಎಲ್ಲ ಕಡೆಯು ಹೇಲಿನ ರಾಶಿ. ಅದರ ಮೇಲೆ ಓಡಿದೆವು. ಅವನು ಬಿಡಲಿಲ್ಲ. ಅಟ್ಟಿಸಿಕೊಂಡು ಬಂದು ನನ್ನ ಹೆಗಲ ಮೇಲಿದ್ದ ಹಸಿರು ಟವೆಲ್ ಎಳೆದುಕೊಂಡು ಅದನ್ನು ನೆಲಕ್ಕೆ ಹಾಕಿ ತ್ರಿಶೂಲದಿಂದ ತಿವಿದು ಹರಿಯ ತೊಡಗಿದ. ಅಷ್ಟರಲ್ಲಿ ನಾವು ದೇವಸ್ಥಾನದಿಂದ ತುಂಬಾ ದೂರ ಬಂದಿದ್ದೆವು. ಅವನು ಹಸಿರು ಟವೆಲ್ ಹರಿದು ಅಲ್ಲೆ ಎಸೆದು ವಾಪಸ್ ಹೋದ. ನಾವು ಟವೆಲ್ ಎತ್ತಿಕೊಂಡು ಓಡತೊಡಗಿದೆವು. ತುಂಬಾ ದೂರ ಬಂದ ಮೇಲೆ ಟಾರ್ ರಸ್ತೆ ಕಂಡಿತು. ಅಲ್ಲೆ ಸ್ವಲ್ಪ ಹೊತ್ತು ಕಾದು ನಂತರ ಯಾವುದೋ ಬಸ್ ಹತ್ತಿ ಅಂತೂ ಊರು ತಲುಪಿಕೊಂಡೆವು.

ಒಂದಿಷ್ಟು ಫೋಟೊ ತೆಗೆದಿದ್ದೆನಲ್ಲ ಬೆತ್ತಲು ಸೇವೆಯ ಗಂಡಸರು ಮತ್ತು ಹೆಂಗಸರದು. ಅದನ್ನು ಡೆವಲಪ್ ಮಾಡಿಸಲು ಗಾಂಧಿಬಜಾರಿನ ಸ್ಟುಡಿಯೋ ಒಂದಕ್ಕೆ ಕೊಟ್ಟರೆ ಅವನು ವಾಪಸ್ ಕೊಡಲೆ ಇಲ್ಲ. ಫಿಲ್ಮನ್ನೆ ಕಳೆದುಬಿಟ್ಟೆ ಎಂದು ಸುಳ್ಳು ಹೇಳಿ ತಪ್ಪಿಸಿಕೊಂಡ, ಆಮೇಲೆ ಸ್ವಲ್ಪ ದಿನದ ನಂತರ ಯಾರೋ ಹೇಳಿದರು, ರತಿ ವಿಜ್ಞಾನ ಅಂತಾನೋ ಏನೋ ಅದರ ಹೆಸರು, ಆ ಪತ್ರಿಕೆಗೆ ನೀವು ತೆಗೆದ ಫೋಟೋಗಳನ್ನು ಸ್ಟುಡಿಯೋದವನು ಮಾರಿಕೊಂಡಿದ್ದಾನೆ. ಆ ಫೋಟೊಗಳು ಅದರಲ್ಲಿ ಪ್ರಕಟವಾಗಿದೆ ಎಂದು. ■

ನೆಲದ ನಡುಕ

ಏಕೆ ಹೀಗೆ ನಡುಗುತ್ತಿದೆ
ಈ ನೆಲ,
ಹೊರಲಾರದ ಭಾರಕ್ಕೇ?
ಅಥವಾ
ಬರುವ ಅಣುಬಳಿಗೇ?
ಯಾವ ಭಯ
ಬಂದು ಬಡಿಯಿತು ಇದಕ್ಕೆ?

ಏಕೆ ನಡುಗುತ್ತಿದೆ ಹೀಗೆ,
ಸಿಟ್ಟುಗೊಂಡಿರಬಹುದೇ
ಸುಡುತ್ತಿರುವ ಬಿಸಿಲಿಗೆ?
ಬಾರದ ಮಳೆಗೆ?
ಅಥವಾ
ಸಿಡಿಲಗೊಂಡಿರಬಹುದೇ
ಮರಗಳನ್ನು ಕಡಿ ಕಡಿದು
ನೆಲದ ಹಿಡಿತ

ಈ ನೆಲ
ಹೀಗೆ ನಡುಗುವುದಾದರೂ ಏತಕ್ಕೆ?
ಅಸಹ್ಯಗೊಂಡಿರಬಹುದೇ
ರಾಜಕಾರಣಿಗಳ ಭ್ರಷ್ಟತೆಗೆ?
ಜನರ ನಿರ್ಲಜ್ಜತನಕ್ಕೆ?
ಅಥವಾ
ಮೇರೆ ಮೀರಿರಬಹುದೇ ರೋಷ
ಹೂಳುತ್ತಲೇ ಹೋಗುತ್ತಿರುವ ಹೆಣಕ್ಕೆ?
ಎಲ್ಲ ಕಡೆ ಹರಿಯುತ್ತಿರುವ ರಕ್ತಕ್ಕೆ?

ಇರುವುದಾದರೂ ಹೇಗೆ
ನಾವೂ ನಡುಗದೆ,
ನೆಲವೇ ನಡುಗುತ್ತಿರುವ ಈ ಪರಿಗೆ?

● ಕೆ.ಎನ್. ರೂಪಾ



ಅಂಬುರೀಸು ರಾಜಕುದುರೆಯಿದ್ದಂಗೆ; ಜಗ್ಗೇಸ ಕತ್ತೆ ತರ ಕಂಡ್ರೆ

ಈ ಹಿಂದೆ ಚುನಾವಣೆಯ ಪ್ರಚಾರದ ಜಾಗದಲ್ಲಿ ಬಿರು ಚಪ್ಪರ, ಬ್ಯಾನರ್, ಮೈಕು ಇತ್ಯಾದಿ ಸಾಮಗ್ರಿಗಳಿದ್ದು ನಾವಣೆ ನಂತರ ಅವೆಲ್ಲಾ ಸ್ತಬ್ಧಗೊಂಡು, ಮುಗಿದು ೋದ ವ್ಯವಹಾರವೊಂದಕ್ಕೆ ಸಾಕ್ಷಿಯ ಕುರುಹಾಗಿ ೋಚರಿಸುತ್ತಿದ್ದವು. ಈಗ ಚುನಾವಣೆ ಪ್ರಾರಂಭವಾಗಿ, ುಗಿದುಹೋದ ಯಾವ ಚಿಹ್ನೆಗಳೂ ಇಲ್ಲದೆ ರಣಬಿಸಿಲು ಾತ್ರ ರಾಚುತ್ತ ಸುಸ್ತು ಮಾಡುವುದರ ಜೊತೆಗೆ ವೆಲ್ಲಿಂದಲೊ "ನಿನ್ನಾ ಪೂಜೆಗೆ ಬಂದೆ ಮಾದೇಶ್ವರಾ" ಂಬ ಹಾಡು ಬೇರೆ ಕೇಳುತ್ತಿತ್ತು.

"ನಮ್ಮ ಜನ ಸೈಲೆಂಟಾಗಿ ವ್ಯವಾರ ಮಾಡದ ಇನ್ನು ಲಿಲ್ಲ ಕಣಮಾವ" ಎಂದ ಉಗ್ರಿ. ಅದಕ್ಕೆ ಕಾಳಮಾವ ಾವ ಉತ್ತರವನ್ನು ಕೊಡದಿದ್ದಾಗ ತಾನೇ ಮುಂದುವರಿದು,

"ಗ್ನಳ್ಳೆ ಕ್ಯಂಪನುದುಗುಂದು ಮದಿರಾಯ್ತಾ ಅದೆ. ನೆ ಮುಂದೆ ಚಪ್ಪರ ಹಾಕ್ಯವುರೆ. ವಾಲಗದೋರು ್ಟುರುಸ್ತಾ ಅವುರೆ. ಜ್ಯತಿಗೆ ನಿನ್ನ ಪೂಜೆಗೆ ಬಂದೆ ಅಂತ ್ರಕು ಅರಚ್ತಾಗುತ್ತಾ ಅದೆ. ಧೊಸುರು ಅದೇನೇಳ್ತಾ ಅವುನೊ ದೂ ಗೊತ್ತಿಲ್ಲ, ಇದರ ನಡುವೆ ಯಾವನ ಮಾತು ಾರಿಗೂ ಕೇಳ್ತಯಿಲ್ಲ, ಜನ ಏನೀತರ ಆಗ್ಕೋದರಲ್ಲಾ" ದು ಉಗ್ರಿ ಚಿಂತಾಕ್ರಾಂತನಾದ. ಆಗ ಸೀರ,

"ಇಸಿಸಿ, ಮದುವೆ ಆಗದೆ ಅಂಗಲವೇನ್ಲ, ಕದ್ದು ುರಾಗಿದ್ದಿನಿ ಬಗ್ಗಿ ಧಾರೆ ಹುಯ್ಕಿ ಅಂತ ಗಲಾಟಿಲ್ಲದಂಗೆ ದುವೆ ಮಾಡಕ್ಕಾವತೇನ್ಲ?" ಎಂದ.

"ಅಂತಾ ಯಲಕ್ಷನ್ನೆ ಗಲಾಟಿಲ್ಲದಂಗೆ ನ್ಯಡದಿರಬೇಕಾದ್ರೆ ದುವೆ ಮಾಡಕ್ಕಾಗದಿಲವೆ?"

"ನೀನು ಮದಿವಾಗವಾಗ ಅಂಗಾಗಿವೆ ತಗೊ" ಂದಳು ಜುಮ್ಮಿ.

ಬ ಯ ಲು ಸೀ ಮೆ

ಕಟ್ಟೆಪುರಾಣ

▶ಬಿ. ಚಂದ್ರೇಗೌಡ

"ಅವುನೆಲ್ಲಿ ಮದಿವಾದನೆ? ಅಂಗೆ ಕಾಲ ಮಾಡಿ ತೆ ಬಸಾಕ್ತಾನೆ."

"ಏಟ್ಟ ವಯಿಸು ನಿಂಗೆ?" ಎಂದ ಕಾಳಮಾವ.

"ಮುವ್ವತ್ತೈದು ನ್ಯಡಿತಾ ಅದೆ."

"ನಿನ್ನ ವಯಿಸಿಗೆ ನನಿಗೊಗ್ಲೆ ಹದುನೈದು ವರ್ಸದ ಗಿದ್ದ."

"ಮದುವೆ ಆಗಕ್ಕೂ ಒಂದು ವಯಿಸು ಅಂತ ಅದೆ. ು ಮುಗುದ್ರೆ ಇಂಟ್ರಸ್ಟೇ ವಂಟೋಯ್ತದೆ" ಎಂದ ರ.

"ಅವ್ನಲ್ಲ ನಿಮ್ಮ ಲ್ಯಕ್ಕಚಾರಗಳು ಕಣೊ ಮಾವ. ವತ್ತು ವರುಸದಲ್ಲಿ ಓಡಾಡಿಕೊಂಡು ಮದಿವಾದೋರ ೀರ್ದೆ?" ಎಂದ ಉಗ್ರಿ.

"ಅವುರವೇನೇನೊ ಸಾದನೆಗಳಿದ್ವೊ. ನೀನೇನು ದೆತ್ತಾಕಿದ್ದೀ?"

"ಜುಮ್ಮಿಯ ರಾಜಕಾರಣಿ ಮಾಡಿದ್ದಿನಪ್ಪ. ಅವತ್ತಿನ ಮದುವೆನೂ ಮುರತು ಕಾನಸೀರಾವು ಯಾವತಿಯ ಮುಂದುಕೆ ತರದೆಯಿದ್ರೆ ಅವುಳೆಲ್ಲಿ ಖ್ಯಮಂತ್ರಿಯಾತಿದ್ಲು?" ಎಂದ ಉಗ್ರಿ.

"ಅಂಗರೆ ಮುಂದಕೆ ತಂದಿದ್ನೆ?" ಎಂದು ಸೀರ ನಗಾಡಿದ.

"ನೀನು ಮಾತ್ರ ಏನು ಮಾತಾಡಿದ್ರು ಅಲ್ಲಿಗೆ ಹೋಯ್ತು ಕಣೊ. ರಾಜಕೀಯದಲ್ಲಿ ಯಾವನೂ ತನಿಗೆ ತಾನೇ ಬ್ಯಳಿಯದಿಲ್ಲ, ದ್ಯಾವೇಗೌಡನಂಗೆ ವಬ್ಬದ್ರೆ ಏನಾರ ಆಗಬವುದು."

"ದ್ಯಾವೇಗೌಡ ಮಕ್ಕಳು ಸಣ್ಣೋರಿದ್ದಾಗ ಮಾಡಿದ. ಈಗ್ಯಾರಿಗೂ ಮಾಡದಿಲ್ಲ ಬುಡು" ಎಂದ ಸೀರ.

"ಯಾರಿಗೆ ಮಾಡಿದ್ರು ಅಷ್ಟೆ ಈ ಕಾಲದಲ್ಲಿ" ಎಂದ ಕಾಳಮಾವ.

"ಮದ್ದಿಗೆ ಜನ ಉಪಕಾರ ನ್ಯನಿಸಿಗಳರು. ಅದ್ಕೆ ಮಾಡೋರು. ಇವತ್ತು ಯಾವನಾರ ನ್ಯನಿಸಿಗಂಡನೇ?"

"ನಾನು ಮಾತ್ರ ಯಾರ ಉಪಕಾರನೂ ಮರತಿಲ್ಲ ದ್ವಡಪ್ಪ" ಎಂದ ವಾಟಿಸ್ಸೆ.

"ನಿನಿಗೆ ಉಪಕಾರ ಮಾಡಿರೋರ ಪಟ್ಟಿ ಒಂದೂರಿನ ಓಟರ್ ಲಿಸ್ಟೇ ಆಗದ್ರಿಂದ ಯಂಗೆ ನ್ಯನಿಸಿಗತ್ತಿಯೊ?" ಎಂದ ಉಗ್ರಿ.

"ಓಟರ್ ಲಿಸ್ಟು ಅಂದೇಟಗೆ ಗ್ಯಾಪುಗಾಯ್ತು ಕಣೊ ಉಗ್ರಿ. ಈ ಬಿಜೆಪಿಗಳು ಮಾಡಿರೊ ಕ್ಯಲಸ ನೋಡಿದ್ರೆ ಡೆಮಾಕ್ರಸಿನೇ ಡ್ಯೆಂಜರ್ ಸ್ಟಾಟಲ್ಲದೆ ಅನ್ನುಸ್ತಾ ಅದೆ."

"ಅದ್ಯಾವುದಪ್ಪ ಡ್ಯೆಂಜರ್ ಸ್ಟಾಟು?"

"ಓಟಿನ ಚೀಟಿ ಕೊಟ್ಟವುರೆ, ಲಿಸ್ಟಲ್ಲಿ ಓಟಿಲ್ಲ, ಸಾಬರ ಕೇರಿ ಓಟುಗಳೇ ಇಲ್ಲ, ಅಮ್ಯಾಲೆ ಹಿಂದುಳಿದ ವರ್ಗದ ಕೇರಿಗೆ ಕೇರಿನೇ ಇಲ್ಲ, ಇದ್ಯಲ್ಲಾನು ನೋಡಿದ್ರೆ ರಿಜಲ್ಟನೇ ನಂಬಕ್ಕಾಯ್ತಾಯಿಲ್ಲ."

"ಅದ್ಕೆ ಅಲವೇನೊ ಈ ಚುನಾವಣೆ ಏನಾಯ್ತದೆ ಅಂತ ಯಾವನಿಗೂ ಹೇಳಕ್ಕಾಯ್ತಾಯಿಲ್ಲ?"

"ಎಜಾಟ್ಲಿ ಕರಟ್ ಕಣೊ. ಮದ್ದಿಗೆ ಓಟು ಜಾಸ್ತಿಯಾದ್ರೆ ಬಿಜೆಪಿ ಬತ್ತದೆ ಅನ್ನೊರು. ಈಗ ಕಡಮೆ ಆಗಿರದ್ರಿಂದ ಬಿಜೆಪಿ ಬತ್ತದೆ ಅಂತರಲ್ಲಾ, ಯಂಗೇ ಅಂತ?"

"ಬಿಜೆಪಿ ಜನಗಳತ್ರ ಕಾಸೀಸಗಂಡಿರೋರ್ಯಲ್ಲ ಓಟು ಮಾಡಿ ಈಸಗಳದೆಯಿರೋರು ಮನೆಲಿದ್ರೆ ಕಷ್ಟ ಕಣೊ."

"ಈಸಗಂಡಿರೋರೆ ಮನೆಲಿದ್ರೆ?"

"ಅದೂ ಒಂಥರಾ ವಳ್ಳೆದೆ ತಗೊ. ಪಾಪ ಕಾಸೀಸಗಂಡು ಓಟು ಮಾಡದು ಅವುರಿಗೂ ಅವುಮಾನಾಗಿ ಮನೆಲಿದ್ರೆ ಅದು ವಳ್ಳೆದೆಯಾ."


"ಏನೊ, ನನಿಗಂತೂ ನಮ್ಮ ದೇಶದಾ ಡೆಮಾಕ್ರಸಿ ಅಪಾಯದಲ್ಲದೆ ಅನ್ನುಸ್ತಾ ಅದೆ."

"ಅಂಗೇನು ತಿಳಕಬ್ಯಾಡ ತಗೊ. ವಳ್ಳೆ ಜನ ಇನ್ನೂರು ಮುನ್ನೂರು ಓಟಲ್ಲಾರ ಡ್ಯಮಾಕ್ರಸಿ ಉಳಿಸಿಗತ್ತರೆ."

"ಚುನಾವಣೆ ಹಿಂಗಾಗದ್ಕೆ ರೆಡ್ಡಿಗಳೇ ಕಾರಣ ಕಣೊ ಉಗ್ರಿ."

"ಅಂಗಲ್ಲ, ಬಿಜೆಪಿ ಹಿಂಗಾಗಕ್ಕೆ ರೆಡ್ಡಿಗಳು ಕಾರಣ ಅನ್ನು. ಅದ್ಕು ಮದ್ಲು ಬಿಜೆಪಿಗಳು ಪ್ರಾಮಾಣಿಕವಾಗಿ ಚುನಾವಣೆ ಮಾಡೋರಪ್ಪ."

"ನಿಜ, ನಾನು ನೋಡಿದ್ದಿನಿ. ಪಾಪ ಮನಿಮನಿಗೆ ಹ್ಯಾಂಡುಬಿಲ್ಲಾಕವು. ಹಸುವಾದಾಗ ಹೋಗಿ ಚಿತ್ರಾನ್ನ ತಿಂದು, ವಟ್ಟೆತುಂಬ ನೀರು ಕುಡಿಯವು. ಅಮ್ಯಾಲೆ ಓಟಿನ ದಿನ ತಮ್ಮೋಟು ಮಾಡದೂ ಅಲ್ದೆ ಭೂತತ್ರ ಒಂದಿಷ್ಟು ಕ್ಯಲಸನೂ ಮಾಡಿ ಹೋಗವು. ಅವ್ವತ್ಲಗೋ



ದವ್ಯೊ, ಈಗ ಒಂದೂ ಕಾಣದಿಲ್ಲ ಹೋಗತ್ತಗೆ."

"ಈ ಚುನಾವಣೆಲಿ ಅವ್ವಲ್ಲ ಮನೆಲಿದ್ದೊ ಕಣೊ. ರೆಡ್ಡಿಗಳ ತರದ ಬಿಜೆಪಿಗಳು ಸೇರಿಕಂಡು ಹಣ ಹಂಚದು, ವಿಸ್ಕಿ ಹಂಚದು, ವಡವೆ ಮೊಬೈಲಂಚದ ನೋಡಕ್ಕಾಗದೆ ಮನೆಲಿದ್ದೊ" ಎಂದ ಉಗ್ರಿ.

"ನೀನೇಳದು ಅಷ್ಟೊಂದು ನಿಜವಾಗಿ ಕಾಣ್ತಾಯಿಲ್ಲ ಕಣೊ ಉಗ್ರಿ. ನನಿಗೀಗ ಹ್ವಳದ ಡವುಟ ಪ್ರಕಾರ ಅವುರ್ಯಲ್ಲ ಮರೆಲಿದ್ದಕಂಡು ಕ್ಯಲಸ ಮಾಡುಸ್ತಾಯಿದ್ರು ಅನ್ನಸ್ತದೆ" ಎಂದು ವಾಟಿಸ್ಸೆ ಹೇಳುತ್ತಿರುವಾಗ ಮಧ್ಯೆ ಬಾಯಿಹಾಕಿದ ಜುಮ್ಮಿ,

"ಆ ಜಗ್ಗೇಸ ಅಂಬುರೀಸನಿಗೆ ಬೋದಿದ್ದನಂತೆ, ನಿಜವೇನ್ಲ?" ಎಂದಳು.

"ಬೋದಿಲ್ಲ ಟೀಕೆ ಮಾಡ್ಯವುನೆ ಕಣಕ್ಕಾ."

"ಏನಂತ ತೀಕೆ ಮಾಡ್ಯವುನೆ?"

"ಏನೊ ಅಂದಿರತನೆ. ಮದ್ಲೆ ಅದು ಹೈಲುಪೈಲು ಬಡ್ಡೆತ್ತುದ್ದು. ಬುಡ್ಡೆ ಹೋಗ್ಲಿ" ಎಂದ ಕಾಳಮಾವ.

"ಬುಡದಲ್ಲ ಕಣಮಾವ, ಹಂದಿರೊ ಚಂದಕೆ ಹಾಳುಗ್ವಾಡೆ ಜರಿತು ಅಂತ ಇದರೇಗ್ತಿಗೆ ಅಂಬುರೀಸನ್ನ ಬೈತಿತ್ತಂತೆ. ಇದೆ ಬಿಜೆಪಿಗೆ ಮಾರಿಕಂಡು ಮಾನಮರಿಯಾದಿ ಹರಾಜು ಮಾಡಿಕಂಡು ಕುಂತದೆ. ನನಿಗೆ ಸಿಕ್ಕಬೇಕಾಗಿತ್ತು ಮಕ್ಕುಗಿತಿದ್ದೆ ಅದಕೆ" ಎಂದಳು ಜುಮ್ಮಿ.

"ಅಕ್ಕ ಜಗ್ಗೇಸ ಆಕ್ಟಸ್ಸು. ಅದು ಇದು ಅನ್ನಬ್ಯಾಡ. ಕಲೆಗೆ ಅವುಮಾನ ಮಾಡಬ್ಯಾಡ ಉಗಿತಿನಿ ಅಂತ."

"ಉಗಿಸಿಗಳೊ ಕ್ಯಲಸ ಯಾಕ್ಲ ಮಾಡಬೇಕು?"

"ಉಗಿಸಿಗಳೊ ಕ್ಯಲಸಲ್ಲ ಅದು. ಅವುನು ಬಿಜೆಪಿಲಿದ್ದುಕಂಡು ಕಾಂಗ್ರೆಸ್ ಕ್ಯಾಂಡೇಟ್ ಟೀಕೆ ಮಾಡ್ಯವುನೆ. ಅದ್ಕೆ ಅಂಬುರೀಸನೂ ಉತ್ತರ ಕೊಟ್ಟವುನೆ" ಎಂದ ವಾಟಿಸ್ಸೆ.

"ಅವುನ್ಯಾಕೆ ಅಂಬುರೀಸನ್ನ ಬೋದವುನೆ ಗೊತ್ತೇನೊ? ಆ ಬಡ್ಡೆತ್ತುದ್ದ ಈಗ ಬಿಜೆಪಿಲದೆ. ತುರುವೇಕ್ಯರೆ ಎಮ್ಮೆಲ್ಲೆಯಾಗಿದ್ದೊನು. ಶಿವರಾಮೇಗೌಡ ತುರುವೇಕೆರೆ ತಾಲ್ಲೊಕಳಿಯ."

"ಶಿವರಾಮೇಗೌಡ ತುರುವೇಕೆರೆ ತಾಲೋಕಿಗೇ ಅಳಿಯಲ್ಲ ಕಣೊ ಉಗ್ರೀ. ತುರುವೇಕೆರೆ ತಾಲ್ಲೋಕ್ ಕೊಳಾಲದ ರಾಮಕೃಷ್ಣಯ್ಯನ ಅಳಿಯ ಅಂತ ಹೇಳು."

"ಅಂಗೇ ಆಗ್ಲಿ, ಅವುನು ತುರುವೇಕೆರೆ ಮಗ, ಇವನು ಅಳಿಯ, ಒಟ್ಟಾಗಿ ಒಂಟಿಸಲಗದ ಮೇಲೆ ಬಿದ್ದಿದ್ರು ಕತೆ ಮುಗೀತು. ಈಗ ಅದಕಟಗಂಡೇನು ಅಂತ?"

"ಅದನ್ನ ಜುಮ್ಮಕ್ಕನಿಗೇಳೊ ನೀನೆಯಾ."

"ನೋಡೆ ಜುಮ್ಮಿ, ಜಗ್ಗೇಸನಿಗೆ ನೀನೇನು ಬೋದ್ರು ತಾಗದಿಲ್ಲ ಕಣೆ. ಅಷ್ಟು ಕೆಟ್ಟೊಗ್ಯವುನೆ ಅವುನು. ಅಂತಾ ಅಂಬುರೀಸನೆ ಅವುನ್ನ ನೋಡಿದೇಟಗೆ ಏನಂತಿದ್ದ ಗೊತ್ತಾ? 'ಏ ಸ್ಲಮ್ಮು' ಅಂತಿದ್ದ. ಅದಕಿವುನು 'ಏನಣ್ಣಾ?' ಅಂತಿದ್ದ. ನಾಳೆ ಅಕಸ್ಮಾತ್ ಅಂಬುರೀಸೆದ್ರಿಗೆ ಜಗ್ಗೇಶ್ ಬಂದ ಅನ್ನು, ಕೂಡ್ಲೆ ಕಾಲಿಗೆ ಬಿದ್ದು 'ನಂತಾಯಾಣೆ, ಅಟ್ಟಲಕ್ಯಮ್ಮನಾಣೆ, ನಾನೇನು ಅಂದಿಲ್ಲ ಕಣಣ್ಣ' ಅಂದುಬುಡ್ತನೆ. ಆಗೇನೀಸಗಂಡಿ ನೀನು? ಅವುರು ಆಗುಟ್ಟುಗಳು. ಒಂದೇ ತಟ್ಟೆಲಿ ಉಂಡು ಒಂದೇ ಗುಂಡಿಗೆ ಉಚ್ಚೆ ಹುಯ್ಯೋ ಜನ ಕಣೇ. ನೀನು ಹೋಗಿ ಹೋಗಿ ಅವುರ ಜಗಳಕೆ ತಲೆಕೆಡಿಸಿಗಂಡಿದ್ದಿಯಲ್ಲ ಹೇಳು" ಎಂದು ಉಗ್ರಿ ಹೇಳುವಾಗ, ಜ್ಞಾನೋದಯಗೊಂಡಂತೆ ಕಣ್ಣುಬಿಟ್ಟ ಜುಮ್ಮಿ,

"ಅದ್ರು ಇದರ ತರ ರಾಜಕಾರಣವ ಅಂಬುರೀಸು ಮಾಡಿದ್ದನ್ಲ?"

"ತಿರಗ ಅದ್ನೆ ಹೇಳ್ತಿಯಲ್ಲೇ ನೀನು? ಅಂಬುರೀಸನೆ ಬ್ಯಾರೆ, ಜಗ್ಗೇಸನೇ ಬ್ಯಾರೆ. ಅಂಬುರೀಸ ರಾಜರತ್ರಯಿರೊ ಪಟ್ಟದ ಕುದುರೆಯಿದ್ದಂಗೆ. ಅದರಮ್ಯಾಲೆ ಯಾರೂ ಹತ್ತಿ ಸವಾರಿ ಮಾಡಕ್ಕಾಗದಿಲ್ಲ, ಅದೇ ಜಗ್ಗೇಸ ಮಡುವಾಳು ಬೈರಣ್ಣನ ಕತ್ತೆ ತರ. ಅದರ ಮ್ಯಾಲೆ ಯಾರಾದ್ರು ಸವಾರಿ ಮಾಡಬವುದು" ಎಂದ ಉಗ್ರಿ.

"ನಿಜ ಕಣೊ ಉಗ್ರಿ. ಜಗ್ಗೇಸ ನನಿಗಿಂತ ಮೂರಿಂಚು ಕಡಮೆ ಹೈಟು. ಹೈಯಿಲ್ದ ಬೂಡುಸಾಯ್ಕಂಡೆ ಎತ್ತರವಾಗಿ ನ್ಯಡಿಯಕ್ಕೆ ಟ್ರೈ ಮಾಡ್ತನೆ. ಆಯ್ತದಾ?" ಎಂದ ವಾಟಿಸ್ಸೆ.

"ಅದ್ರು ಬಡ್ಡಿಮಗ ತಮಾಸಿ ಗಂಡು" ಎಂದ ಸೀರ.

"ಮಕ್ಕಳೇಸಲ ಅವುನಿಗೆ?" ಎಂದ ಕಾಳಮಾವ.

"ಯರದು ಗುಂಡವಂತೆ. ಅವು ವಳ್ಳೆ ಉದ್ರು. ಅವುನೆದ್ದಿ ತರ ಕಾರೋಡಸೋನು ಇದೀ ಕರ್ನಾಟಕದಲ್ಲೇ ಯಾರು ಇಲ್ಲವಂತೆ."

"ತಗಳಪ್ಪ, ಅಂಕಾರೋದಿಸ್ಯಳೆ ಅವುಳು?"

"ಒದುಸ್ಯಳೆ ಅಂತ ಕೇಳ್ತಿಯಾ? ಇಲ್ಲಿಂದ ಬಂಬಾಯಿಗೆ ಐದು ಗಂಟೆ ಟೇಮು ಸಾಕು ಹೋಗಿ ಬುಡ್ತಳೆ. ಅಂತಾ ಹೆಡತಿ ಮದಿವಾಗ್ಯವುನೆ."

"ಅದೂ ದಾಸತ್ತೆಯ ಬುಡು" ಎಂದ ಕಾಳಮಾವ. ■



ಕಮಲ ಕಳಂಕಗೊಂಡಾಗ.....

ಮೊನ್ನೆ ಅಚ್ಚಾಗುತ್ತಿದ್ದ ಪುಸ್ತಕವೊಂದರ ಬೆನ್ನಿಗೆ ಒಳ್ಳೆಯ ಚಿತ್ರವೊಂದಕ್ಕಾಗಿ ಹುಡುಕತೊಡಗಿದೆ. ನನ್ನಲ್ಲಿ ಕಾಶ್ಮೀರ ಕುರಿತ ಇಂಗ್ಲಿಷ್-ಫ್ರೆಂಚ್ ಭಾಷೆಯ ಪುಸ್ತಕವೊಂದಿದೆ; ಅದರಲ್ಲಿ ನೂರಾರು ಫೋಟೋಗಳಿವೆ. ಕಾಶ್ಮೀರದ ಸರೋವರದ ಒಂದು ಫೋಟೋ- ಅದ್ಭುತವಾಗಿತ್ತು, ನೀಲಿ, ಹಸಿರು ಹಿನ್ನೆಲೆಯ ಸರೋವರದಲ್ಲಿ ಅರಳಿದ ಒಂದು ಕಮಲ, ಇನ್ನೂ ಅರಳದಿರುವ ಕೆಂಪು ಮೂತಿಯ ಎರಡು ಮೊಗ್ಗುಗಳು. "ಮುಖಪುಟಕ್ಕೆ ರಾಜಸ್ತಾನದ ಬಟ್ಟೆ ಚಿತ್ರ ಮತ್ತು ಹಿಂಬದಿಗೆ ಈ ಕಮಲದ ಚಿತ್ರ ಚೆನ್ನಾಗಿರುತ್ತದೆ" ಎಂದುಕೊಂಡೆ. ಆದರೆ- ಅದೆಲ್ಲಿ ಸಾಧ್ಯ, ಕಮಲಕ್ಕೆ ಕೆಟ್ಟ ಹೆಸರು ಬಂದು ಆಗಿತ್ತು; ನಮ್ಮ ಮೋಹಕ ಕಮಲ ಪಕ್ಷ ಸೇರಿತ್ತು; ಬಿಜೆಪಿಗಳು ಅದನ್ನು ರಾಜಕೀಯಕ್ಕೊಡ್ಡಿ ಹಾಳು ಮಾಡಿದ್ದರು.


ಹಾಗಾದರೆ ಗುಲಾಬಿ? ಅದು ಸೋಷಲಿಸ್ಟರ ಸಂಕೇತ. ಅದು ಫ್ರಾನ್ಸ್ ಮತ್ತು ಸ್ಪೇನ್‌ನಲ್ಲಿ ಅಧಿಕಾರದಲ್ಲಿರುವ ಸಮಾಜವಾದಿಗಳ ಚುನಾವಣಾ ಸಂಕೇತವಲ್ಲ ಎಂದು ಆಶಿಸುತ್ತೇನೆ.

ಯಾಕೆ ಹೇಳಿದ್ದೆಂದರೆ, ಮೂಲಭೂತವಾಗಿ ಕಳಂಕಿತನಾದ ಮನುಷ್ಯ ತನ್ನ ಜೀವನ ಕ್ರಮದಿಂದಲೇ, ಬದುಕಿನ ಜಂಜಾಟದಿಂದಲೇ ಅನೇಕ ವಸ್ತುಗಳಿಗೆ ಕೆಟ್ಟ ಹೆಸರು ತರುತ್ತಾನೆ. ಸೇಡ್ ಎಂಬ ಸಾಹಿತಿ ತನ್ನ ವಕ್ರತೆಯಿಂದ 'ಸ್ಯಾಡಿಸಂ' ಪದ ತಂದ; ನಾವು 'ಸ್ಯಾಡ್' ಪದ ಕೇಳಿದಾಗೆಲ್ಲ 'ಸ್ಯಾಡಿಸ್ಟ್' ನೆನಪಿಗೆ ಬರುತ್ತದೆ. ಒಂದಾನೊಂದು ಕಾಲಕ್ಕೆ 'ಗೇ ಬಾಯ್' ಅಂದರೆ ಖುಷಿಯ ಹುಡುಗ. ಈಗ ಸಲಿಂಗರತಿಯುವ; 'ಕ್ವಿಯರ್' ಕೂಡಾ ಹಾಗಾಗಿದೆ.

ನಾವೂ ಒಂದು ಚಿಕ್ಕ ತಪ್ಪು ಮಾಡಿದ್ದೇವೆ... ತುಂಟ ಎಂದೊಡನೆ ತುಂಟಾಟ ನೆನಪಾಗುತ್ತದೆ. ಆದರೆ ತುಂಟತನದಲ್ಲಿ ನಾನಾಬಗೆಯ ಕ್ರಿಯೆ ಸೇರಿರುವುದರಿಂದ ಪರವಾಗಿಲ್ಲ ಅನ್ನಿಸಬಹುದು. ನಮ್ಮ ಪುಂಡಲೀಕ ಶೇಟ್ ಒಮ್ಮೆ ಬೈಗುಳದ ಕನ್ನಡಕ್ಕೆ 'ನಡುಗನ್ನಡ' ಅಂದರು. ಈಗ ಅಧ್ಯಾಪಕರು ಎಂ.ಎ. ವಿದ್ಯಾರ್ಥಿಗಳಿಗೆ ಪಾಠ ಮಾಡುವಾಗ 'ನಡುಗನ್ನಡ' ಅನ್ನುವಾಗ (ನಾನಾ ಕಾರಣಕ್ಕೆ) ನಡುಗಬಹುದು!

ಅಂದಹಾಗೆ, ನನ್ನೆದುರು ಒಂದೆರಡು ಗಾದೆ ಪುಸ್ತಕಗಳಿವೆ. ಒಂದು ವಯಸ್ಕರ ಶಿಕ್ಷಣ ಸಮಿತಿಯವರು ಪ್ರಕಟಿಸಿದ ಹಲವಾರು ಪುಸ್ತಕಗಳಲ್ಲಿ ಒಂದು. ಇನ್ನೊಂದು ಗೆಳೆಯ ಕಾಳೇಗೌಡ ನಾಗವಾರರು ಸಂಗ್ರಹಿಸಿದ ಗಾದೆಗಳ ಪುಸ್ತಕ.

-ಜುಲೈ 28, 1991



▶▶▶ 3

ಬಿನಾಯಕ್ ಸೇನ್ ಎಂಬ ಮಾನವತಾವಾದಿ

ಆದಿವಾಸಿಗಳನ್ನು ಹೂತಿದ್ದ ಸಾಮೂಹಿಕ ಸಮಾಧಿಯನ್ನು ಮತ್ತೆ ಬಗೆಸಿ ಮರಣೋತ್ತರ ಪರೀಕ್ಷೆಯನ್ನು ನಡೆಸಿತ್ತು. ಆಗ ಅದು ಎನ್‌ಕೌಂಟರ್ ಅಲ್ಲವೇ ಅಲ್ಲ, ಬದಲಾಗಿ ಅವರನ್ನೆಲ್ಲ ದಾರುಣವಾಗಿ ಹತ್ಯೆ ಮಾಡಲಾಗಿದೆ ಎಂದು ಸಾಬೀತಾಯಿತು. ರಾಜ್ಯ ಸರ್ಕಾರದ ಈ ಕ್ರೌರ್ಯದ ಬಗೆಗಿನ ಮಾಹಿತಿ ಎಲ್ಲೆಡೆ ಹಬ್ಬಲಾರಂಭಿಸುತ್ತಿದ್ದಂತೆ, ಪೊಲೀಸ್ ಮೇಲೆ ಮತ್ತು ಸಲ್ವಾ ಜುಡುಂ ಮೇಲೆ ಕ್ರಮ ಕೈಗೊಳ್ಳಬೇಕಿದ್ದ ಸರ್ಕಾರ ಬಿನಾಯಕ್ ಅವರ ವಿರುದ್ಧವೇ ಕ್ರಮಕೈಗೊಳ್ಳಲು ಮುಂದಾಯಿತು.

ಬಿನಾಯಕ್ ಓರ್ವ ಮಾವೋವಾದಿ ಎಂದೂ, ಅವರು ದೇಶದ್ರೋಹ ಕೃತ್ಯಗಳಲ್ಲಿ ತೊಡಗಿದ್ದಾರೆಂದೂ ಪಿತೂರಿ ನಡೆಸಿತು. ಮಾತ್ರವಲ್ಲ, ಅವರು ತಲೆ ತಪ್ಪಿಸಿಕೊಂಡಿದ್ದಾರೆಂದು ಪ್ರಚಾರ ಮಾಡಿತು. ವಾಸ್ತವವಾಗಿ ಆಗ ಬಿನಾಯಕ್ ಅವರು ಕೊಲ್ಕತ್ತಾದಲ್ಲಿದ್ದ ತಮ್ಮ ತಾಯಿಯನ್ನು ನೋಡಲು ಹೋಗಿದ್ದರು. ತಾನು ಯಾವ ತಪ್ಪು ಮಾಡಿಲ್ಲ ಎಂದು ಗೊತ್ತಿದ್ದ ಬಿನಾಯಕ್ "ಪೊಲೀಸರು ನನ್ನ ಬಗ್ಗೆ ತಪ್ಪಾಗಿ ಭಾವಿಸಿದ್ದಾರೆ, ಕೂಡಲೆ ಛತ್ತೀಸಗಢಕ್ಕೆ ಹಿಂದಿರುಗಿ ಈ ಸಣ್ಣ ಅಪಾರ್ಥವನ್ನು ಸರಿಪಡಿಸುತ್ತೇನೆ" ಎಂದು ವಾಪಸ್ಸು ಬಂದರು. ಛತ್ತೀಸಗಢದ ಪೊಲೀಸರು ಅವರನ್ನು ಕೂಡಲೇ ಬಂಧಿಸಿ ಜೈಲಿಗಟ್ಟಿದರು.

ಛತ್ತೀಸಗಢದ ಪೊಲೀಸರು ಬಿನಾಯಕ್ ಅವರ ವಿರುದ್ಧ ನ್ಯಾಯಾಲಯದ ಮುಂದೆ ಸಲ್ಲಿಸಿರುವ ಆರೋಪ ಪಟ್ಟಿಯಲ್ಲಾದರೂ ಏನಿದೆ ಎಂದು ನೋಡಿದರೆ ಅಚ್ಚರಿಯಾಗುತ್ತದೆ.

ರಾಯಪೂರ್‌ದ ಜೈಲಿನಲ್ಲಿರುವ ಮಾವೋವಾದಿ ನಾರಾಯಣ ಸಾನ್ಯಲ್ ಎಂಬುವವರನ್ನು ಬಿನಾಯಕ್ 33 ಬಾರಿ ಭೇಟಿ ಮಾಡಿದ್ದರು ಎಂಬುದು ಒಂದು ಆರೋಪ. ಆದರೆ ನಿಜ ಏನೆಂದರೆ, ಈಗ ವಯಸ್ಸಾಗಿರುವ ನಾರಾಯಣ ಸಾನ್ಯಲ್ ಅವರಿಗೆ ಚಿಕಿತ್ಸೆ ನೀಡಲು ಬಿನಾಯಕ್ ಜೈಲಾಧಿಕಾರಿಗಳಿಂದ ಅನುಮತಿ ಪಡೆದೇ ಪ್ರತಿ ಬಾರಿ ಭೇಟಿಯಾಗಿದ್ದರೇ ಹೊರತು ಅಕ್ರಮವಾಗಿ ಎಂದೂ ಭೇಟಿಯಾಗಿಲ್ಲ.


ಸಲ್ವಾ ಜುಡುಂ

ಬಿನಾಯಕ್ ಅವರಿಗೆ ಸಾನ್ಯಲ್ ಜೈಲಿನಿಂದ ಬರೆದಿರುವ ಒಂದು ಈ ಪತ್ರ "ದೇಶದ್ರೋಹಿ ಚಟುವಟಿಕೆಗೆ ಸಾಕ್ಷಿ" ಎಂದು ಪೊಲೀಸರು ಹೇಳುತ್ತಿದ್ದಾರಾದರೂ ಅದರಲ್ಲಿ ಸಾನ್ಯಲ್ ತಮ್ಮ ಆರೋಗ್ಯ ಕುರಿತಂತೆ ಬರೆದಿದ್ದಾರೆಯೇ ಹೊರತು ಬೇರೇನಿಲ್ಲ. ಅದಕ್ಕಿಂತ ಮುಖ್ಯವಾಗಿ ಆ ಪತ್ರವನ್ನು ಜೈಲಿನ ನಿಯಮಗಳ ಪ್ರಕಾರವೇ ರವಾನಿಸಲಾಗಿತ್ತು.

ಮದನ್‌ಲಾಲ್ ಎಂಬ ಮಾವೋವಾದಿ ತಾನಿರುವ ಬಿಲಾಸ್‌ಪುರ್ ಜೈಲಿನ ಸ್ಥಿತಿಗತಿಗಳನ್ನು ಕುರಿತು ಬರೆದಿರುವ ಪತ್ರವೂ ಪೊಲೀಸರ 'ಆರೋಪ' ಪಟ್ಟಿಯಲ್ಲಿದೆ. ಆದರೆ ಆ ಪತ್ರವನ್ನು ಬಿನಾಯಕ್ PUCL ಮುಖಾಂತರ ಮಾಧ್ಯಮಗಳಿಗೆ ಬಿಡುಗಡೆ ಮಾಡಿದ್ದರಿಂದ ಅದರಲ್ಲಿ 'ಗೌಪ್ಯ'ವಾದ ಯಾವ ಅಂಶವೂ ಇರಲಿಲ್ಲ.

..... ಹೀಗೆ ಅದೆಂತಹದ್ದೊ ಕಾಗದ ಮತ್ತು ಪತ್ರಗಳ ಚೂರುಗಳನ್ನು ಆಧರಿಸಿ ಬಿನಾಯಕ್‌ರನ್ನು ಪೊಲೀಸರು ಬಂಧಿಸಿದ್ದರು. ಜೊತೆಗೆ ಬಿನಾಯಕ್ ಅವರ ಮನೆಯನ್ನೂ, ಅವರ ಕಂಪ್ಯೂಟರ್ ಅನ್ನು ಪರಿಶೀಲಿಸಿ ನೋಡಿದರು. ಆದರೆ ಬಿನಾಯಕ್ ದೇಶದ್ರೋಹಿ ಕೆಲಸದಲ್ಲಾಗಲಿ, ಸಕ್ಕಲರ ಪರವಾದ ಕೃತ್ಯಗಳಲ್ಲಾಗಲಿ ತೊಡಗಿಕೊಂಡಿದ್ದಾರೆ ಎಂಬ ಯಾವ ಮಾಹಿತಿಯೂ ಪೊಲೀಸರಿಗೆ ಇಲ್ಲಿಯ ತನಕ ಸಿಕ್ಕಿಲ್ಲ. ಅಷ್ಟೇ ಅಲ್ಲ, ಬಿನಾಯಕ್ ಅವರ ವಿರುದ್ಧ ನ್ಯಾಯಾಲಯದ ಮುಂದೆ ಬರೋಬ್ಬರಿ 64 ಜನರಿಂದ ಸಾಕ್ಷಿ ಹೇಳಿಸಿದ್ದರೂ ಅದ್ಯಾವುದೂ ಸಾಬೀತಾಗಿಲ್ಲ.

ಬಿನಾಯಕ್ ಅವರ ಬಂಧನದ ದೊಡ್ಡ ವಿಪರ್ಯಾಸ ಯಾವುದೆಂದರೆ ಅವರಿಗೆ ಜಾಮೀನು ನೀಡಲು ಛತ್ತೀಸಗಢದ ಹೈಕೋರ್ಟ್ ಎರಡು ಬಾರಿ ನಿರಾಕರಿಸಿದೆಯಲ್ಲದೆ, ಸ್ವತಃ ಸುಪ್ರೀಂಕೋರ್ಟ್ ಕೂಡ ಅವರಿಗೆ ಜಾಮೀನು ನಿರಾಕರಿಸಿದೆ. ನಮ್ಮ ನ್ಯಾಯಾಲಯಗಳ ಕಾರ್ಯವೈಖರಿ ಬಗ್ಗೆ ಇಲ್ಲೊಂದು ಉದಾಹರಣೆ ಕೊಡಬಹುದು. ಇತ್ತೀಚೆಗೆ "ಹಿಂದೂಗಳ ವಿರುದ್ಧ ಕೈ ಎತ್ತಿದವರ ಕೈಗಳನ್ನು ಕತ್ತರಿಸುತ್ತೇನೆ" ಎಂದು ಬಹಿರಂಗವಾಗಿ ಘೋಷಿಸಿದ್ದ ವರುಣ್ ಗಾಂಧಿ ಮೇಲೆ ಯಾಕೆ ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ ದೂರನ್ನು ದಾಖಲಿಸಲಾಗಿದೆ ಎಂದು ಇದೇ ಸುಪ್ರೀಂಕೋರ್ಟ್ ಕೇಳಿತ್ತು. ಆದರೆ ಯಾವ ಸಾಕ್ಷ್ಯಾಧಾರಗಳೂ ಇಲ್ಲದೆ ಬಿನಾಯಕ್ ಅವರಿಗೆ ಜಾಮೀನು ನೀಡದೆ ಎರಡು ವರ್ಷಗಳ ಕಾಲ ಯಾಕೆ ಬಂಧಿಸಿದ್ದೀರಿ ಎಂಬ ಪ್ರಶ್ನೆಯನ್ನು ಛತ್ತೀಸಗಢದ ಸರ್ಕಾರಕ್ಕೆ ಇದೇ ಸುಪ್ರೀಂಕೋರ್ಟ್ ಈತನಕ ಕೇಳಿಲ್ಲ.

ಬಿನಾಯಕ್ ಅವರಿಗೆ ರಕ್ತದೊತ್ತಡದೊಂದಿಗೆ ಸಕ್ಕರೆ ಕಾಯಿಲೆಯೂ ಇದೆ. ಆದರೆ ಅವೆರಡರೊಂದಿಗೆ ಇತ್ತೀಚೆಗೆ ಹೃದಯದಲ್ಲಿ ಸಮಸ್ಯೆಯೂ ಕಾಣಿಸಿಕೊಂಡಿದೆ. ತಮ್ಮ ದೇಹದಲ್ಲಿ ಏನಾಗುತ್ತಿದೆ ಎಂದು ಅರಿತ ಬಿನಾಯಕ್ ಅವರು ಚಿಕಿತ್ಸೆ ಕೋರಿ ಅರ್ಜಿ ಸಲ್ಲಿಸಿದ್ದರು. ತಾವು ಹಿಂದೊಮ್ಮೆ ವೈದ್ಯಕೀಯ ಓದಿದ್ದ ವೆಲ್ಲೂರಿನ ಸಿಎಂಸಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಅನುಮತಿ ಕೊಡಬೇಕೆಂದು ಕೇಳಿಕೊಂಡಿದ್ದರು. ಅವರ ಈ ಬೇಡಿಕೆ ಕಾನೂನು ಬದ್ಧವಾಗಿಯೇ ಇದೆ.

ಆದರೆ ಬಿನಾಯಕ್ ಅವರ ಬೇಡಿಕೆಯನ್ನು ತಿರಸ್ಕರಿಸಿರುವ ಅಲ್ಲಿನ ಸರ್ಕಾರ ಅವರಿಗೆ ರಾಯಪೂರ್‌ದಲ್ಲೇ ಆರೋಗ್ಯ ತಪಾಸಣೆ ಮಾಡಿಸಿದೆ. ಹಾಗೆ ಆಗ ತಪಾಸಣೆ ಮಾಡಿದ ವೈದ್ಯ ಬಿನಾಯಕ್ ಅವರಿಗೆ ಅಗತ್ಯವಾಗಿರುವ ಅಂಜಿಯೋಪ್ಲಾಸ್ಟಿ ಅಥವಾ ಬೈಪಾಸ್ ಶಸ್ತ್ರಚಿಕಿತ್ಸೆಯನ್ನು ಸಿಎಂಸಿಯಲ್ಲಿ ಕೊಡಿಸಬಹುದು ಎಂದೂ ಸೂಚಿಸಿದರು. ಆದರೆ ಆನಂತರ ವೈದ್ಯರ ಮೇಲೆ ಒತ್ತಡ ತಂದ ಪೊಲೀಸರು ಆ ಶಸ್ತ್ರಚಿಕಿತ್ಸೆಯನ್ನು ರಾಯಪೂರ್‌ನ ಆಸ್ಪತ್ರೆಗಳಲ್ಲೇ ನಡೆಸಬಹುದು ಎಂಬ ಶಿಫಾರಸ್ಸನ್ನು ಗುಪ್ತವಾಗಿ ಪಡೆದಿದ್ದಾರೆ.

ಛತ್ತೀಸಗಢದ ಸರ್ಕಾರ, ಅಲ್ಲಿನ ಪೊಲೀಸರು, ಅಲ್ಲಿನ ಇಡೀ ವ್ಯವಸ್ಥೆ ತನ್ನ ವಿರುದ್ಧ ನಿಂತಿರುವಾಗ ಅಂತಹ ಚಿಕಿತ್ಸೆಯನ್ನು ಆ ರಾಜ್ಯದಲ್ಲೇ ಪಡೆಯಲು ಬಿನಾಯಕ್ ನಿರಾಕರಿಸಿದ್ದಾರೆ. ಯಾಕೆಂದರೆ ಅವರಿಗೆ ಚೆನ್ನಾಗಿ ಗೊತ್ತು, ಇಂತಹ ಸೂಕ್ಷ್ಮ ಶಸ್ತ್ರಚಿಕಿತ್ಸೆ ನಡೆಯುವಾಗ ಒಂದು ಗಾಳಿಯ ಗುಳ್ಳೆ ಕೂಡ ಅವರ ದೇಹವನ್ನು ಹೊಕ್ಕರೆ ಸಾಕು ಅದು ಅವರ ಜೀವವನ್ನೇ ತೆಗೆದುಕೊಳ್ಳುತ್ತದೆ ಎಂದು.

ಇಂದು ಬಿನಾಯಕ್ ಸೇನ್ ಅವರು ಸಾವಿನ ದವಡೆಯಲ್ಲಿದ್ದರೂ ಅವರಿಗೆ ಚಿಕಿತ್ಸೆಯನ್ನು ನಿರಾಕರಿಸುವ ಮೂಲಕ ಛತ್ತೀಸ್‌ಗಢದ ಸರ್ಕಾರ ಅವರ ಸಾವಿಗೆ ಕಾಯುತ್ತಿರುವಂತಿದೆ.

ಬಿನಾಯಕ್ ಓರ್ವ ಆದರ್ಶ ವೈದ್ಯ ಎಂದು ಸಿಎಂಸಿ ಹೇಳಿದೆ. ಅವರು ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಮೌಲ್ಯಗಳನ್ನು ಹೊಂದಿರುವವರು ಎಂದು ಅವರಿಗೆ ಪ್ರಶಸ್ತಿ ನೀಡಿದ ಇಂಡಿಯನ್ ಅಕಾಡೆಮಿ ಆಫ್ ಸೋಷಿಯಲ್ ಸೈನ್ಸ್ ತನ್ನ ಪಾರಿತೋಷಕದಲ್ಲಿ ಸಾರಿದೆ. ನೋಮ್ ಚಾಮ್‌ಸ್ಕಿ, ಅಮರ್ತ್ಯ ಸೇನ್ ಅರುಂದತಿ ರಾಯ್, ನಿವೃತ್ತ ನ್ಯಾಯಾಧೀಶ ರಾಜೇಂದರ್ ಸಾಚಾರ್, ಶ್ಯಾಮ್ ಬೆನೆಗಲ್, ಅಮ್ನೆಸ್ಟಿ ಇಂಟರ್‌ನ್ಯಾಷನಲ್, ಬ್ರಿಟನ್ನಿನ ಸಂಸದರು, ಸಾವಿರಾರು ವೈದ್ಯರು, ಲಕ್ಷಾಂತರ ಮಾನವ ಹಕ್ಕುಗಳ ಹೋರಾಟಗಾರರು ಬಿನಾಯಕ್ ಸೇನ್ ಎಂಬ ಜನಪರ ವೈದ್ಯನನ್ನು ಬಿಡುಗಡೆಗೊಳಿಸಬೇಕೆಂದು ಬೇಡಿದ್ದಾರೆ, ಪ್ರತಿಭಟಿಸಿದ್ದಾರೆ. .

ಆದರೆ ಅದ್ಯಾವುದೂ ಭಾರತ ಸರ್ಕಾರದ ಕಿವಿಗಾಗಲಿ, ಛತ್ತೀಸಗಡದ ಸರ್ಕಾರದ ಕಿವಿಗಾಗಲಿ ಇಲ್ಲಿಯತನಕ ಬಿದ್ದಿಲ್ಲ.

ಅದು ಭಾರತ ಎಂಬ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚ್ಚರಿ ಮೂಡಿಸುವಂತಹ ಸಂಗತಿಯೂ ಅಲ್ಲ ಬಿಡಿ. ಏಕೆಂದರೆ ಇದೇ ಮಹಾನ್ ಭಾರತದಲ್ಲಿ 20 ವರ್ಷಗಳ ಕಾಲ ಜನಪರವಾಗಿ ಅಹಿಂಸಾತ್ಮಕವಾಗಿ ನರ್ಮದಾ ಡ್ಯಾಂ ವಿರುದ್ಧ ಹೋರಾಡಿದ್ದ ಮೇಧಾ ಪಾಟ್ಕರ್ ಅವರಿಗೆ ಸಿಕ್ಕಿದ್ದು ಶೂನ್ಯ ಫಲಿತಾಂಶ. ಕಳೆದ ಏಳು ವರ್ಷಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವ ಮಣಿಪುರದ ಇರೊಮ್ ಶರ್ಮಿಳಾಳಿಗೂ ದಕ್ಕಿರುವುದು ಶೂನ್ಯ ಫಲಿತಾಂಶ. ಇನ್ನು ಕಳೆದ ಮೂವತ್ತು ವರ್ಷಗಳಿಂದ ಬಡವರ ಮತ್ತು ಆದಿವಾಸಿಗಳ ಪರವಾಗಿ ಶ್ರಮಿಸಿರುವ ಬಿನಾಯಕ್ ಸೇನ್ ಅವರಿಗೆ ವಿನಾಕಾರಣ ಜೈಲು ಶಿಕ್ಷೆ ವಿಧಿಸಿರುವುದು ಯಾವ ಅಚ್ಚರಿ?!

● ಗೌರಿ ಲಂಕೇಶ್

ಮೈಸೂರು: ವಿಕೃತಕಾಮಿ ಶ್ರೀಹರಿ ಪಾಠಕ್

▶▶▶ 9

ನಮಗ್ಯಾಕೆ?" ಎಂದುಕೊಂಡು ಸುಮ್ಮನಿದ್ದರು. ಆದರೆ ಯಾವಾಗ ನೇಹಳ ಪ್ರಕರಣ ಬಯಲಿಗೆ ಬಂತೋ ಅವರ ತಾಳ್ಮೆಯ ಕಟ್ಟೆಯೂ ಒಡೆದುಹೋಯಿತು. ಅವತ್ತು ವಿಜಯನಗರದ ಎರಡನೇ ಹಂತದಲ್ಲಿ ಆತ ಎಂದಿನಂತೆ ತನ್ನ ರಾಸಲೀಲೆಯಲ್ಲಿ ತೊಡಗಿದ್ದಾಗ ಸುತ್ತಮುತ್ತಲಿನ ಸುಮಾರು ಒಂದು ನೂರಕ್ಕೂ ಹೆಚ್ಚು ಜನ ಜಮಾಯಿಸಿ ಕಾಮುಕ ಶ್ರೀಹರಿ ಪಾಠಕ್‌ಗೆ ಧರ್ಮದೇಟು ನೀಡಿದ್ದಾರೆ. ಅಷ್ಟುಹೊತ್ತಿಗೆ ಪೊಲೀಸರಿಗೂ ಸುದ್ದಿ ಮುಟ್ಟಿ ಅವರೂ ದೌಡಾಯಿಸಿದ್ದಾರೆ. "ಸ್ಟೇಷನ್‌ನಲ್ಲಿ ವಿಚಾರಿಸುತ್ತೇವೆ" ಎಂದು ಜನಕ್ಕೆ ಹೇಳಿ ಶ್ರೀಹರಿಯನ್ನು ಕರೆದುಕೊಂಡು ಹೋಗಿದ್ದಾರೆ.


ಶ್ರೀಹರಿ ಪಾಠಕ್

ಅದಷ್ಟೇ ಜನರಿಗೆ ಗೊತ್ತಾಗಿದ್ದು. ಆಮೇಲೆ ಶ್ರೀಹರಿ ಪಾಠಕ್‌ನಿಂದ ಅದೆಷ್ಟು ಅಮೇಧ್ಯ ತಿಂದರೋ ಗೊತ್ತಿಲ್ಲ, ಆ ಕಾಮುಕನ ಪರವಾಗಿಯೇ ವರ್ತಿಸಲಾರಂಭಿಸಿದ್ದಾರೆ.

ಹೇಳಿಕೇಳಿ ಪಾಠಕ್ ದುಡ್ಡಿನ ಕುಳ. ಮಗನನ್ನು ರಕ್ಷಿಸಲು, ಕುಟುಂಬದ ಮತ್ತು ಕಂಪೆನಿಯ ಮಾನ ಉಳಿಸಿಕೊಳ್ಳಲು ಶ್ರೀಹರಿ ಪಾಠಕ್‌ನ ತಂದೆ ಜಯರಾಮ್ ಪಾಠಕ್ ವಿಜಯನಗರ ಠಾಣೆಯ ಇನ್ಸ್‌ಪೆಕ್ಟರ್ ವೆಂಕಟೇಶ್‌ಗೆ ಅದೆಷ್ಟು ದುಡ್ಡು ಕೊಟ್ಟರೋ ಗೊತ್ತಿಲ್ಲ. ಅಂತೂಇಂತೂ ಇನ್ಸ್‌ಪೆಕ್ಟರ್ ವೆಂಕಟೇಶ್ ಶ್ರೀಹರಿ ಪಾಠಕ್‌ನನ್ನು ರಕ್ಷಿಸುವುದಕ್ಕೆ ಮುಂದಾಗಿದ್ದಾನೆ. ಶ್ರೀಹರಿ ಪಾಠಕ್ ವಿರುದ್ಧ ಕಂಪ್ಲೇಂಟ್ ಕೊಡಲು ಹೋದ ಯುವಕರ ಮೇಲೆಯೇ ಐಪಿಸಿ ಸೆಕ್ಷನ್ 323, 504, 506 U/h 34 ಪ್ರಕಾರ ಕೇಸು ಜಡಿದಿದ್ದಾನೆ. ಆದರೆ ನಿಜವಾದ ಅಪರಾಧಿಯಾಗಿರುವ ಶ್ರೀಹರಿ ಪಾಠಕ್ ಮೇಲೆ ತೋರಿಕೆಗೆ 509 ಕೇಸು ಹಾಕಿದ್ದಾನೆ.

ಈ ಸಂದರ್ಭದಲ್ಲಿ ಪ್ರವೇಶ ಮಾಡಿದ್ದೇ ಕರ್ನಾಟಕ ರಕ್ಷಣಾ ವೇದಿಕೆ ಎಂಬ ಕನ್ನಡ ದ್ರೋಹಿಗಳ, ವಸೂಲಿ ವೀರರ ಪಡೆ. "ಕನ್ನಡ ಉಳಿಸುತ್ತೇವೆ, ಕನ್ನಡ ಬೆಳೆಸುತ್ತೇವೆ" ಎಂದು ಆಗಾಗ್ಗೆ ಬೊಬ್ಬೆಯಿಡುವ ಮೈಸೂರಿನ ಈ ವಸೂಲಿ ವೀರರಿಗೆಲ್ಲಾ ನಾಯಕನಾಗಿರುವ ಮೋಹನ ಕುಮಾರ್ ಗೌಡನಿಗೆ ಈ ವಿಚಾರ ಗೊತ್ತಾಗಿದ್ದೇ ತಡ ಕಾರ್ಯಪ್ರವೃತ್ತನಾಗಿದ್ದಾನೆ. ಆಗ ಈತ ಚೆನ್ನೈನಲ್ಲಿದ್ದ. ಪಾಠಕ್‌ನಂಥ ದುಡ್ಡಿನ ಗಣಿಯೊಂದಿಗೆ ಕೈಮಿಲಾಯಿಸಿದರೆ ಎಷ್ಟರಮಟ್ಟಿಗೆ ಗೆಬರಿಕೊಳ್ಳಬಹುದೆಂದು ಅಂದಾಜಿಸಿದ ಆತ ಚೆನ್ನೈನಿಂದಲೇ ದೂರವಾಣಿಯ ಮೂಲಕ ಜಯರಾಮ್ ಪಾಠಕ್‌ನೊಂದಿಗೆ ಮಾತನಾಡಿ ಡೀಲು ಕುದುರಿಸಿಕೊಂಡಿದ್ದಾನೆ. ನಂತರ ಅಲ್ಲಿಂದಲೇ ತನ್ನ ಕಾರ್ಯಾಚರಣೆ ಪ್ರಾರಂಭಿಸಿದ್ದಾನೆ.

ಆತ ಮೊದಲು ಫೋನು ಮಾಡಿದ್ದು ಶ್ರೀಹರಿ ಪಾಠಕ್ ವಿರುದ್ಧ ತಿರುಗಿಬಿದ್ದಿದ್ದ ಹುಡುಗರ ಮೇಲೆ. ಆರಂಭದಲ್ಲಿ "ರಾಜಿ ಮಾಡಿಸುತ್ತೇನೆ, ಅಷ್ಟೋ ಇಷ್ಟೋ ದುಡ್ಡು ಕೊಡಿಸುತ್ತೇನೆ" ಎಂದು ಅವರ ಮನವೊಲಿಸಲು ಪ್ರಯತ್ನಿಸಿದ. ಅದಕ್ಕವರು ಜಗ್ಗದಿದ್ದಾಗ ಭೂಗತ ಲೋಕದ ಪಾತಕಿಗಳನ್ನು ಒಬ್ಬೊಬ್ಬರನ್ನಾಗಿ ಸಂಪರ್ಕಿಸಿ ಅವರೊಂದಿಗೂ ಡೀಲು ಕುದುರಿಸಿಕೊಂಡ. ಆಗ ಎಂಟ್ರಿ ಮಾಡಿದ್ದು ಮೈಸೂರಿನ ಭೂಗತ ಲೋಕದ ಪಾತಕಿ ಅಪ್ಪಾ ಮಾದೇಶ.

ಕೊಲೆ, ಸುಲಿಗೆ, ಬಡ್ಡಿ ದಂಧೆಗಳಿಂದಲೇ ಕುಖ್ಯಾತಿಯಾಗಿರುವ ಕ್ರಿಮಿನಲ್ ಅಪ್ಪಾ ಮಾದೇಶ ಶ್ರೀಹರಿ ಪಾಠಕ್‌ನ ಫೋಟೋ ತೆಗೆಯಲು ಪ್ರಯತ್ನಿಸಿದ ಪತ್ರಿಕೆಯೊಂದರ ಕ್ಯಾಮರಾಮನ್‌ಗೆ ಎಲ್ಲರೆದುರೇ ಆವಾಜ್ ಹಾಕಿ ಬೆದರಿಸಿದ. ನಂತರ ಶ್ರೀಹರಿ ಪಾಠಕ್ ವಿರುದ್ಧ ನಿಂತ ಯುವಕರ ಮೇಲೆ ತನ್ನ ಗೂಂಡಾ ಪಡೆಯನ್ನು ಛೂಬಿಟ್ಟ.

ಇದೆಲ್ಲಾ ಪೊಲೀಸರ ಅರಿವಿಗೆ ಬಾರದಂತೆ ನಡೆದದ್ದೇನಲ್ಲ. ಜಯರಾಮ್ ಪಾಠಕ್‌ನಿಂದ ಆಗಲೇ ಬೇಕಾದಷ್ಟು ಅಮೇಧ್ಯ ತಿಂದಿದ್ದ ಪೊಲೀಸರಿಗೂ ಇದು ಬೇಕಾಗಿತ್ತು. ಅಪ್ಪಾ ಮಾದೇಶನಂಥ ಕ್ರಿಮಿನಲ್ ಮೂಲಕವೇ ಸ್ಟೇಶನ್ ಹೊರಗಡೆಯೇ ಅದು ಬಗೆಹರಿಯುವಂತೆ ಮಾಡುವುದಕ್ಕಾಗಿ ಅವರೂ ಉತ್ಸುಕರಾಗಿದ್ದರು. ತಮ್ಮ ಕಣ್ಣೆದುರಿಗೇ ಹೀಗೆ ಪೊಲೀಸರು ಮತ್ತು ಕ್ರಿಮಿನಲ್‌ಗಳು ಕೈಮಿಲಾಯಿಸಿ ಪಾಠಕ್ ಎಂಬ ಪಾತಕಿಯನ್ನು ರಕ್ಷಿಸುತ್ತಿದ್ದರೂ ಪೊಲೀಸ್ ಕಮೀಷನರ್ ಪರಶಿವಮೂರ್ತಿ ಮೌನವಾಗಿ ಕುಳಿತಿದ್ದಾರೆ.

ಇದನ್ನೆಲ್ಲಾ ನೋಡುತ್ತಿರುವ ಮೈಸೂರಿನ ಜನ ಇದೇನು ಪ್ರಜಾಪ್ರಭುತ್ವವಾ? ರೌಡಿ ರಾಜ್ಯವಾ? ಪೊಲೀಸ್ ರಾಜ್ಯವಾ? ಎಂದು ಕೇಳುತ್ತಿದ್ದಾರೆ. ಅದಕ್ಕೆ ಕಮೀಷನರ್ ಪರಶಿವಮೂರ್ತಿ ಉತ್ತರಿಸುತ್ತಾರೆಯೆ?

● ವರದಿಗಾರ

ಹೊಗಳಿಕೆ ತೆಗಳಿಕೆ

ಬಿ. ಎಂ. ಬಷೀರ್ ಅವರ ಇದಿನಬ್ಬ ಅವರ ಚುನಾವಣಾ ಅನುಭವ ಕಥನ, ನಾವು ಕಳೆದುಕೊಂಡ ಮೌಲ್ಯಗಳ ನೆನಪನ್ನು ಹೆಚ್ಚಿಸಿದೆ.

ಆ ಲೇಖನದ ಒಂದು ವಿವರಕ್ಕೆ ಪುಟ್ಟ ತಿದ್ದುಪಡಿ.

ಇದಿನಬ್ಬ ಅವರ ಠೇವಣಿ ಕಟ್ಟಿದವರ ಹೆಸರು ಪೈಲೂರು ಲಕ್ಷ್ಮಣ ಅಲ್ಲ, ಅವರ ಪೂರ್ಣ ಹೆಸರು ಪೈಲೂರು ಲಕ್ಷ್ಮೀನಾರಾಯಣರಾವ್. ಗಾಂಧಿವಾದಿಯಾಗಿದ್ದ ಅವರು ಮತ್ತು ಇದಿನಬ್ಬ ದಕ್ಷಿಣ ಕನ್ನಡ ಕೃಷಿಕರ ಸಹಕಾರಿ ಸಂಘದ ಬೆಳವಣಿಗೆಯಲ್ಲಿ ಸಕ್ರಿಯರಾಗಿದ್ದರು.

ಪೈಲೂರು ಅವರ ಬಗ್ಗೆ ಅವರ ಕುಟುಂಬದವರು ಮತ್ತು ಶಿವರಾಂ ಪೈಲೂರ್ ನೆರಳು ನೀಡಿದ ಮಾಮರ ಎಂಬ ಸ್ಮೃತಿ ಕೃತಿಯೊಂದನ್ನು ಪ್ರಕಟಿಸಿದ್ದಾರೆ.

ದ.ಕ. ಜಿಲ್ಲೆಯ ಪರಂಪರೆಯನ್ನು ಗಮನಿಸಿದರೆ, ಅಪಾರ ಸಜ್ಜನಿಕೆ, ಮಾನವೀಯ ಸಂಭ್ರಮದ ಅಲ್ಪಸಂಖ್ಯಾತ ನಾಯಕರು ಅರಳಿದ್ದಾರೆ. ಇದಿನಬ್ಬ, ಅಲ್ಬುಕರ್ಕ್, ಬ್ಲೇಸಿ, ಹೀಗೆ.

ಸಂಘ ಪರಿವಾರದ ruthless politics ನಿಂದಾಗಿ ಈಗ ಈ ತರದ ನಾಯಕರೇ ಅರಳದಂಥ ಸ್ಥಿತಿ ಅಲ್ಲಿ ನಿರ್ಮಾಣವಾಗಿದೆ.


ಬಷೀರ್ ನಿರೂಪಣೆ ಅಂತ ಮರುಸೃಷ್ಟಿಗೆ ನೀರೆರೆಯುವಂತಾಗಲಿ.

- ಕೆ.ಪಿ.ಸುರೇಶ, ಬೆಂಗಳೂರು

ಮೇ 6 ರ ಸಂಚಿಕೆಯಲ್ಲಿನ 'ಕಂಡಹಾಗೆ' ನಿಜಕ್ಕೂ ಸತ್ಯವಾಗಿದೆ. ಶೇ. 50 ರಷ್ಟು ಮತಗಳನ್ನು ಪಡೆಯದವರನ್ನು ನಮ್ಮ ಪ್ರತಿನಿಧಿಗಳೆಂದು ಒಪ್ಪಿಕೊಳ್ಳುವುದು ಇಂದಿನ ಜನತಂತ್ರದಲ್ಲಿ ಅನಿವಾರ್ಯವಾಗಿಬಿಟ್ಟಿದೆ. ಚುನಾವಣೆಗಳ ಬಗ್ಗೆ ಜನತೆಗಿರುವ ನಿರಾಸಕ್ತಿ (ಇದು ಸಹಜ) ಹಾಗು ಚುನಾವಣಾ ವ್ಯವಸ್ಥೆಯೊಳಗಿನ ಲೋಪಗಳು ಇದಕ್ಕೆ ಕಾರಣ. ಪ್ರಜೆಗಳಿಂದ, ಪ್ರಜೆಗಾಗಿ, ಪ್ರಜೆಗಳಿಗೋಸ್ಕರ ಎನ್ನುವ ಈ ವ್ಯವಸ್ಥೆಯಲ್ಲಿ ಯಾವ ಪ್ರಜೆಗಾಗಿ, ಯಾವ ಪ್ರಜೆಗಳಿಂದ ಯಾವ ಪ್ರಜೆಗಳಿಗೋಸ್ಕರ ಎಂಬುದು ಅರ್ಥವಾಗುತ್ತಿಲ್ಲ. ನನ್ನ ದೃಷ್ಟಿಯಲ್ಲಿ ಸಂಸತ್ತಿನ 542 ಜನ ಮತ್ತು 28 ರಾಜ್ಯದ ಸುಮಾರು 5000 ಕ್ಕೂ ಹೆಚ್ಚಿನ ಜನಪ್ರತಿನಿಧಿಗಳು ಮಾತ್ರ ಈ ದೇಶದ ಪ್ರಜೆಗಳು. ಇನ್ನು ನಾವೆಲ್ಲಾ....? ಇದು ವಿಷಾದ, ಹತಾಶೆ, ಅಸಹಾಯಕತೆಯ ಗಳಿಗೆ!

ಇರಲಿ. ಚೆನ್ನಾಗಿ ಪತ್ರಿಕೆ ತರುತ್ತಿರುವ ನಿಮಗೆ ಅಭಿನಂದನೆಗಳು.

-ಕು.ಸ. ಮಧುಸೂದನ, ರಂಗೇನಹಳ್ಳಿ



ಹ್ಯಾಟ್ರಿಕ್ ಹೊಡಿಮಗ

ಶಿವರಾಜ್‌ಕುಮಾರ್ ನಟಿಸಿರುವ 'ಹೊಡಿಮಗ' ಚಿತ್ರ ಕೊನೆಗೂ ಮುಂದಿನ ವಾರ ತೆರೆಕಾಣಲಿದೆ. ಸೆನ್ಸಾರ್ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಮತ್ತು ನಿರ್ಮಾಪಕ ಕುಮಾರ್ ನಡುವಿನ ಜಗಳದಿಂದಾಗಿ ಕಳೆದ ವಾರ ಈ ಚಿತ್ರ ತೆರೆ ಕಂಡಿರಲಿಲ್ಲ. ಈ ಚಿತ್ರದ ಟೈಟಲ್ 'ಹೊಡಿಮಗ' ಬದಲಾಯಿಸಬೇಕೆಂದು ಸೆನ್ಸಾರ್ ಮಂಡಳಿ ಅಧ್ಯಕ್ಷ ಚಂದ್ರಶೇಖರ್ ಆದೇಶ ನೀಡಿದ್ದರು. 'ಈ ಹಂತದಲ್ಲಿ ಯಾವುದೇ ಕಾರಣಕ್ಕೆ ನಾನು ಚಿತ್ರದ ಹೆಸರನ್ನು ಬದಲಾಯಿಸುವುದಿಲ್ಲ' ಎಂದು ನಿರ್ಮಾಪಕ ಕುಮಾರ್ ಪಟ್ಟುಹಿಡಿದು ಕುಳಿತಿದ್ದರು. ಕೊನೆಗೀಗ 'ಹ್ಯಾಟ್ರಿಕ್ ಹೊಡಿಮಗ' ಎಂಬ ಹೊಸ ಹೆಸರಿನಡಿಯಲ್ಲಿ ಈ ಚಿತ್ರ ತೆರೆಕಾಣುತ್ತಿದೆ. ಸೆನ್ಸಾರ್ ಮಂಡಳಿ ಅದಕ್ಕೆ ಒಪ್ಪಿಗೆ ನೀಡಿದೆ.

ಇಂತಹ ಬದಲಾವಣೆಯಿಂದ ಸೆನ್ಸಾರ್ ಮಂಡಳಿ ಏನು ಸಾಧಿಸಿದಂತಾಗುತ್ತದೆ ಎಂಬುದೇ ಅರ್ಥವಾಗುತ್ತಿಲ್ಲ. ಈ ಹಿಂದೆಯೂ ಸೆನ್ಸಾರ್ ಮಂಡಳಿ, ರಾಮು ನಿರ್ಮಾಣದ 'ಕಿರಣ್ ಬೇಡಿ'ಗೂ ತಕರಾರು ಎತ್ತಿತ್ತು. ಆಗ ರಾಮು 'ಕನ್ನಡದ ಕಿರಣ್ ಬೇಡಿ' ಎಂದು ತನ್ನ ಚಿತ್ರಕ್ಕೆ ಮರುನಾಮಕರಣ ಮಾಡಿ ಬಿಡುಗಡೆ ಮಾಡಿದ್ದರು.

ಅಷ್ಟೇಅಲ್ಲದೆ, ಉಪೇಂದ್ರ ಅಭಿನಯದ 'ಮಾಸ್ತಿ' ಮತ್ತು ಸುದೀಪ್ ಅಭಿನಯದ 'ಮದಕರಿ' ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದಾಗ ಅವುಗಳನ್ನು 'ಮಸ್ತಿ' ಮತ್ತು 'ವೀರ ಮದಕರಿ' ಎಂದು ಬದಲಾಯಿಸಿ ಬಿಡುಗಡೆ ಮಾಡಲಾಗಿತ್ತು.

ಅದೇನೇ ಇದ್ದರೂ, ಸೆನ್ಸಾರ್ ಮಂಡಳಿ ಮತ್ತು ನಿರ್ಮಾಪಕರ ನಡುವಿನ ಕೋಳಿ ಜಗಳ ತಮಾಷೆಯಾಗಿ ಕಾಣಿಸುತ್ತಿದೆ. ಈ ತಮಾಷೆಗೆ ಇತಿಶ್ರೀ ಹಾಡಬೇಕಾಗಿದೆ. ಇಲ್ಲದಿದ್ದರೆ ಸೆನ್ಸಾರ್ ಮಂಡಳಿ ತನ್ನ ಗೌರವವನ್ನು ಕಳೆದುಕೊಂಡಂತಾಗುತ್ತದೆ.

ರಂಗುರಂಗಾದ ಬಣ್ಣದ ಲೋಕ


ರತ್ನಜಾ

ಸುಮಾರು ಆರು ತಿಂಗಳ ನಂತರ ಬಣ್ಣದ ಲೋಕದಲ್ಲಿ ಅಲ್ಲಲ್ಲಿ ರಂಗು ಕಾಣಿಸುತ್ತಿದೆ. ಐದು ಹೊಸ ಚಿತ್ರಗಳು ಈ ವಾರ ಸೆಟ್ಟೇರಿರುವುದೇ ಇದಕ್ಕೆ ಕಾರಣ.

ಆದರೂ ಅದ್ದೂರಿಯೆನಿಸುವ ಬಹುತಾರಾಗಣದ ಚಿತ್ರಗಳು ಸೆಟ್ಟೇರಿಲ್ಲ. ಸದ್ಯಕ್ಕೆ ಹೊಸಬರದ್ದೇ ಕಾರುಬಾರು ನಡೆಯುತ್ತಿದೆ. 'ಮಂಡ್ಯದ ಹುಡುಗರು', 'ಪ್ರೇಮಿಸಂ', 'ಚಕ್ರವ್ಯೂಹ', 'ಕಳ್ಳರ ಸಂತೆ' ಮತ್ತು 'ಹೋರಿ' ಮೊನ್ನೆ ಮುಹೂರ್ತ ಕಂಡ ಹೊಸ ಚಿತ್ರಗಳು.

ಇದರಲ್ಲಿ 'ಪ್ರೇಮಿಸಂ' ಚಿತ್ರವನ್ನು 'ನೆನಪಿರಲಿ' ಖ್ಯಾತಿಯ ರತ್ನಜಾ ನಿರ್ದೇಶಿಸುತ್ತಿದ್ದಾರೆ ಎಂಬುದನ್ನು ಬಿಟ್ಟರೆ ಉಳಿದ ಚಿತ್ರಗಳ ಬಗ್ಗೆ ಹೇಳುವಂತಹ ವಿಶೇಷವೇನೂ ಇಲ್ಲ. ಆದರೂ ತುಂಬಾ ಸಮಯದ ನಂತರ ಐದು ಚಿತ್ರಗಳು ಒಂದೇ ವಾರದಲ್ಲಿ ಆರಂಭವಾಗಿರುವುದು ಗಾಂಧಿನಗರದಲ್ಲಿ ಸ್ವಲ್ಪ ಚಟುವಟಿಕೆಯನ್ನು ಸೃಷ್ಟಿಸಿದೆ.



ವಿನೋದ್ ಪ್ರಭಾಕರ್-ಗೌರಿ

ಹೆಸರಿನೊಂದಿಗೆ ಎಕ್ಸ್‌ಟ್ರಾ ಫಿಟ್ಟಿಂಗ್

ಟೈಗರ್ ಪ್ರಭಾಕರ್ ಮಗ ವಿನೋದ್ ಪ್ರಭಾಕರ್ ಒಂದೆರಡು ಚಿತ್ರಗಳಲ್ಲಿ ಕಾಣಿಸಿಕೊಂಡರೂ ಕಮರ್ಷಿಯಲ್ಲಾಗಿ ಅಂತಹ ಯಶಸ್ಸು ಕಂಡಿಲ್ಲ. ಪ್ರಭಾಕರ್ ತರಹವೇ ಒಳ್ಳೆಯ ಮೈಕಟ್ಟು, ಕಂಠ ಹೊಂದಿರುವ ವಿನೋದ್ ಕೆಲವು ಆ್ಯಂಗಲ್‌ಗಳಲ್ಲಿ ತಂದೆಯನ್ನೇ ಹೋಲುತ್ತಾನೆ. ಅಷ್ಟೇ ಅಲ್ಲ; ಅಪ್ಪನ ಮ್ಯಾನರಿಸಂನ್ನು ಕಾಪಿ ಮಾಡಿ ಥಿಯೇಟರ್‌ನಲ್ಲಿ ಅಭಿಮಾನಿಗಳಿಂದ ಚಪ್ಪಾಳೆ ಕೂಡಾ ಗಿಟ್ಟಿಸಿದ್ದಾನೆ. ಆದರೂ ಯಾಕೋ ಏನೋ ವಿನೋದ್ ಬಾಕ್ಸಾಫೀಸ್‌ನಲ್ಲಿ ಕ್ಲಿಕ್ ಆಗಲೇ ಇಲ್ಲ.

ಕೊನೆಗೀಗ ವಿನೋದ್ ಪ್ರಭಾಕರ್ ತನ್ನ ಹೆಸರನ್ನು ವಿನೋದ್ ಎಸ್. ಪ್ರಭಾಕರ್ ಎಂದು ಬದಲಾಯಿಸಿಕೊಂಡಿದ್ದಾನೆ. 'ಎಸ್' ಎಂದರೆ ಆತನ ತಾತ ಸುಂದರ್‌ರಾಜ್ ಹೆಸರಂತೆ. ನೋಡೋಣ ತಾತನ ಹೆಸರು ಕೂಡಿಬಂದ ನಂತರ ಮೊಮ್ಮಗನ ಅದೃಷ್ಟ ಖುಲಾಯಿಸುತ್ತದೋ ಏನೋ!

ಮತ್ತೆ ಬಂದ ಮಹಾರಾಣಿ


ಮಾಲಾಶ್ರೀ

ಮಾಲಾಶ್ರೀ ತನ್ನ ಜನಪ್ರಿಯತೆಯ ಉತ್ತುಂಗದ ಸ್ಥಾನದಲ್ಲಿದ್ದಾಗ 'ರಾಣಿ-ಮಹಾರಾಣಿ' ಎಂಬ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಪುರುಷ ಪ್ರಧಾನವಾದ ಸಿನಿಮಾಲೋಕದಲ್ಲಿ ಸಾಧಾರಣವಾಗಿ ನಾಯಕಿಯರಿಗೆ ದ್ವಿಪಾತ್ರ ಸಿಗುವುದು ಬಹಳ ಕಷ್ಟ. ಮಾಲಾಶ್ರೀ ನಂತರ ಪ್ರೇಮಾ 'ಮಾಯ ಬಜಾರ್' ಎಂಬ ಚಿತ್ರದಲ್ಲಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಆದರೆ ಸುಧಾರಾಣಿ, ಶ್ರುತಿ, ಭವ್ಯಾ ಮೊದಲಾದ ಪ್ರತಿಭಾವಂತ ನಟಿಯರಿಗೆ ಅಂತಹ ಅವಕಾಶ ಸಿಗಲೇ ಇಲ್ಲ. ಇತ್ತೀಚೆಗೆ ಬಂದ ರಮ್ಯಾ-ರಕ್ಷಿತಾ-ರಾಧಿಕಾ ಕೂಡಾ ದ್ವಿಪಾತ್ರದಿಂದ ವಂಚಿತರಾದವರೇ. ಈ ಗುಂಪಿನಲ್ಲಿ ಪೂಜಾ ಗಾಂಧಿ ಅದೃಷ್ಟವಂತೆ. ಸದ್ಯದಲ್ಲೇ ಆಕೆ ದ್ವಿಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ವಿಶೇಷವೆಂದರೆ ಅಂದು ಮಾಲಾಶ್ರೀಯನ್ನು ದ್ವಿಪಾತ್ರಕ್ಕೆ ಆಯ್ಕೆ ಮಾಡಿದ್ದ ನಿರ್ಮಾಪಕ ಜೈಜಗದೀಶ್ ಅವರೇ ಇವತ್ತು ಪೂಜಾಳ ಕಾಲ್‌ಶೀಟ್ ಪಡೆದಿದ್ದಾರೆ. ಬಿ.ರಾಮಮೂರ್ತಿ ನಿರ್ದೇಶಿಸಲಿರುವ ಈ ಚಿತ್ರದ ಹೆಸರೂ 'ರಾಣಿ-ಮಹಾರಾಣಿ'ಯಂತೆ!


ಪೂಜಾಗಾಂಧಿ


ಮಾಲಾಶ್ರೀಗೆ ಅದೃಷ್ಟ ಖುಲಾಯಿಸಿದಂತೆ ಪೂಜಾ ಗಾಂಧಿಗೂ ಈ ಚಿತ್ರ ಅದೃಷ್ಟ ತಂದುಕೊಡುತ್ತದೋ ನೋಡಬೇಕು.

ಸಿನಿ Bits

ಕಂಠ-ದಾನಮ್ಮ !

ಪೂಜಾ ಗಾಂಧಿ ಇದ್ದಕ್ಕಿದ್ದ ಹಾಗೆ ಮಹಾನ್ ದಾನಶೂರಳಾಗಿದ್ದಾಳೆ. ಆಕೆ ಮಾಡುತ್ತಿರುವುದು ಅಂತಿಂಥ ದಾನ ವಲ್ಲ... ಕಂಠದಾನ!


ಇತ್ತೀಚೆಗಷ್ಟೇ ಸ್ಟಂಟ್ ಮಾಸ್ಟರ್ ಜಾಲಿ ಬಾಸ್ಟಿನ್ ನಿರ್ದೇಶನದ 'ನಿನಗಾಗಿ ಕಾದಿರುವೆ' ಚಿತ್ರದಲ್ಲಿನ ತನ್ನ ಪಾತ್ರಕ್ಕಾಗಿ ತಾನೇ ಡಬ್ ಮಾಡಿದ್ದಳು ಪೂಜಾ ಗಾಂಧಿ. ದುರದೃಷ್ಟವಶಾತ್ ಪೂಜಾಳ ಕಂಠದಾನಕ್ಕಿಂತ ಆ ಚಿತ್ರದ ನಿರ್ದೇಶಕ ಜಾಲಿಯ ಕುಖ್ಯಾತಿಯೇ ಹೆಚ್ಚು ಸುದ್ದಿಯಾಗಿತ್ತು. ಇದರಿಂದ ಶ್ಯಾನೆ ಬೇಸರಗೊಂಡಿದ್ದ ಪೂಜಾ ಈಗ ತನ್ನ ನಟನೆಯ 'ಹುಚ್ಚಿ' ಎಂಬ ಚಿತ್ರಕ್ಕೂ ಸ್ವತಃ ತಾನೇ ಡಬ್ಬಿಂಗ್ ಮಾಡಿದ್ದಾಳೆ.



ನಮ್ಮ ಅನೇಕ ಕನ್ನಡತಿಯರು ಚಿತ್ರರಂಗಕ್ಕೆ ಬಂದು ವರ್ಷಗಳೇ ಕಳೆದರೂ ತಮ್ಮ ಪಾತ್ರಗಳಿಗೆ ಕಂಠದಾನ ಕಲಾವಿದರ ಮೊರೆ ಹೋಗುತ್ತಿರುವ ಇಂದಿನ ಸಂದರ್ಭದಲ್ಲಿ ಬೇರೆ ರಾಜ್ಯದಿಂದ ಬಂದಿರುವ ನಟಿಯೊಬ್ಬಳು ಇಷ್ಟು ಬೇಗನೆ ನಮ್ಮ ಕನ್ನಡವನ್ನು ಕಲಿತು ತನ್ನ ಕಂಠದಿಂದಲೇ ಅದರ ಕಂಪನ್ನು ಹೊಮ್ಮಿಸುತ್ತಿರುವುದು ಒಳ್ಳೆ ಬೆಳವಣಿಗೆ ಎಂಬುದೇನೋ ಸರಿ.

ಆದರೆ ಇದರ ಬೆನ್ನಿಗೇ ಪ್ರಶಸ್ತಿ ವಿತರಕ ಕಂ ನಿರ್ದೇಶಕ ರಮೇಶ್ ಸುರ್ವೆ ಪೂಜಾ ಗಾಂಧಿಗೆ 'ಕನ್ನಡದ ಕಂಠ ದಾನಮ್ಮ' ಎಂಬ ಬಿರುದನ್ನು ನೀಡಲು ಸಕಲ ಸಿದ್ಧತೆಯನ್ನು ನಡೆಸುತ್ತಿದ್ದಾರೆ ಎಂಬ ಮಾತು ಕುಹಕಿಗಳ ಅಪಪ್ರಚಾರದಂತೆ ಕೇಳಿಬರುತ್ತಿದೆ!

ಖಳನಟನ ಕನ್ನಡ ಪ್ರೇಮ



ಕನ್ನಡ, ತಮಿಳು, ತೆಲುಗು, ಒರಿಯಾ, ಮಣಿಪುರಿ ಸೇರಿದಂತೆ ದೇಶದ ನಾನಾಭಾಷೆಗಳ ಚಿತ್ರಗಳಲ್ಲಿ ನಾಯಕನಾಗಿ, ಖಳನಾಯಕನಾಗಿ ಮಿಂಚಿರುವ ಸತ್ಯಪ್ರಕಾಶ್ ಎಂಬ ಪ್ರತಿಭೆ ಈಗ ಕನ್ನಡ ಚಿತ್ರಗಳನ್ನು ನಿರ್ದೇಶಿಸಲು ಮುಂದಾಗಿದೆ. ಇದಕ್ಕಾಗಿ ಅವರು ಒಂದಲ್ಲಾ, ಎರಡಲ್ಲಾ ಅಮೋಘ ಮೂರು ಕಥೆಗಳನ್ನು ಸಿದ್ಧಪಡಿಸಿ ಕೊಂಡಿದ್ದಾರಂತೆ. ಎಲ್ಲ ಸರಿಹೋದರೆ ತಮ್ಮ ಮೊದಲ ಚಿತ್ರವನ್ನು ರಾಕ್‌ಲೈನ್ ವೆಂಕಟೇಶ್ ನಿರ್ಮಿಸಲಿದ್ದಾರೆ ಎಂದು ಸ್ವತಃ ಸತ್ಯಪ್ರಕಾಶ್ ಅವರೇ ಘೋಷಿಸಿದ್ದಾರೆ.

'ಪೊಲೀಸ್ ಸ್ಟೋರಿ' ಚಿತ್ರದ ಮೂಲಕ ಕನ್ನಡಕ್ಕೆ ಎಂಟ್ರಿ ನೀಡಿದ, ಕನ್ನಡದ ಬಗೆಗಿನ ಅಭಿಮಾನದಿಂದ ಭಾಷೆಯನ್ನೂ ಕಲಿತ ಸತ್ಯಪ್ರಕಾಶ್ ತೆರೆಯ ಮೇಲೆ ನಾಯಕಿಯನ್ನು ಪೀಡಿಸುವ ಖಳನಾಗಿ ಕಾಣಿಸಿಕೊಂಡರೂ ತಮ್ಮ ಚೊಚ್ಚಲ ನಿರ್ದೇಶನದ ಚಿತ್ರ ಮಹಿಳಾ ಪ್ರಧಾನವಾಗಿರುತ್ತದೆ ಎಂದಿದ್ದು ವಿಶೇಷ.

ನಮೋ ವೆಂಕಟೇಶ

ಸುನಿಲ್ ಕುಮಾರ್ ದೇಸಾಯಿಯವರ 'ಕಾರ್ಮುಗಿಲು' ಎಂಬ ಕಲಾತ್ಮಕ ಚಿತ್ರದ ಮೂಲಕ ನಾಯಕನಾದ ರಾಮ್ ಮೊನ್ನೆಮೊನ್ನೆ ಬಿಡುಗಡೆಯಾದ 'ಮೇಘವೇ ಮೇಘವೇ' ಚಿತ್ರದಲ್ಲೂ ನಾಯಕನಾಗಿ ನಟಿಸಿ ವಿಮರ್ಶಕರ ಮೆಚ್ಚುಗೆ ಪಡೆದರೂ ಆತನಿಗೆ ಚಿತ್ರರಂಗದಲ್ಲಿ ಭದ್ರವಾಗಿ ಕಾಲೂರಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಈಗ ರಾಮ್ ತಿಮ್ಮಪ್ಪನ ಮೊರೆ ಹೋಗಿ 'ನಮೋ ವೆಂಕಟೇಶ' ಎನ್ನುತ್ತಿದ್ದಾರೆ.


ರಾಮ್

ಹೊಸ ನಿರ್ದೇಶಕ ರಾಮಯ್ಯ 'ನಮೋ ವೆಂಕಟೇಶ'ನನ್ನು ನಿರ್ದೇಶಿಸುತ್ತಿದ್ದಾರೆ. ಈ ಹಿಂದೆ ಜಗ್ಗೇಶ್ ಅಭಿನಯದ 'ಕೋಡಗನ ಕೋಳಿ ನುಂಗಿತ್ತಾ' ಎಂಬ ಚಿತ್ರವನ್ನು ಇವರು ನಿರ್ಮಿಸಿದ್ದರಾದರೂ, ಕೋಡಗ-ಕೋಳಿ ಎರಡೂ ಜೊತೆಗೂಡಿ ರಾಮಯ್ಯನವರ ಬಂಡವಾಳವನ್ನೇ ನುಂಗಿಹಾಕಿದ್ದವು. ಹೀಗಾಗಿ ಈ ಬಾರಿ ಯಾವ ಕೋಡಗಗಳನ್ನೂ ನಂಬಬಾರದು ಎಂದು ತೀರ್ಮಾನಿಸಿ ಸ್ವತಃ ತಾವೇ ನಿರ್ದೇಶನಕ್ಕೆ ಇಳಿದಿದ್ದಾರೆ ರಾಮಯ್ಯ.


ಬರಲಿರುವ 'ವೆಂಕಟೇಶ' ಇವರ ಭಕ್ತಿಗೆ ಒಲಿದು ''ನಮೋ' ಎನ್ನುತ್ತಾನೋ ಅಥವಾ 'ಗೋವಿಂದ' ಎನ್ನುವಂತೆ ಮಾಡುತ್ತಾನೋ ಅವರ ಪ್ರತಿಭೆಯೇ ನಿರ್ಧರಿಸಬೇಕು.

Regd. No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 13-05-2009 RNI No. KARKAN2005/1464

ಪ್ರಜ್ವಲ್ ಪರದಾಟ

ಯಾಕೋ ಏನೋ ಪ್ರಜ್ವಲ್‌ನ ನಸೀಬು ಎಕ್ಕುಟ್ಟಿಹೋದಂತೆ ಕಾಣುತ್ತಿದೆ. ಹಲವಾರು ರೀತಿಯ ಗರಂಗರಂ ಗಾಸಿಪ್ಪುಗಳಿಗೆ ಗುರಿಯಾಗಿ ತತ್ತರಿಸಿದ್ದ ಪ್ರಜ್ವಲ್‌ನ ಸಿನಿಮಾಗಳೂ ಒಂದರ ಹಿಂದೆ ಒಂದು ದಬ್ಬಾಕಿಕೊಳ್ಳುತ್ತಿರುವುದು ಆತನನ್ನು ಮತ್ತಷ್ಟು ಚಿಂತೆಗೀಡುಮಾಡಿದೆ.

ಹಾಗೆನೋಡಿದರೆ, ಈತ ನಟಿಸಿದ ಯಾವ ಚಿತ್ರವೂ ಅಂಥಾ ಯಶಸ್ಸನ್ನು ಕಂಡಿಲ್ಲ. 'ಸಿಕ್ಸರ್' ಎಂಬ ಚಿತ್ರ ಸಾಧಾರಣವಾಗಿ ಓಡಿತಾದರೂ ಆನಂತರ ಬಂದ 'ಮೆರವಣಿಗೆ', 'ಗುಲಾಮ', 'ಗಂಗೆ ಬಾರೆ ತುಂಗೆ ಬಾರೆ' .... ಎಲ್ಲಾ ತೋಪುತೋಪೇ.



ಈ ನಡುವೆ ಪ್ರಜ್ವಲ್ ನಟಿಸಿದ್ದ ಎರಡು ಚಿತ್ರಗಳು ಅರ್ಧಕ್ಕೇ ನಿಂತು ಆತನನ್ನು ಪಿಶಾಚಿಗಳಂತೆ ಕಾಡುತ್ತಿವೆ. ಸುನಿಲ್ ಕುಮಾರ್ ದೇಸಾಯಿ ನಿರ್ದೇಶನದ 'ಸರಿಗಮ' ಬಂಡವಾಳದ ಕೊರತೆಗೆ ಸಿಲುಕಿ ಸ್ಥಗಿತಗೊಂಡಿದೆ. ಇನ್ನು ಕಳೆದ ತಿಂಗಳಷ್ಟೇ ಶುರುವಾದ 'ಸೂಪರ್ ಮ್ಯಾನ್'ನ ಕಥೆಯೇ ಸಿಕ್ಕಾಪಟ್ಟೆ ದೊಡ್ಡದು! ಅಂದರೆ, ಸುಮಾರು ಮೂರು ಸಿನಿಮಾಗಳಿಗಾಗುವಷ್ಟು ಸರಕನ್ನು ಹೊಂದಿದೆ ಆ ಚಿತ್ರದ ಕಥೆ.



ಸಿನಿಮಾದ ಎಬಿಸಿಡಿ ಗೊತ್ತಿಲ್ಲದ ಆದರ ನಿರ್ದೇಶಕ ಪ್ರಭಾ ಎಂಬಾತ ಮುಹೂರ್ತದ ದಿನದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ಬಗ್ಗೆ "ಬೆಬ್ಬೆಬ್ಬೆ..." ಎಂದು ಬಿಕ್ಕಳಿಸಿದಾಗಲೇ ಆತನ ಸಾಮರ್ಥ್ಯದ ಬಗ್ಗೆ ಒಂಥರಾ ಅನುಮಾನ ಹುಟ್ಟಿಕೊಂಡಿತ್ತು. ಈಗದು ನಿಜವಾಗಿದೆ.

ಮೂರ್ನಾಲ್ಕು ಚಿತ್ರಗಳಿಗಾಗುವಷ್ಟು ಉದ್ದನೆಯ ಚಿತ್ರಕಥೆಯನ್ನು ಬರೆದಿದ್ದಾನಂತೆ ಪ್ರಭಾ ಎಂಬ 'ಪ್ರತಿಭಾವಂತ'. ಆ ಕಾರಣಕ್ಕಾಗಿಯೇ ಈ ಚಿತ್ರಕ್ಕೆಂದು ನಿರ್ಮಾಪಕ ಎತ್ತಿಟ್ಟಿದ್ದ ಒಂದು ಕೋಟಿ ರೂಪಾಯಿ ಬಜೆಟ್ಟು ಕೇವಲ ಹತ್ತೊಂಭತ್ತು ದಿನದ ಚಿತ್ರೀಕರಣಕ್ಕೇ ಖಾಲಿಯಾಗಿದೆ. ಇನ್ನು ಪ್ರಭಾ ಬರೆದಿಟ್ಟಿರುವ ಅಷ್ಟೂ ಸ್ಕ್ರಿಪ್ಟನ್ನು ಚಿತ್ರೀಕರಿಸಲು ಏನಿಲ್ಲವೆಂದರೂ ನಾಲ್ಕೈದು ಕೋಟಿ ಹಣ ಬೇಕಂತೆ. ಹೀಗಾಗಿ 'ಸೂಪರ್ ಮ್ಯಾನ್' ಸದ್ಯಕ್ಕೆ ಸೆಟೆದುನಿಲ್ಲುವ ಯಾವ ಲಕ್ಷಣಗಳೂ ಕಾಣುತ್ತಿಲ್ಲ.

ಇನ್ನು ಪ್ರಜ್ವಲ್ ನಾಯಕನಾಗಿ ನಟಿಸಿರುವ 'ಕೆಂಚ' ಚಿತ್ರೀಕರಣ ಮುಗಿಸಿದ್ದರೂ ಇನ್ನೂ ಡಬ್ಬಾದಲ್ಲೇ ಕೂತಿದೆ. 'ನನ್ನವನು' ಅನ್ನೋ ಚಿತ್ರದ್ದೂ ಇದೇ ಕತೆಯಿದ್ದಂತೆ ಕಾಣುತ್ತಿದೆ. ಇದೆಲ್ಲದರ ನಡುವೆ 'ಜೀವಾ' ಅನ್ನೋ ಚಿತ್ರ ಮಾತ್ರ ನಿರಂತರವಾಗಿ ಚಿತ್ರೀಕರಣಗೊಂಡು ಪ್ರಜ್ವಲ್‌ನ ಜೀವ ಉಳಿಸುತ್ತಿರುವಂತೆ ಕಾಣಿಸುತ್ತಿದೆ.



ಶ್ರೀಶಾಂತ್‌ನಿಂದ ಬೈಸಿಕೊಂಡ ಡೈಸಿ



ಡೈಸಿ ಬೋಪಣ್ಣ ಎಂಬ ಕೊಡಗಿನ ಚೆಲುವೆ ಸುದ್ದಿ ಮಾಡಿದ್ದಾಳೆ. ಕಳೆದ ಏಳೆಂಟು ತಿಂಗಳುಗಳಿಂದ ಆಕೆ ಒಂದೇ ಒಂದು ಕನ್ನಡ ಚಿತ್ರಕ್ಕೆ ಸಹಿ ಮಾಡಿಲ್ಲ. ಆಕೆ ನಟಿಸಿದ್ದ ಒಂದೇ ಒಂದು ಕನ್ನಡ ಚಿತ್ರ ಬಿಡುಗಡೆಯಾಗಿಲ್ಲ. ಹೀಗಾಗಿ ಡೈಸಿ ಬೋಪಣ್ಣ ಎಂಬ ನಾಯಕಿ ಇದ್ದುದ್ದನ್ನೇ ಕನ್ನಡ ಪ್ರೇಕ್ಷಕರು ಮರೆತಂತಿದೆ. ಆದರೆ ಜನ ತನ್ನನ್ನು ಹಾಗೆ ಮರೆಯಬಾರದೆಂದೇ ಈ ಡೈಸಿ ಮೊನ್ನೆ ಇಂಗ್ಲಿಷ್ ಪತ್ರಿಕೆಯೊಂದರಲ್ಲಿ ಸ್ಪೈಸಿ ಗಾಳಿ ಸುದ್ದಿಯನ್ನು ಹರಿದಿ ಬಿಟ್ಟಿದ್ದಾಳೆ. ಅದರಲ್ಲಿ "ನನ್ನ ಮತ್ತು ಮಾಜಿ ಟೆಸ್ಟ್ ಕ್ರಿಕೆಟ್ ಆಟಗಾರ ಪ್ಲೇಬಾಯ್ ಖ್ಯಾತಿಯ ಶ್ರೀಶಾಂತ್ ನಡುವಿನ ಸಂಬಂಧ ಸ್ನೇಹಕ್ಕೆ ಮೀರಿದ್ದು" ಎಂದು ಆಕೆ ಹೇಳಿದ್ದಾಳೆ.

ಆದರೆ ಮರುದಿನವೇ "ನನಗೂ, ಅವಳಿಗೂ ಯಾವುದೇ ಸಂಬಂಧ ಇಲ್ಲ" ಎಂದು ದಕ್ಷಿಣಾ ಆಫ್ರಿಕಾದಿಂದ ಶ್ರೀಶಾಂತ್ ಉತ್ತರಿಸಿದ್ದಾನೆ. ಅಷ್ಟೇ ಅಲ್ಲ "ಡೈಸಿ ನನ್ನ ತಂಟೆಗೆ ಬರದಿರಲಿ" ಎಂಬ ಎಚ್ಚರಿಕೆಯನ್ನೂ ನೀಡಿದ್ದಾನೆ.

ಕನ್ನಡ ಸಿನಿಮಾ ವೀಕ್ಷಕರು ಈಗಾಗಲೇ ಡೈಸಿಯನ್ನು ತಿರಸ್ಕರಿಸಿದ್ದಾರೆ. ಹಾಗೆಯೇ ಕ್ರಿಕೆಟ್ ಅಭಿಮಾನಿಗಳು ಶ್ರೀಶಾಂತ್‌ನನ್ನು ಎಂದೋ ಮರೆತಿದ್ದಾರೆ. ಆದ್ದರಿಂದ ಇದು ಪಬ್ಲಿಸಿಟಿ ಸ್ಟಂಟ್ ಅಲ್ಲದೇ ಬೇರೇನೂ ಅಲ್ಲ ಎಂಬುದು ಸ್ಪಷ್ಟ.

ಇಂತಹ ಕೀಳುಮಟ್ಟದ ಪ್ರಚಾರ ಡೈಸಿಗೆ ಬೇಕಿತ್ತೇ?

ಅಮೂಲ್ಯಳ ಮಾತಿನ ಮೌಲ್ಯ!

'ಅಮೂಲ್ ಬೇಬಿ' ತರಹದ ಅಮೂಲ್ಯ 'ಠಾಗಿ ಮಾಲ್ಟ್'ನಂತಿರುವ ತನ್ನ ಅಣ್ಣನೊಂದಿಗೆ ಸೇರಿ ಹೊಸ ಕತ್ತರಿ ಕಂಪನಿ ಶುರುಮಾಡಿ, ಚೆಲುವಿನ ಚಿತ್ತಾರ ಬಿಡಿಸಲು ಹೊರಟಿದ್ದಾಳೆ!

ಕತ್ತರಿ ಕಂಪನಿ ಎಂದಾಕ್ಷಣ ವಿಲ್ಕಿನ್ಸ್ ಶಾಸ್ತ್ರಿಯ ಬ್ಲೇಡ್ ಕಂಪನಿಯನ್ನು ಕಲ್ಪಿಸಿಕೊಂಡರೆ ನಿಮ್ಮ ಊಹೆ ತಪ್ಪು! ಯಾಕೆಂದರೆ ಅಮೂಲ್ಯ ಆರಂಭಿಸಿರುವುದು 'ಸಿನಿ ಸ್ಪರ್ಶ' ಅನ್ನೋ ಎಡಿಟಿಂಗ್ ಕಂಪನಿಯನ್ನು.

ಅತಿ ಚಿಕ್ಕ ವಯಸ್ಸಿಗೇ ತನಗೆ ಹೀರೋಯಿನ್ ಪಟ್ಟ ಕರುಣಿಸಿದ, ಜೊತೆಗೆ ಸಿಕ್ಕಾಪಟ್ಟೆ ಅಭಿಮಾನಿಗಳನ್ನೂ ಕೊಟ್ಟಿರುವ ಕನ್ನಡ ಚಿತ್ರರಂಗಕ್ಕೆ ಏನಾದರೂ ಗಿಫ್ಟ್ ಕೊಡಬೇಕು ಅಂತ ಅಮೂಲ್ಯಳಿಗೆ ತುಂಬಾ ಆಸೆಯಾಯಿತಂತೆ. ಆ ಕಾರಣಕ್ಕೇ ಆಕೆ ತನ್ನ ಅಣ್ಣನೊಂದಿಗೆ ಸೇರಿ ಸಂಕಲನ ಸ್ಟುಡಿಯೋವನ್ನು ಆರಂಭಿಸಿದಳಂತೆ. ಹಾಗಂತ ಆಕೆಯೇ ಮೊನ್ನೆ ಹೇಳಿದಳು.

ಇದನ್ನು ಕೇಳಿ ಪತ್ರಕರ್ತರೊಬ್ಬರು "ನೀನು ನಟಿಸಿದ ಚಿತ್ರಗಳನ್ನೆಲ್ಲಾ ನಿಮ್ಮ ಸ್ಟುಡಿಯೋದಲ್ಲೇ ಎಡಿಟಿಂಗ್ ಮಾಡಬೇಕು ಅಂತೇನಾದರೂ ಕಂಡೀಷನ್ ಇದೆಯಾ?" ಎಂದು ಕೇಳಿದಾಕ್ಷಣ ಆಕೆ "ಇಲ್ಲಪ್ಪಾ, ನಂಗೂ ಈ ಸ್ಟುಡಿಯೋಗೂ ಸಂಬಂಧವೇ ಇಲ್ಲ. ಅದೇನಿದ್ದರೂ ನನ್ನ ಅಣ್ಣಾ ದೀಪಕ್‌ಗೆ ಸೇರಿದ ವ್ಯವಹಾರ" ಎಂದು ಪ್ಲೇಟ್ ಚೇಂಜ್ ಮಾಡಿದಳು.

ಮೊದಲು "ಇದು ನನ್ನ ಗಿಫ್ಟು ಕೊಡುಗೆ" ಎಂದೆಲ್ಲಾ ಬಡಬಡಾಯಿಸಿದ ಅಮೂಲ್ಯ ಇದ್ದಕ್ಕಿದ್ದಂತೆ "ನನಗೂ, ಇದಕ್ಕೂ ಸಂಬಂಧವೇ ಇಲ್ಲ" ಎಂದು ಹೇಳಿದ್ದು ಎಲ್ಲರನ್ನೂ ಅಚ್ಚರಿಗೀಡುಮಾಡಿತು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44